# ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜುಲೈ 21 ಭಾನುವಾರ 2024

45

ಸಂಪುಟ: 45 | ಸಂಚಿಕೆ: 96 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com



# ಕಾವೇರಿ ಸೇರಿ ಎಲ್ಲಾ ನದಿ ಪಾತ್ರದ ಕೆರೆಗಳ ತುಂಬಿಸುವ ಕಾರ್ಯ

- ಜಲ ಸಂಪನ್ಮೂಲ ಸಚಿವರೂ ಆದ ಡಿಸಿಎಂ ಡಿ.ಕೆ.ಶಿವಕುಮಾರ್ ಸೂಚನೆ
- ಸದ್ಯದಲ್ಲೇ ಕೃಷಿ ಚಟುವಟಿಕೆಗೆ ಅನುಕೂಲವಾಗಿ ನಾಲೆಗೂ ನೀರು

**ಬೆಂಗಳೂರು, ಜು.20(ಕೆಎಂಶಿ)–**ಕಾವೇರಿ, ಕೃಷ್ಣ ಸೇರಿದಂತೆ ರಾಜ್ಯದ ಎಲ್ಲಾ ನದಿ ಪಾತ್ರದಲ್ಲಿರುವ ಕೆರೆಗಳಿಗೆ ನೀರು ಹರಿಸಲು ಸೂಚನೆ ನೀಡಲಾಗಿದೆ ಎಂದು ಜಲಸಂಪನ್ಮೂಲ ಖಾತೆಯನ್ನೂ ಹೊಂದಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇಂದಿಲ್ಲಿ ತಿಳಿಸಿದ್ದಾರೆ.



ಡಿ.ಕೆ.ಶಿವಕುಮಾರ್

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಬ್ಬು, ಭತ್ತ ಸೇರಿದಂತೆ ಕೃಷಿ ಚಟುವಟಿಕೆಗೆ ನೀರು ಹರಿಸುವ ಬಗ್ಗೆ ಇನ್ನೂ ಯಾವುದೇ ತೀರ್ಮಾನ ಕೈಗೊಂಡಿಲ್ಲ. ರಾಜ್ಯದಲ್ಲಿ ಉತ್ತಮ ಮಳೆಯಾಗಿ ನಮ್ಮ ಜಲಾಶಯಗಳಿಗೆ ಭಾರೀ ಪ್ರಮಾಣದಲ್ಲಿ ನೀರು ಹರಿದುಬರುತ್ತಿದ್ದು, ಬಹುತೇಕ ಜಲಾಶಯಗಳು ಭರ್ತಿ ಆಗುವ ಹಂತದಲ್ಲಿವೆ. ಈ ಮಧ್ಯೆ ಕೆರೆಗಳನ್ನು ತುಂಬಿಸಿ ಜಲಮೂಲ ಸಂವೃದ್ಧಿಸಲು ಮೊದಲ ಹಂತದ ತೀರ್ಮಾನ ಕೈಗೊಂಡಿದ್ದೇವೆ.

ಕೃಷಿ ಚಟುವಟಿಕೆಗೆ ನೀರು ಹರಿಸುವ ಸಂಬಂಧ ಜಲಾಶಯಗಳಲ್ಲಿನ ನೀರಿನ ಮಟ್ಟ ನೋಡಿಕೊಂಡು ಮುಂದಿನ ದಿನಗಳಲ್ಲಿ ನಾಲೆಗಳಿಗೆ ನೀರು ಹರಿಸಲಾಗುವುದು. ಕೃಷ್ಣರಾಜ ಸಾಗರ ಜಲಾಶಯ ಭರ್ತಿ ಹಂತದಲ್ಲಿದೆ, ಮುನ್ನೆಚ್ಚರಿಕೆಯಾಗಿ ಕೆಳಭಾಗದಲ್ಲಿರುವ ನದಿ ಪಾತ್ರದ ಗ್ರಾಮಗಳು ಮತ್ತು ಜನರಿಗೆ ಸೂಚನೆ ನೀಡಲಾಗಿದೆ ಎಂದರು. ಭಾರಿ ಮಳೆಯಿಂದ ಕೆಲವೆಡೆ ಭೂಕುಸಿತ ಉಂಟಾಗಿದ್ದು, ಅಂತಹ ಕಡೆಗಳಲ್ಲಿ ಯುದ್ಧೋಪಾದಿಯಲ್ಲಿ ಪರಿಹಾರ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವುದಲ್ಲದೆ, ಸಚಿವರುಗಳನ್ನು ನಿಯೋಜಿಸಲಾಗಿದೆ ಎಂದರು.



**ಸದ್ಯವೇ ಸ್ಥಳೀಯ ಸಂಸ್ಥೆ ಚುನಾವಣೆ:** ಜಿಲ್ಲಾ, ತಾಲೂಕು ಪಂಚಾಯತ್ ಹಾಗೂ ನಗರಪಾಲಿಕೆಗಳಿಗೆ ಚುನಾವಣೆ ಯಾವುದೇ ಸಮಯದಲ್ಲಿ ಎದುರಾಗಲಿದ್ದು, ಈ ಹಿನ್ನೆಲೆಯಲ್ಲಿ ಪಕ್ಷ ■ 6ನೇ ಪುಟಕ್ಕೆ



# ಮುಡಾ ಹಗರಣ: ಸಿದ್ದರಾಮಯ್ಯ ದಂಪತಿ ಸೇರಿ 6 ಮಂದಿ ವಿರುದ್ಧ ಲೋಕಾಯುಕ್ತಕ್ಕೆ ಬಿಜೆಪಿ ಮುಖಂಡ ದೂರು

**ಬೆಂಗಳೂರು, ಜು.20–** ಮುಡಾ ಹಗರಣಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಅವರ ಪತ್ನಿ ಬಿ.ಎಂ.ಪಾರ್ವತಿ ಸೇರಿ ಆರು ಮಂದಿ ವಿರುದ್ಧ ಲೋಕಾಯುಕ್ತಕ್ಕೆ ಬಿಜೆಪಿ ಮುಖಂಡ ಎನ್.ಆರ್.ರಮೇಶ್ ದೂರು ನೀಡಿದ್ದಾರೆ.



ಮುಖ್ಯಮಂತ್ರಿ ಸಿದ್ದರಾಮಯ್ಯ, ಅವರ ಪತ್ನಿ ಪಾರ್ವತಿ, ಇವರ ಸಹೋದರ ಬಿ.ಎಂ. ಮಲ್ಲಿಕಾರ್ಜುನಸ್ವಾಮಿ ಮುಡಾದ ಮಾಜಿ ಅಧ್ಯಕ್ಷರಾದ ಸಿ.ಬಸವೇಗೌಡ, ಹೆಚ್.ವಿ. ರಾಜೀವ್ ಹಾಗೂ ಆಯುಕ್ತರಾಗಿದ್ದ ಡಿ.ಬಿ.ನಟೇಶ್ ವಿರುದ್ಧ ಅಧಿಕಾರ ದುರುಪಯೋಗ, ವಂಚನೆ ಹಾಗೂ ಭ್ರಷ್ಟಾಚಾರ ಆರೋಪದಡಿ ಎನ್.ಆರ್.ರಮೇಶ್ ದೂರು ದಾಖಲಿಸಿದ್ದಾರೆ. ವಿಜಯನಗರ 3 ಮತ್ತು 4ನೇ ಹಂತದ ಬಡಾವಣೆಗಳಲ್ಲಿ ಒಟ್ಟು 38,284 ಚದರ ಅಡಿ ವಿಸ್ತೀರ್ಣದ 14 ನಿವೇಶನಗಳನ್ನು ಬದಲಿ ನಿವೇಶನದ ಹೆಸರಿನಲ್ಲಿ ಬಿ.ಎಂ.ಪಾರ್ವತಿಯವರ ಹೆಸರಿಗೆ 2021–2022ರಲ್ಲಿ ಕಾನೂನಿನ

## ಸಿದ್ದರಾಮಯ್ಯ ಪ್ರಭಾವ ಬಳಸಿ ಲಾಭ ಮಾಡಿಕೊಂಡಿರುವ ಆರೋಪ





ಎಲ್ಲಾ ನಿಯಮಗಳನ್ನು ಮೀರಿ ಹಂಚಿಕೆ ಮಾಡಲಾಗಿದೆ ಎಂದು ದೂರಿನಲ್ಲಿ ಎನ್.ಆರ್.ರಮೇಶ್ ಆಪಾದಿಸಿದ್ದಾರೆ.

**ವಿವರ:** ಮುಡಾ ದೇವನೂರು 3ನೇ ಹಂತದ ಬಡಾವಣೆ ನಿರ್ಮಾಣಕ್ಕೆಂದು 31/10/1997ರಂದು ಮೈಸೂರು ತಾಲೂಕು, ಕಸಬಾ ಹೋಬಳಿಯ ಕೆಸರೆ ಗ್ರಾಮ ಮತ್ತು ಅದರ ಸುತ್ತಮುತ್ತಲ ಪ್ರದೇಶಗಳಲ್ಲಿ ನೂರಾರು ಎಕರೆ ಜಮೀನುಗಳನ್ನು ಭೂಸ್ವಾಧೀನ ಮಾಡಿಕೊಂಡಿದೆ. ಇದರ ಪೈಕಿ ಕೆಸರೆ ಗ್ರಾಮದ ಸರ್ವೆ ನಂ: 464ರ 3.16 ಎಕರೆ ಜಾಗವನ್ನು ಅದರ ಮಾಲೀಕ ನಿಂಗ ■ 6ನೇ ಪುಟಕ್ಕೆ

ಮೈಸೂರು ಮಿತ್ರ



## ಮೈಸೂರು ಹಾಗೂ ಸುತ್ತಮುತ್ತ ಇಂದು...



### ಇಂದಿನ ಪಂಚಾಂಗ

**21.07.2024 ಭಾನುವಾರ, ಮಳೆ ನಕ್ಷತ್ರ: ಪುಷ್ಯ, 20.07.2024ರಿಂದ 02.08.2024 ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ಗ್ರೀಷ್ಮ ಋತು, ಆಷಾಢ ಮಾಸ, ಶುಕ್ಲ ಪಕ್ಷ, ತಿಥಿ: ಹುಣ್ಣಿಮೆ, ನಕ್ಷತ್ರ: ಉಷಾ, ರಾಹುಕಾಲ: ಸಂಜೆ 4.30ರಿಂದ 6ರವರೆಗೆ**

■ **ಶ್ರೀ ಪ್ರಸನ್ನ ಗಣಪತಿ, ಶ್ರೀ ಶಿರಡಿ ಸಾಯಿ ಶಕ್ತಿ ಸನ್ನಿಧಿ ಟ್ರಸ್ಟ್:** ಗುರು ಪೂರ್ಣಿಮೆ, ಬೆಳಗ್ಗೆ 7ಕ್ಕೆ ಕಾಕಡಾರತಿ, 7.30ಕ್ಕೆ ಪ್ರತಿಷ್ಠಾಪನಾ ಮೂರ್ತಿಗೆ ವೇದಘೋಷಗಳೊಂ ದಿಗೆ ಜಲಾಭಿಷೇಕ, ಪುಷ್ಪಾರ್ಚನೆ, 8.30ಕ್ಕೆ ಅಷ್ಟಧಾತು ಮೂರ್ತಿಗೆ ಪ್ರಾಕಾರೋತ್ಸವ, ಕ್ಷೀರಾಭಿಷೇಕ, ಪಂಚಾಮೃತಾಭಿಷೇಕ, ಷೋಡಸೋಪಚಾರ ಪೂಜೆ, ಮಧ್ಯಾಹ್ನ 12ಕ್ಕೆ ನೈವೇದ್ಯಾರತಿ, ಪ್ರಸಾದ ವಿನಿಯೋಗ, ಸಂಜೆ 6ಕ್ಕೆ ಧೂಪಾರತಿ, ಪ್ರಸಾದ ವಿನಿಯೋಗ, ರಾತ್ರಿ 9ಕ್ಕೆ ಶೇಜಾರತಿ, ಸ್ಥಳ: ಸಿ ಮತ್ತು ಎಫ್ ಬ್ಲಾಕ್, ರಾಮಕೃಷ್ಣನಗರ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆಯ ಶಾಲಾಕ್ಯತಂತ್ರ ವಿಭಾಗ :** ಆರೋಗ್ಯ ತಪಾಸಣಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ರಿಂದ.

■ **ದಕ್ಷಿಣಾಮ್ನಾಯ ಶ್ರೀ ಶಾರದಾ ಪೀಠ, ಶೃಂಗೇರಿ, ಶ್ರೀ ಶಂಕರ ಮಠ ಅಭಿನವ ಶಂಕರಾಲಯ, ಶ್ರೀ ಗುರುರಾಘ ವೇಂದ್ರ ಸೇವಾ ಟ್ರಸ್ಟ್, ಮೈಸೂರು ಜಿಲ್ಲಾ ಮತ್ತು ನಗರ ಬ್ರಾಹ್ಮಣ ಸಂಘ, ಎಎಸ್‌ಜಿ ಕಣ್ಣಿನ ಆಸ್ಪತ್ರೆ:** ಉಚಿತ ಕಣ್ಣಿನ ತಪಾಸಣೆ ಹಾಗೂ ರಕ್ತದಾನ ಶಿಬಿರ, ಸ್ಥಳ: ಶ್ರೀ ರಾಘ ವೇಂದ್ರ ಸ್ವಾಮಿ ಮಠ, ಟಿ.ಕೆ.ಲೇಔಟ್, ಬೆಳಗ್ಗೆ 9ರಿಂದ.

■ **ಮಾತಾ ಅಮೃತಾನಂದಮಯಿ ಮಠ:** ಗುರು ಪೂರ್ಣಿಮೆ, ಬೆಳಗ್ಗೆ 6ರಿಂದ ಗುರು ಗಣಪತಿ ಹೋಮ ಮತ್ತು ನವಗ್ರಹ ಹೋಮ, ಗುರುಪಾದುಕಾ ಪೂಜೆ, ಅರ್ಚನೆ, ಭಕ್ತರಿಂದ ಕ್ಷೀರಾಭಿಷೇಕ, ಬೆಳಗ್ಗೆ 10ಕ್ಕೆ ಭಜನೆ ಮತ್ತು ಸತ್ಸಂಗ, ಮಧ್ಯಾಹ್ನ 12:30ಕ್ಕೆ ಆರತಿ, ಮಹಾಪ್ರಸಾದ, ಸ್ಥಳ: ಮಾತಾ ಅಮೃತಾನಂದಮಯಿ ಮಠ, ಬೋಗಾದಿ 2ನೇ ಹಂತ.

■ **ಬಿಇಎಂಎಲ್ ಬಸವ ಸಮಿತಿ:** ಬಸವ ಸಮಿತಿಯ 33ನೇ ವಾರ್ಷಿಕೋತ್ಸವ, ಉದ್ಘಾಟನೆ: ಶ್ರೀ ಹೊಸ ಮಠದ ಶ್ರೀ ಚಿದಾನಂದ ಸ್ವಾಮೀಜಿ, ಸಾನ್ನಿಧ್ಯ: ಉಕ್ಕಿನಕಂತೆ ಮಠದ ಶ್ರೀ ಸಾಂಬಸದಾಶಿವ ಸ್ವಾಮೀಜಿ, ಅಧ್ಯಕ್ಷತೆ: ಬಿಇಎಂಎಲ್ ರಕ್ಷಣಾ ವ್ಯವಹಾರ ನಿವೃತ್ತ ಕಾರ್ಯನಿರ್ವಾಹಕ ನಿರ್ದೇಶಕ ಪ್ರದೀಪ್‌ಕುಮಾರ್, ಬಸವಶ್ರೀ ಪ್ರಶಸ್ತಿ ಪ್ರದಾನ: ಸಮಾಜ ಸೇವಕ ಯು.ಎಸ್.ಶೇಖರ್, ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಮ.ಗು. ಸದಾನಂದಯ್ಯ ಅವರಿಂದ ಸಾಂಸ್ಕೃತಿಕ ನಾಯಕ ಬಸವಣ್ಣನವರು ಕುರಿತು ಉಪನ್ಯಾಸ, ಉಪಸ್ಥಿತರು: ಬಿಇಎಂಎಲ್ ಬಸವ ಸಮಿತಿ ಅಧ್ಯಕ್ಷ ಎಂ.ಸಿ.ದೇವರಾಜಪ್ಪ, ಶ್ರೀ ನಟರಾಜ ಕಲ್ಯಾಣ ಮಂಟಪ, ಶ್ರೀ ಹೊಸಮಠ, ಬೆಳಗ್ಗೆ 9.30ಕ್ಕೆ.

■ **ಶ್ರೀ ನಾಗಾನಂದ ದತ್ತಾತ್ರೇಯ ಮಠ:** ಗುರು ಪೂರ್ಣಿಮಾ (ವ್ಯಾಸ ಪೂರ್ಣಿಮಾ), ಗುರುವಂದನಾ ಕಾರ್ಯಕ್ರಮ, ಬೆಳಗ್ಗೆ 5.30ಕ್ಕೆ ಕಳಸ ಸ್ಥಾಪನೆ, ಬೆಳಗ್ಗೆ 10.30ಕ್ಕೆ ಭಜನೆ, ಮಧ್ಯಾಹ್ನ 12.15ಕ್ಕೆ ಮೆರವಣಿಗೆ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ಶ್ರೀ ನಾಗಾನಂದ ದತ್ತಾತ್ರೇಯ ಮಠ, ಬೆಲವತ್ತ ಗ್ರಾಮ.

■ **ಮೈಸೂರು ಸಶಸ್ತ್ರ ಪಡೆಗಳ ಮಾಜಿ ಸೈನಿಕರ ಸಂಘ:** ವಾರ್ಷಿಕೋತ್ಸವ ಮತ್ತು ಮಹಾಸಭೆ, ಮುಖ್ಯ ಅತಿಥಿ ಗಳು: ಲಯನ್ ಕೆ.ಡಿ. ಕಾರ್ಯಪ್ಪ, ಜಿಪಂ ಮಾಜಿ ಅಧ್ಯಕ್ಷ ಎಂ. ಮಹದೇವು, ಪಿ.ಕೆ.ಸೋಮಣ್ಣ, ವಿಜಯಶ್ರೀ, ಅಧ್ಯಕ್ಷತೆ: ಸಂಘದ ಅಧ್ಯಕ್ಷ ಪಿ.ಕೆ.ಬಿದ್ದಪ್ಪ, ಸ್ಥಳ: ಕೊಡಗು ಸಹಕಾರ ಸಂಘ, ಬಿಎಸ್‌ಎನ್‌ಎಲ್ ಕಚೇರಿ ಹತ್ತಿರ, ಜಯಲಕ್ಷ್ಮಿಪುರಂ, ಬೆಳಗ್ಗೆ 9.30ಕ್ಕೆ.

■ **ದಿವ್ಯ ಜೀವನ ಸಂಘ, ಮಹಿಳಾ ಶಾಖೆ:** ಗುರುಪೂರ್ಣಿಮೆ, ಸಾಧನಾ ಸಪ್ತಾಹ, ಆರಾಧನಾ ಕಾರ್ಯಕ್ರಮ, ವ್ಯಾಸ ಪೂಜೆ, ಗುರುಪಾದುಕ ಅಭಿಷೇಕ, ಅರ್ಚನೆ, ಪ್ರಸಾದ, ಸ್ಥಳ: ಶಿವಾನಂದ ಜ್ಞಾನಾಲಯ, ಲಕ್ಷ್ಮೀಪುರಂ, ಬೆಳಗ್ಗೆ 10ಕ್ಕೆ

■ **ಬ್ರಾಹ್ಮಣ ಸಂಘ ಹೆಬ್ಬಾಳು–ವಿಜಯನಗರ :** ಆಷಾಢ ಮಾಸದ ಗುರುಪೌರ್ಣಿಮೆಯಂದು ಆಚಾರ್ಯತ್ರಯರ ಜಯಂತಿ, ಪ್ರತಿಭಾ ಪುರಸ್ಕಾರ, ಮುಖ್ಯ ಅತಿಥಿಗಳು: ನಿವೃತ್ತ ಪ್ರಾಧ್ಯಾಪಕ ಡಾ.ಚಂದ್ರಶೇಖರ, ಪ್ರಾಚೀನ ಇತಿಹಾಸ –ಪುರಾತತ್ವ ವಿಭಾಗದ ಮುಖ್ಯಸ್ಥ ಡಾ.ಶೆಲ್ವಪಿಳ್ಳೈ ಐಯ್ಯಂ ಗಾರ್, ಪ್ರಾಧ್ಯಾಪಕ ಶ್ರೀನಿವಾಸ ಆಚಾರ್ಯ ಕೊರಲಹಳ್ಳಿ, ಎಕೆಬಿಎಂಎಸ್‌ಎನ್ ಮುಖ್ಯ ಉಪಾಧ್ಯಕ್ಷ ನಂ.ಶ್ರೀಕಂಠಕುಮಾರ್, ಅಧ್ಯಕ್ಷತೆ: ಬ್ರಾಹ್ಮಣ ಸಂಘ, ಹೆಬ್ಬಾಳು–ವಿಜಯನಗರ ಅಧ್ಯಕ್ಷ ಆರ್. ಮಂಜುನಾಥ್, ಸ್ಥಳ: ಸಾಧನ ಪ್ರಾಂಗಣ, ಹೆಬ್ಬಾಳು 2ನೇ ಹಂತ, ಸಂಕ್ರಾಂತಿ ವೃತ್ತದ ಬಳಿ, ಬೆಳಗ್ಗೆ 10ಕ್ಕೆ.

■ **ಸಮತಾ ಅಧ್ಯಯನ ಕೇಂದ್ರ:** ಡಾ.ವಿಜಯಾ ದಬ್ಬೆ ಸಾಹಿತ್ಯ ಪ್ರಶಸ್ತಿ ಪ್ರದಾನ ಸಮಾರಂಭ, ಕಾವ್ಯ ಮತ್ತು ಪ್ರಬಂಧ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಣೆ, ಆಶಯ ನುಡಿ: ಸಮತಾ ಅಧ್ಯಯನ ಕೇಂದ್ರದ ಧರ್ಮದರ್ಶಿ ಡಾ.ರಾಮಕೃಷ್ಣ ಜೋಶಿ, ಪ್ರಶಸ್ತಿ ಪ್ರದಾನ: ಪುಣೆಯ ಸಿಂಬಯಾಸಿಸ್ ಕಾನೂನು ಕಾಲೇಜು ಡೀನ್ ಡಾ.ಶಶಿಕಲಾ ಗುರುಪುರ, ಪ್ರಶಸ್ತಿ ಪುರಸ್ಕೃತರು: ಹಂಪಿ ಕನ್ನಡ ವಿವಿ ನಿವೃತ್ತ ಪ್ರಾಧ್ಯಾಪಕಿ ಡಾ.ಎಂ.ಉಷಾ, ಅತಿಥಿ ಗಳು: ನಿವೃತ್ತ ಪ್ರಾಂಶುಪಾಲ ಡಾ.ಸುಬ್ರಮಣ್ಯ, ಅಧ್ಯಕ್ಷತೆ: ಸಮತಾ ಅಧ್ಯಯನ ಕೇಂದ್ರದ ಅಧ್ಯಕ್ಷ ಡಾ.ಸಬಿಹಾ ಭೂಮಿಗೌಡ, ಸ್ಥಳ: ರೋಟರಿ ಪಶ್ಚಿಮ ಸಭಾಂಗಣ, ಕಾಮಾಕ್ಷಿ ಆಸ್ಪತ್ರೆ ಸಮೀಪ, ಸರಸ್ವತಿಪುರಂ, ಬೆಳಗ್ಗೆ 10.30ಕ್ಕೆ

■ **ಕರ್ನಾಟಕ ರಾಜ್ಯ ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಫೆಡರೇಷನ್, ಮೈಸೂರು ಜಿಲ್ಲಾ ಸಮಿತಿ:** 2ನೇ ಜಿಲ್ಲಾ ಸಮ್ಮೇಳನ ಮತ್ತು ಮೆರವಣಿಗೆ, ಬೆಳಗ್ಗೆ 10.30ಕ್ಕೆ ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಬೃಹತ್ ಮೆರವಣಿಗೆ, ಸ್ಥಳ: ಗನ್‌ಹೌಸ್ ಮುಂಭಾಗ, ಬೆಳಗ್ಗೆ 11.30ಕ್ಕೆ ಬಹಿರಂಗ ಸಭೆ, ಉದ್ಘಾಟನೆ : ಎಐಟಿಯುಸಿ ರಾಷ್ಟ್ರೀಯ ಉಪಾಧ್ಯಕ್ಷ ಹೆಚ್.ಆರ್. ಶೇಷಾದ್ರಿ, ಅತಿಥಿಗಳು : ಫೆಡರೇಷನ್ ರಾಜ್ಯಾಧ್ಯಕ್ಷ ಕಾ. ಹಮ್ಜದ್, ರಾಜ್ಯ ಪ್ರಧಾನ ಕಾರ್ಯದರ್ಶಿ ಕಾ. ಜಯಮ್ಮ, ಸ್ಥಳ: ಅರಸು ಸಭಾಂಗಣ.

■ **ಮೈಸೂರು ವಿಶ್ವವಿದ್ಯಾನಿಲಯ, ಡಾ. ಬಿ.ಆರ್.ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ:** ಧಮ್ಮಚಕ್ಕ ಪವತ್ತನ ದಿನಾಚರಣೆಯ ಅಂಗವಾಗಿ ವಿಶೇಷ ಉಪನ್ಯಾಸ, ಧಮ್ಮಚಕ್ಕ ಪವತ್ತನದ ಮಹತ್ವ ಮತ್ತು ಸಮಕಾಲೀನ ಸಮಾಜ, ಸಾನ್ನಿಧ್ಯ : ವಿಶ್ವಮೈತ್ರಿ ಬುದ್ಧ ವಿಹಾರದ ಡಾ.ಕಲ್ಯಾಣಸಿರಿ ಭಂತೇಜಿ, ಸಂಪನ್ಮೂಲ ವ್ಯಕ್ತಿ: ನಿವೃತ್ತ ಪ್ರಾಧ್ಯಾಪಕ ಡಾ.ಶುಭಚಂದ್ರ, ಅಧ್ಯಕ್ಷತೆ: ಡಾ. ಬಿ.ಆರ್.ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರದ ನಿರ್ದೇಶಕ ಪ್ರೊ.ಜೆ.ಸೋಮಶೇಖರ್, ಸ್ಥಳ: ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ, ಮಾನಸಗಂಗೋತ್ರಿ, ಬೆಳಗ್ಗೆ 10.30ಕ್ಕೆ.

■ **ಕುಮಾರ್ ಪ್ರದರ್ಶಕ ಕಲೆಗಳ ಕೇಂದ್ರ:** ಅಂತರರಾಷ್ಟ್ರೀಯ ನಿರಂತರ ಕಲೆಮನೆ ಉತ್ಸವ, ಅಂತರರಾಷ್ಟ್ರೀಯ 'ಕಲೆಮನೆ ಕಲಾಶ್ರೀ' ಪ್ರಶಸ್ತಿ ಪುರಸ್ಕೃತರಾದ ವಿದ್ವಾನ್ ವಿ.ನಂಜುಂಡ ಸ್ವಾಮಿ ಹಾಗೂ ಪ್ರಾಧ್ಯಾಪಕರಾದ ಶ್ರೀಮತಿ ಹೆಚ್.ಎಸ್ ಉಮಾದೇವಿ, ಆರ್ಟ್ ಗ್ಯಾಲರಿ ಸಂಸ್ಥೆಯ ಸ್ಥಾಪಕರಾದ ಎಲ್. ಶಿವಲಿಂಗಪ್ಪ ಅವರಿಗೆ 2024ರ ಅಂತರ ರಾಷ್ಟ್ರೀಯ ಕಲೆಮನೆ ಕಲಾಶ್ರೀ ಪ್ರಶಸ್ತಿ ಪ್ರದಾನ, ಬೆಂಗಳೂರಿನ ಹೆಸ ರಾಂತ ಗುರು ವಿದುಷಿ ರೂಪ ಗಿರೀಶ್ ಶಿಷ್ಯ ವೃಂದದವರಿಂದ ಅಷ್ಟಲಕ್ಷ್ಮಿ ನೃತ್ಯ ರೂಪಕ ವಿಶೇಷ ನೃತ್ಯ ಪ್ರದರ್ಶನ; ವಿದುಷಿ ಗುರು ಶ್ರೀಮತಿ ಶ್ರೀ ಲಕ್ಷ್ಮಿ ತೇಜಸ್ ಮತ್ತು ಇವರ ಶಿಷ್ಯ ವೃಂದದವರಿಂದ ಅಮೋಘ ಭರತನಾಟ್ಯ ನೃತ್ಯ ಪ್ರದರ್ಶನ; ಭರತನಾಟ್ಯ ನೃತ್ಯ ಕಲಾವಿದರಾದ ಗುರು ವಿದುಷಿ ಶ್ರೀಮತಿ ಸ್ಮೃತಿ ರಮೇಶ್ ಕೌಶಿಕ್ ಅವರಿಂದ ಭರತನಾಟ್ಯ ಪ್ರದರ್ಶನ, ಸ್ಥಳ : ಕಲೆಮನೆ ಸಭಾಂಗಣ, ಮಧ್ಯಾಹ್ನ 2.30ಕ್ಕೆ.

■ **ಶ್ರೀ ಶಿರಡಿ ಸಾಯಿ ಸೇವಾಶ್ರಮ ಟ್ರಸ್ಟ್:** ಶ್ರೀ ಸಾಯಿ ಅನುಗ್ರಹ ವಿಶ್ವಶಾಂತಿ ಮತ್ತು ಸಾಮೂಹಿಕ ಗ್ರಹದೋಷ ನಿವಾರಣೆಗಾಗಿ ಸಾಯಿ ಗುರುಪೂರ್ಣಿಮೆ, ಸಾಯಿ ಕಳಸ ಸ್ಥಾಪನೆ, ಗುರು ಭಜನೆ, ಲಕ್ಷ್ಮೀಪೂಜೆ, ಸ್ಥಳ: ಬಾಬಾ ಮಂದಿರ, ಸಂಕ್ರಾಂತಿ ಸರ್ಕಲ್ ಹತ್ತಿರ, ಹೆಬ್ಬಾಳು 2ನೇ ಹಂತ, ಸಂಜೆ 4 ರಿಂದ

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಹಿಮಾಲಯ ಪ್ರತಿಷ್ಠಾನ:** ಗುರುಪೂರ್ಣಿಮೆ ಕಾರ್ಯಕ್ರಮ, ಉಪನ್ಯಾಸ, ಯೋಗ ಗುರುಗಳ ಸ್ಮರಣೆ, ಯೋಗ ಸಾಧಕರಿಗೆ ಗೌರವ ಸಮರ್ಪಣೆ, ಅಷ್ಟಾಂಗ ಯೋಗಮಾರ್ಗ ಕೃತಿಯ 3ನೇ ಮುದ್ರಣ ಬಿಡುಗಡೆ ಸಮಾರಂಭ, ವೇದಘೋಷ: ಸಂಸ್ಕೃತ ಕಾಲೇಜು ವಿದ್ಯಾರ್ಥಿಗಳಿಂದ, ಉದ್ಘಾಟನೆ: ಶಾಸಕ ಟಿ.ಎಸ್. ಶ್ರೀವತ್ಸ, ಯೋಗಗುರುಗಳಿಗೆ ಪುಷ್ಪಾರ್ಚನೆ: ಹಿರಿಯ ಸಮಾಜ ಸೇವಕ ಡಾ.ಕೆ.ರಘುರಾಂ ವಾಜಪೇಯಿ, ಯೋಗಾ ಚಾರ್ಯ ಕೆ.ಎಸ್.ಮುಕುಂದನ್ ಅವರಿಂದ ಗುರು ಪೂರ್ಣಿಮೆ ಮಹತ್ವ ಕುರಿತು ಉಪನ್ಯಾಸ, ಅಷ್ಟಾಂಗ ಯೋಗ ಮಾರ್ಗ ಕೃತಿ ಬಿಡುಗಡೆ: ಜೆಎಸ್‌ಎಸ್ ಪ್ರತಿಷ್ಠಾನ ಸಂಸ್ಥಾಪಕ ಶ್ರೀಹರಿ ದ್ವಾರಕಾನಾಥ್, ಕೃತಿ ಕುರಿತು: ಯೋಗ ಶಿಕ್ಷಕ ಡಾ.ಸಿ. ರಮೇಶ್ ಶೆಟ್ಟಿ, ಅಧ್ಯಕ್ಷತೆ: ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಉಪಸ್ಥಿತರು: ಸರ್ಕಾರಿ ಮಹಾರಾಜ ಸಂಸ್ಕೃತ ಕಾಲೇಜು ಪ್ರಿನ್ಸಿಪಾಲ್ ಡಾ.ಪಿ.ಸತ್ಯ ನಾರಾಯಣ, ಮೈಸೂರು ಯೋಗ ಒಕ್ಕೂಟದ ಕಾರ್ಯಾಧ್ಯಕ್ಷ ಡಾ.ಬಿ.ಪಿ. ಮೂರ್ತಿ, ಲಕ್ಷ್ಮೀನರಸಿಂಹ ಸ್ವಾಮಿ ದೇವಸ್ಥಾನದ ಸಿಇಓ ಕೆ.ಆರ್. ಯೋಗಾ ನರಸಿಂಹನ್, ಸ್ಥಳ: ಸರ್ಕಾರಿ ಮಹಾರಾಜ ಸಂಸ್ಕೃತ ಕಾಲೇಜು, ಸಂಜೆ 5ಕ್ಕೆ

■ **ಶ್ರೀ ರೇಣುಕಾರಾಧ್ಯ ಕಲಾವಿದರ ಬಳಗ:** ಗುರು ಪೂರ್ಣಿಮೆ ಪ್ರಯುಕ್ತ ಗುರುವಂದನಾ ಕಾರ್ಯಕ್ರಮ, ಸಾನ್ನಿಧ್ಯ: ಡಾ. ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ, ಶ್ರೀ ಗುರುಶಾಂತ ಸ್ವಾಮೀಜಿ, ಶ್ರೀ ಇಮ್ಮಡಿ ಮಡಿವಾಳ ಸ್ವಾಮೀಜಿ, ಅಧ್ಯಕ್ಷತೆ: ಸಂಸದ ಯದುವೀರ ಒಡೆಯರ್, ಮುಖ್ಯ ಅತಿಥಿಗಳು: ಶಾಸಕರಾದ ಜಿ.ಟಿ.ದೇವೇಗೌಡ, ಟಿ.ಎಸ್.ಶ್ರೀವತ್ಸ ಗಣೇಶ್ ಪ್ರಸಾದ್, ಹರೀಶ್‌ಗೌಡ, ವಿವೇಕಾನಂದ, ಮಂಡ್ಯ ರಮೇಶ್, ಕುರಿ ಪ್ರತಾಪ್, ಸ್ಥಳ: ಶಾರದಾ ವಿಲಾಸ ಶತಮಾನೋತ್ಸವ ಭವನ, ಕೃಷ್ಣಮೂರ್ತಿಪುರಂ, ಸಂಜೆ 5ಕ್ಕೆ.

■ **ಶ್ರೀ ಸುತ್ತೂರು ಮಠ, ಚಾಮುಂಡಿಬೆಟ್ಟದ ತಪ್ಪಲು:** ಗುರು ಪೂರ್ಣಿಮಾ, ಬೆಳದಿಂಗಳ ಸಂಗೀತ–269, ಸಾನ್ನಿಧ್ಯ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಎ.ಆರ್. ರಘುರಾಮ್ ಅವರಿಂದ ಉಪನ್ಯಾಸ, ವಿದುಷಿ ಹರಿಣಿ ರಮೇಶ್ ಅವರಿಂದ ಗಾಯನ, ವಿದ್ವಾನ್ ಕೇಶವ ಮೋಹನ್ ಕುಮಾರ್–ವಯೋಲಿನ್, ವಿದ್ವಾನ್ ಎ.ರಾಧೇಶ್–ಮೃದಂಗ, ವಿದ್ವಾನ್ ಎಸ್.ಮಂಜುನಾಥ್–ಘಟಂ, ಸ್ಥಳ: ಸುತ್ತೂರು ಮಠ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6ಕ್ಕೆ.

■ **ಶ್ರೀ ಉತ್ತರಾದಿ ಮಠ:** ಶ್ರೀ 1008 ಶ್ರೀ ಸತ್ಯಸಂಕಲ್ಪ ತೀರ್ಥ ಶ್ರೀಪಾದಂಗಳವರ 185ನೇ ಆರಾಧನಾ ಮಹೋತ್ಸವದ ಪ್ರಯುಕ್ತ ಪ್ರಸಿದ್ಧ ಪ್ರವಚನಕಾರರಾದ ಪಂ.ಶ್ರೀ.ವಿದ್ಯಾದೀಶಾ ಚಾರ್ಯ ಗುತ್ತಲ್ ಅವರಿಂದ ಶ್ರೀ ರಾಘವೇಂದ್ರ ಸ್ವಾಮಿಗಳು ರಚಿಸಿರುವ 'ಪ್ರಾತಃಸಂಕಲ್ಪಗದ್ಯ' ಕುರಿತು ವಿಶೇಷ ಪ್ರವಚನ, ಸ್ಥಳ: ಶ್ರೀ ಉತ್ತರಾದಿ ಮಠ, ಸಂಜೆ 6ರಿಂದ.

■ **ಶ್ರೀ ರಾಮಕೃಷ್ಣ ಪರಮಹಂಸ ಸೇವಾ ಪ್ರತಿಷ್ಠಾನ:** ತಿಂಗಳ ತಿಳಿವು, ಆಶೀರ್ವಾದ: ಪ್ರತಿಷ್ಠಾನ ಗೌರವ ಅಧ್ಯಕ್ಷ ಸ್ವಾಮಿ ಮುಕ್ತಿದಾನಂದಜೀ ಮಹಾರಾಜ್, ತಿಂಗಳ ಅತಿಥಿ: ಸಾಹಿತಿ ಡಾ.ರಂಗನಾಥ್, ಉಪಸ್ಥಿತರು: ಮಾಜಿ ಎಂಎಲ್‌ಸಿ ಡಿ.ಮಾದೇಗೌಡ, ಡಾ.ಎಸ್.ಪಿ.ಯೋಗಣ್ಣ, ಪ್ರೊ. ಜಿ. ಚಂದ್ರಶೇಖರ್, ಬಸವಣ್ಣ, ಹೆಚ್.ಜೆ.ಬಸವಲಿಂಗಪ್ಪ, ಸ್ಥಳ: ಪರಮಹಂಸ ಮಂಟಪ, ರಾಮಕೃಷ್ಣನಗರ, ಸಂಜೆ 6ಕ್ಕೆ

■ **ಶ್ರೀ ಕೃಷ್ಣ ಟ್ರಸ್ಟ್ ಮತ್ತು ಶ್ರೀ ಕೃಷ್ಣ ಮಿತ್ರ ಮಂಡಳಿ:** ಉಡುಪಿ ಶ್ರೀ ಪಲಿಮಾರು ಮಠದ ಸಂಸ್ಥಾನಾಧೀಶರಾದ ಶ್ರೀ ವಿದ್ಯಾದೀಶತೀರ್ಥ ಶ್ರೀಪಾದಂಗಳವರಿಂದ ಶ್ರೀ ಮನ್ಮಹಾಭಾರತ ಪ್ರವಚನ ಕಾರ್ಯಕ್ರಮ, ಸ್ಥಳ: ಶ್ರೀಕೃಷ್ಣ ಧಾಮ, ಸರಸ್ವತಿಪುರಂ, ಸಂಜೆ 6.30 ರಿಂದ.

■ **ಶ್ರೀರಾಮಕೃಷ್ಣ ಆಶ್ರಮ:** ಗುರುಪೂರ್ಣಿಮೆ, ಬೆಳಗ್ಗೆ 5.15ರಿಂದ ವೇದ ಪಠಣ, ಮಂಗಳಾರತಿ, ಭಜನೆ, ವಿಷ್ಣು ಸಹಸ್ರನಾಮ ಪಾರಾಯಣ, ಪೂಜೆ ಮತ್ತು ಭಜನೆ, ಗ್ರಂಥವಾಚನ, ಶ್ರೀ ಗುರುಪೂರ್ಣಿಮೆಯ ಬಗ್ಗೆ ಪ್ರವಚನ, ಪುಸ್ತಕ ಬಿಡುಗಡೆ, ಶ್ರೀರಾಮಕೃಷ್ಣ ಅಷ್ಟೋತ್ತರ ಅರ್ಚನೆ, ಆರತಿ ಮತ್ತು ಪುಷ್ಪಾಂಜಲಿ, ಪ್ರಸಾದ ವಿನಿಯೋಗ, ಸಂಜೆ 7ರಿಂದ ಸಂಧ್ಯಾರತಿ ಮತ್ತು ವಿಶೇಷ ಪೂಜೆ, ಸ್ಥಳ: ಶ್ರೀ ರಾಮಕೃಷ್ಣ ಆಶ್ರಮ, ಯಾದವಗಿರಿ.

■ **ದೀಕ್ಷಿತ್ ಆರೋಗ್ಯ ಧಾಮ, ಆಯುರ್ವೇದ ಪಂಚಕರ್ಮ ಆಸ್ಪತ್ರೆ:** ಗುರು ಪೂರ್ಣಿಮೆಯ ವಿಶೇಷ ಮಾಸದ ಆನಂದ ಆರೋಗ್ಯ ಕಾರ್ಯಕ್ರಮ, ವಿದ್ವಾನ್ ರಾಜಗೋಪಾಲ ಭಾಗವತ್ ಅವರಿಂದ ಗಾಯನ, ವಿದ್ವಾನ್ ವಿಶ್ವಂಬರ ಭಾಗವತ್–ಸಹ ಗಾಯನ, ವಿದ್ವಾನ್ ಅಮೋಘ ನೆಡನೂರ್–ಪಿಟೀಲು, ವಿದ್ವಾನ್ ಪಿ.ಎಸ್. ಶ್ರೀಧರ್–ಮೃದಂಗ, ವಿದ್ವಾನ್ ವಿ.ಎಸ್. ರಮೇಶ್–ಮೋರ್ಚಿಂಗ್, ಉಪನ್ಯಾಸ: ತ್ರಿವಿಧ ಚಿಕಿತ್ಸೆ, ಯುಕ್ತಿ ವ್ಯಪಾಶ್ರಯ: ಡಾ.ಎನ್. ಆಂಜನೇಯಮೂರ್ತಿ, ದೈವ ವ್ಯಪಾಶ್ರಯ: ಡಾ.ಬಿ.ವಿ. ಕುಮಾರಸ್ವಾಮಿ, ಸತ್ವಾವಜಯ: ಡಾ.ಸಿ.ಎಸ್. ಅನಿಲ್ ಕುಮಾರ್, ಸ್ಥಳ: ದೀಕ್ಷಿತ್ ಆರೋಗ್ಯಧಾಮ, ಸಂಜೆ 6ಕ್ಕೆ

■ **ರಂಗಾಯಣ:** ರಂಗಾಯಣದ ರೆಪರ್ಟರಿ ಕಲಾವಿದ ರಿಂದ ಗೋರ್‌ಮಾಟಿ ನಾಟಕ ಪ್ರದರ್ಶನ, ನಿರ್ದೇಶನ: ಸಿ.ಬಸವಲಿಂಗಯ್ಯ, ರಂಗರೂಪ: ಶಿರಗಾನಹಳ್ಳಿ ಶಾಂತ ನಾಯಕ್, ಸ್ಥಳ: ಭೂಮಿಗೀತ, ರಂಗಾಯಣ, ಸಂಜೆ 6.30ಕ್ಕೆ.

■ **ಅವಧೂತ ದತ್ತಪೀಠ:** ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ, ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಯವರ 21ನೇ ಚಾತುರ್ಮಾಸ್ಯ ವ್ರತದೀಕ್ಷಾ ಮಹೋತ್ಸವ, ಗುರುಪೂರ್ಣಿಮಾ ಅಂಗವಾಗಿ ಬೆಳಗ್ಗೆ ಗುರು ಪರಂಪರಾ ಪೂಜೆ, ಚೈತನ್ಯಾರ್ಚನೆ, ವ್ಯಾಸಪೂಜೆ, ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ ಪಾದುಕಾ ಪೂಜೆ, ಪವಮಾನ ಹೋಮ, ದತ್ತ ಹೋಮ, ಸಂಜೆ 6 ಗಂಟೆಗೆ ಶ್ರೀ ಅನುಮಾಂಡ್ಲ ಭೂಮಯ್ಯ ಅವರಿಗೆ 'ಶ್ರೀ ಗಣಪತಿ ಸಚ್ಚಿದಾನಂದ ಪ್ರಶಸ್ತಿ ಪ್ರದಾನ ಮತ್ತು ಶ್ರೀ ಗುರುಗೀತಾ ಪಾರಾಯಣ, ಸ್ಥಳ: ಶ್ರೀಗಣಪತಿ ಸಚ್ಚಿದಾನಂದ ಆಶ್ರಮ, ಊಟಿ ರಸ್ತೆ.

### ಮೈಸೂರು ಆಕಾಶವಾಣಿ



**ಬೆಳಗ್ಗೆ:** 6.10 ಚಿಂತನ–ಗೀತಾ ಶ್ರೀನಿವಾಸ್, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸಿನೆಮಾ ಯಾನ–ಕನ್ನಡ ಕಲಾತ್ಮಕ ಚಿತ್ರಗಳ ಪರಿಚಯ ಮಾಲಿಕೆ, ಪ್ರಸ್ತುತಿ: ಶ್ರೀನಿವಾಸ್‌ಪ್ರಸಾದ್, 6.40 ಅರಿವಿನ ಶಿಖರ ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ: ಡಾ.ಪಿ.ಎಸ್.ಮುರಳೀಧರ್, ಟಿ.ಎನ್. ಅಶ್ವಿನಿ, ವ್ಯಾಖ್ಯಾನ: ಪ್ರೊ.ಸಿ.ನಾಗಣ್ಣ, 6.50 ರೈತರಿಗೆ ಸಲಹೆ, 7.15 "ಸಮಗ್ರ ವಿಕಾಸಕ್ಕಾಗಿ ದಿಟ್ಟ ಹೆಜ್ಜೆ" ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು : ವಿಕಾಸ ಅಕಾಡೆಮಿ, ಕಲಬುರ್ಗಿ, 8.30 ಕನ್ನಡ ಚಿತ್ರಗೀತೆಗಳು, 9.40 ನಮ್ಮ ಆರೋಗ್ಯ ಕಾರ್ಯಕ್ರಮ: 'ನ್ಯಾಷನಲ್ ಬೇಸಿಕ್ ಲೈಫ್ ಸಪೋರ್ಟ್ ಅಂಡ್ ಸಿ.ಪಿ.ಆರ್.ಡೇ' ಕುರಿತು ಮಾಹಿತಿ ನೀಡಲಿದ್ದಾರೆ ಇಂಡಿಯನ್ ಅಕಾಡೆಮಿ ಆಫ್ ಪೀಡಿಯಾಟ್ರಿಕ್ಸ್‌ನ ಕರ್ನಾಟಕ ಶಾಖೆಯ ಕಾರ್ಯದರ್ಶಿ ಡಾ.ಶಶಿಕಿರಣ್ ಕೆ.ಬಿ ಮತ್ತು ಮಕ್ಕಳ ತುರ್ತು ಚಿಕಿತ್ಸಾ ತಜ್ಞರಾದ ಡಾ.ಯಶವಂತ್ ರಾಜು ಇವರೊಂದಿಗೆ ಭಾಗವಹಿಸುತ್ತಾರೆ: ಬೇದ್ರೆ ಮಂಜುನಾಥ್, 10.00 ಕೇಳಿ ಗಿಳಿಗಳೇ: ಕಥೆ ಹೇಳ್ತೀಯೋ ಹಾಡು ಹೇಳ್ತೀಯೋ ನೇರ ಫೋನ್ ಇನ್ ಕಾರ್ಯಕ್ರಮ, 10.30 ಮಕ್ಕಳ ಮಂಟಪ: ಪ್ರತಿಭಾ ಪಲ್ಲವ–ಬಹುಮುಖ ಪ್ರತಿಭೆ ಚಿರಸ್ವಿ ಬಾಲಸುಬ್ರಹ್ಮಣ್ಯಂ, ಪರಿಚಯ. ಪ್ರಸ್ತುತಿ: ಎಂ.ಎಸ್.ಭಾರತಿ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಮಿಶ್ರ ಮಾಧುರ್ಯ **ಮಧ್ಯಾಹ್ನ:** 12.30 ದೇವರನಾಮ, 12.45 ಜನಪದ ಸಂಗೀತ: ಚಾಮಮ್ಮ ಮತ್ತು ಸಂಗಡಿಗರಿಂದ ನಂಜುಂಡೇಶ್ವರನ ಹಾಡು, 1.20 ಭಾವಗೀತೆಗಳು–ಎ.ಜೆ.ದಿವ್ಯ, 2.40 ಕನ್ನಡ ಚಲನಚಿತ್ರ ಧ್ವನಿ ವಾಹಿನಿ "ಕಾಲಚಕ್ರ", 3.40 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ.ರವೀಂದ್ರಕುಮಾರ್, 3.45 ಯಕ್ಷಗಾನ: ತಾಳ ಮದ್ದಲೆ, ಪ್ರಸಂಗ: ಶರಣ ಸಾರಥ್ಯ, ಪ್ರಸ್ತುತಿ: ಪುತ್ತೂರು ಅಲಂಕಾರು ಶ್ರೀಕ್ಷೇತ್ರ ಶರವೂರಿನ ಶ್ರೀ ದುರ್ಗಾಂಬ ಕಲಾ ಸಂಗಮದ ಸದಸ್ಯರು, 4.45 ಚಟ್‌ಪಟ್ ಚುರುಮುರಿ, ಪ್ರಸ್ತುತಿ: ಪ್ರಭುಸ್ವಾಮಿ ಮಳಿಮಠ್ ಹಾಗೂ ಕೆ.ಬಿ.ಮೀನಾ, 6.51 ಕೃಷಿರಂಗ, ತೋರಣ ಹೂರಣ–ಸಾಪ್ತಾಹಿಕ ಸರಣಿ ಕಾರ್ಯಕ್ರಮ, ಪ್ರಸ್ತುತಿ: ಎನ್. ಕೇಶವಮೂರ್ತಿ, ಆರ್.ಲೋಕೇಶ್ವರಿ, ಡಾ.ಮೈಸೂರು ಉಮೇಶ್, ಕೃಷಿ ಲೋಕ, ಕೃಷಿ ದರ್ಪಣ, ವಾರದ ಕೃಷಿರಂಗ, ಕಿಸಾನ್ ವಾಣಿ ಕಾರ್ಯಕ್ರಮಗಳ ಮುನ್ನೋಟ, ಪ್ರಸ್ತುತಿ: ಆರ್.ಲೋಕೇಶ್ವರಿ, 7.45 ಸುರಕ್ಷಿತ ಅಂತರ್ಜಾಲ–ಸಾಮಾಜಿಕ ಬಾನುಲಿ ಮಾಲಿಕೆ ಜಾಲತಾಣಗಳಲ್ಲಿ ಸುಖವಾಗಿರುವುದು ಹೇಗೆ? ಮಾತನಾಡುತ್ತಾರೆ: ಸಿರಿ ವಾನಳ್ಳಿ, 8.00 "ಹಾದಿಯಲ್ಲಿ ಕಂಡ ಮುಖ"–ಬಾನುಲಿ ಸರಣಿ, ಮಂಡ್ಯ ಜಿಲ್ಲೆ ಪಾಂಡವಪುರ ತಾಲೂಕು ಚಿನಕುರಳಿಯ ಹೆಳವರ ಕೊಪ್ಪಲಿನ, ಹೆಳವರ ಹಾಡುಗಾರರಾದ ಮಲ್ಲಯ್ಯ, ಕೆಂಗಯ್ಯ ಮತ್ತು ಅಪ್ಪಾಜಯ್ಯ ಅವರೊಂದಿಗೆ ಸಂವಾದ, ಪ್ರಸ್ತುತಿ : ಅಬ್ದುಲ್ ರಶೀದ್, 9.15 ರಂಗಗೀತೆಗಳು–ರಾಜಪ್ಪ, 9.30 ರಾಷ್ಟ್ರೀಯ ನಾಟಕ: "ಪರಿವರ್ತನೆ", ಲೇಖಕರು–ನೆಲ್ಲೂರು ಕೇಶವಮೂರ್ತಿ, ಹಿಂದಿ ಅನುವಾದ–ಎಸ್.ವಿ.ಶಿವರಾಮ್ ಶರ್ಮ, ನಾಟಕ ರೂಪಾಂತರ–ವಿನೋದ್ ಕುಮಾರ್, ಕನ್ನಡ ಅನುವಾದ –ಡಾ.ವಿ.ಸೌಭಾಗ್ಯಲಕ್ಷ್ಮಿ, ನಿರ್ದೇಶನ ಹಾಗೂ ನಿರ್ಮಾಣ–ಪ್ರಭುಸ್ವಾಮಿ ಮಳಿಮಠ್, 10.00 ರವಿವಾರದ ಅಖಿಲ ಭಾರತ ಸಂಗೀತ ಸಭೆ, ರುಚಿರಾ ಪಾಂಡ–ಗಾಯನ

ಮುಖ್ಯಮಂತ್ರಿ ಸಿದ್ದರಾಮಯ್ಯ ಅಸ್ಥಿರಗೊಳಿಸಲು ಯತ್ನ ಆರೋಪ

ಬಿಜೆಪಿ, ಜೆಡಿಎಸ್ ವಿರುದ್ಧ ಮುಡಾ ಮುಂದೆ ಹಿಂದುಳಿದ ವರ್ಗಗಳ ವೇದಿಕೆ, ಅಹಿಂದ

# ಪೊರಕೆ ಹಿಡಿದು ಪ್ರತಿಭಟನೆ



ಸಿದ್ದರಾಮಯ್ಯ ಅವರ ಸರ್ಕಾರವನ್ನು ಅಸ್ಥಿರಗೊಳಿಸಲು ಬಿಜೆಪಿ–ಜೆಡಿಎಸ್ ನಾಯಕರು ಹುನ್ನಾರ ನಡೆಸುತ್ತಿದ್ದಾರೆ ಎಂದು ಆರೋಪಿಸಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಮುಂಭಾಗ ಅಹಿಂದ ಸಂಘಟನೆಗಳು ಪ್ರತಿಭಟನೆ ನಡೆಸಿದವು.

ಮೈಸೂರು, ಜು.20(ಜಿಎ)–ಮುಖ್ಯ ಮಂತ್ರಿ ಸಿದ್ದರಾಮಯ್ಯ ಅವರ ಸರ್ಕಾರ ವನ್ನು ಅಸ್ಥಿರಗೊಳಿಸಲು ಬಿಜೆಪಿ ಮತ್ತು ಜೆಡಿಎಸ್ ನಾಯಕರು ಹುನ್ನಾರ ನಡೆಸುತ್ತಿ ದ್ದಾರೆ ಎಂದು ಆರೋಪಿಸಿ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ, ಅಹಿಂದ ಸಂಘಟನೆಗಳ ನೇತೃತ್ವ ದಲ್ಲಿ ಪೊರಕೆ ಚಳವಳಿ ನಡೆಸಲಾಯಿತು.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ನಗರಾಭಿವೃದ್ಧಿ ಪ್ರಾಧಿಕಾರದ ಮುಂಭಾಗ ಜಮಾಯಿಸಿದ ಪ್ರತಿಭಟನಾಕಾರರು 'ಮುಡಾ ಬ್ರಹ್ಮಾಂಡ ಭ್ರಷ್ಟಾಚಾರದ ಪಿತಾ ಮಹ ಬಿ.ವೈ.ವಿಜಯೇಂದ್ರ' 'ಅಕ್ರಮಕ್ಕೆ ಮತ್ತೊಂದು ಹೆಸರೇ ಬಿಜೆಪಿ' 'ಅಹಿಂದ ನಾಯಕ ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಿರುವುದನ್ನು ಸಹಿಸದ ಬಿಜೆಪಿಗೆ ಧಿಕ್ಕಾರ' ಸಿದ್ದರಾಮಯ್ಯನವರ ತೇಜೋವಧೆ ಮಾಡುತ್ತಿರುವ ಜೆಡಿಎಸ್–ಬಿಜೆಪಿ ನಾಯಕರಿಗೆ ಧಿಕ್ಕಾರ' ಎಂಬ ವಿವಿಧ ಪ್ಲೇಕಾರ್ಡ್‌ಗಳನ್ನು ಹಿಡಿದು ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಅಧ್ಯಕ್ಷ ಕೆ.ಎಸ್.ಶಿವರಾಮು ಮಾತನಾಡಿ, ಮುಡಾ ಹಗರಣದ ನೆಪದಲ್ಲಿ ಸಿದ್ದರಾಮಯ್ಯ ಅವರ ತೇಜೋವಧೆ ಮಾಡಲಾಗುತ್ತಿದೆ. ಐಟಿ, ಇಡಿ, ಸಿಬಿಐ ಬಳಸಿ ಸಿಎಂ ಸ್ಥಾನದಿಂದ ಕೆಳಗಿಳಿಸುವ ಹುನ್ನಾರವನ್ನು ಬಿಜೆಪಿ, ಜೆಡಿಎಸ್ ಮಾಡಿವೆ. ಇದು ಅಹಿಂದ ಸಮುದಾಯಗಳಿಗೆ ನೋವನ್ನುಂಟು ಮಾಡುತ್ತಿದ್ದು, ಇದರ ಪರಿಣಾಮವನ್ನು ಮುಂದಿನ ದಿನಗಳಲ್ಲಿ ಬಿಜೆಪಿ ಪಕ್ಷ ಎದುರಿಸಬೇಕಾ ಗುತ್ತದೆ ಎಂದು ಎಚ್ಚರಿಸಿದರು.

ಅಹಿಂದ ನಾಯಕನೊಬ್ಬ ಎರಡನೇ ಬಾರಿ ಮುಖ್ಯಮಂತ್ರಿಯಾಗಿರುವುದನ್ನು ಬಿಜೆಪಿ, ಜೆಡಿಎಸ್‌ಗೆ ಸಹಿಸಲಾಗುತ್ತಿಲ್ಲ. ಹೀಗಾಗಿ ಅಸೂಯೆಯಿಂದ ಸಿದ್ದರಾಮಯ್ಯ ಅವರ ವಿರುದ್ಧ ರಾಜಕೀಯ ಕಾರಣಕ್ಕಾಗಿ ಅವರನ್ನು ಮತ್ತು ಅವರ ಸರ್ಕಾರವನ್ನು (ಇಡಿ ಮತ್ತು ಐಟಿಯನ್ನು ಬಳಸಿಕೊಂಡು) ಅಸ್ಥಿರಗೊಳಿಸಲು ಹೊರಟಿರು ವುದು ತೀವ್ರ ಖಂಡನೀಯ. ಸಿದ್ದರಾಮಯ್ಯ ಅವರ ರಾಜೀ ನಾಮೆ ಕೇಳುವ ನೈತಿಕತೆ ಬಿಜೆಪಿ ಮತ್ತು ಜೆಡಿಎಸ್‌ಗೆ ಇದೆಯೇ ಎಂದು ಪ್ರಶ್ನಿಸಿದರು.

2021ರಲ್ಲಿ ಮುಡಾದಲ್ಲಿ ಬ್ರಹ್ಮಾಂಡ ಭ್ರಷ್ಟಾಚಾರ ನಡೆದಿದೆ. ಈ ಭ್ರಷ್ಟಾಚಾರದ ಪಿತಾಮಹ ಯಾರು? 2021ರ ಭ್ರಷ್ಟಾಚಾರದ ವಿರುದ್ಧ ಬಿಜೆಪಿ ಮತ್ತು ಜೆಡಿಎಸ್ ಧ್ವನಿ ಎತ್ತುತ್ತಲಿಲ್ಲ ಏಕೆ? ಆಗ ಬಿ.ಎಸ್.ಯಡಿಯೂರಪ್ಪ ಮುಖ್ಯಮಂತ್ರಿಗಳಾಗಿದ್ದರು. ಅವರ ಪುತ್ರ ಬಿ.ವೈ.ವಿಜಯೇಂದ್ರ ರಾಜ್ಯ ಬಿಜೆಪಿಯ ಉಪಾಧ್ಯಕ್ಷರಾಗಿದ್ದರು. ಆಗಿನ ಮುಡಾ ಆಯುಕ್ತರಾಗಿದ್ದ ಡಾ.ಡಿ.ಬಿ.ನಟೇಶ್ ಅವರು ಮತ್ತು ಅವರ ಗುಂಪನ್ನು ಕಟ್ಟಿಕೊಂಡು ಮುಡಾವನ್ನು ಅಧ್ವಾನ ಮಾಡಿದ್ದಾರೆ. ಆ ಸಂದರ್ಭದಲ್ಲಿ ಮುಡಾದಲ್ಲಿ ಬ್ರಹ್ಮಾಂಡ ಭ್ರಷ್ಟಾಚಾರ ನಡೆದಿದೆ ಎಂದು ಆರೋಪಿಸಿದರು. ಪ್ರತಿಭಟನೆಯಲ್ಲಿ ಪ್ರಗತಿಪರ ಚಿಂತಕ ಪ್ರೊ.ಮಹೇಶ್ ಚಂದ್ರಗುರು, ಮಾಜಿ ಎಂಎಲ್‌ಸಿ ಪುಟ್ಟಸಿದ್ದಶೆಟ್ಟಿ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್, ಡಾ.ರಘುರಾಮ್ ವಾಜಪೇಯಿ, ಜಿಲ್ಲಾ ಕುಂಬಾರ ಸಂಘದ ಅಧ್ಯಕ್ಷ ಎಚ್.ಎಸ್. ಪ್ರಕಾಶ್, ವಕ್ತಾರ ಎಸ್.ರಾಜೇಶ್, ಕೆಪಿಸಿಸಿ ಸಂಯೋಜಕ ಎನ್.ಭಾಸ್ಕರ್, ಮಡಿವಾಳರ ಸಂಘದ ಅಧ್ಯಕ್ಷ ರವಿನಂದನ್, ಉಪ್ಪಾರ ಸಂಘದ ಜಿಲ್ಲಾ ಅಧ್ಯಕ್ಷ ಯೋಗೇಶ್ ಉಪ್ಪಾರ್, ವಿಶ್ವಕರ್ಮ ಸಂಘದ ಜಿಲ್ಲಾ ಅಧ್ಯಕ್ಷ ಮೊಗಣ್ಣಾಚಾರ್, ನಗರ ಕಾಂಗ್ರೆಸ್ ಹಿಂದುಳಿದ ವರ್ಗಗಳ ಅಧ್ಯಕ್ಷ ಎನ್.ಆರ್.ನಾಗೇಶ್, ಮುಖಂಡರಾದ ಲೋಕೇಶ್, ರಹೀಮ್, ಮಹೇಂದ್ರ, ಬಸಪ್ಪ ಬಸವರಾಜು ಮತ್ತಿತರರು ಪಾಲ್ಗೊಂಡಿದ್ದರು.

## ವಿಧಾನಪರಿಷತ್ ಸದಸ್ಯ ಕೆ.ವಿವೇಕಾನಂದರಿಗೆ ಶುಭಾಶಯ

**ವಿಧಾನಪರಿಷತ್ ಸದಸ್ಯ ಕೆ.ವಿವೇಕಾನಂದ ಅವರ ಜನ್ಮದಿನದ ಅಂಗವಾಗಿ ಅವರನ್ನು ಸುಮಯ ಪ್ರಾಪರ್ಟೀಸ್‌ನ ವತಿಯಿಂದ ಸುದೀ ಎಸ್.ಶೆಟ್ಟಿ ಸನ್ಮಾನಿಸಿ, ಶುಭಾಶಯ ಕೋರಿದರು. ಈ ವೇಳೆ ಜೆಎಸ್‌ಎಸ್ ವಿದ್ಯಾಸಂಸ್ಥೆಯ ಸಹಾಯಕ ನಿರ್ದೇಶಕರಾದ ಶಿಕ್ಷಣ ವಿಭಾಗದ ಬಿ.ಎಂ.ನಿರಂಜನ ಮೂರ್ತಿ, ವೆಂಕಟೇಶ್, ರಮೇಶ್, ಪ್ರಸಾದ್ ಹಾಗೂ ಸಿಬ್ಬಂದಿ ವರ್ಗ ಉಪಸ್ಥಿತರಿದ್ದಾರೆ.**




## ಇಂದು ವಿಜಯಾ ದಬ್ಬೆ ಸಾಹಿತ್ಯ ಪ್ರಶಸ್ತಿ ಪ್ರದಾನ


ವಿಜಯಾ ದಬ್ಬೆ

ಮೈಸೂರು,ಜು.20–ಸಮತಾ ಅಧ್ಯಯನ ಕೇಂದ್ರದ ವತಿಯಿಂದ ಡಾ. ವಿಜಯಾ ದಬ್ಬೆ ಸಾಹಿತ್ಯ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಜುಲೈ 21ರ ಭಾನುವಾರ ಬೆಳಗ್ಗೆ 10.30ಕ್ಕೆ ಸರಸ್ವತಿಪುರಂ ಕಾಮಾಕ್ಷಿ ಆಸ್ಪತ್ರೆ ಸಮೀಪದ ರೋಟರಿ ಪಶ್ಚಿಮ ಸಭಾಂಗಣದಲ್ಲಿ ಆಯೋಜಿಸಲಾಗಿದೆ. 2024ನೇ ಸಾಲಿನ ಪ್ರಶಸ್ತಿಯನ್ನು ಹಂಪಿ ಕನ್ನಡ ವಿವಿ ನಿವೃತ್ತ ಪ್ರಾಧ್ಯಾಪಕಿ ಡಾ.ಎಂ.ಉಷಾ ಅವರಿಗೆ ಪುಣೆಯ ಸಿಂಬಯಾಸಿಸ್ ಕಾನೂನು ಕಾಲೇಜು ಡೀನ್ ಡಾ.ಶಶಿಕಲಾ ಗುರುಪುರ ಪ್ರದಾನ ಮಾಡುವರು. ಶಿವಮೊಗ್ಗದ 'ಅಹರ್ನಿಶಿ' ಪ್ರಕಾಶನ ಪ್ರಕಟಿಸಿರುವ ಉಷಾ ಅವರ 'ಬಾಳ ಬಟ್ಟೆ' ಕಾದಂಬರಿಯನ್ನು 25 ಸಾವಿರ ರೂ. ನಗದು ಬಹುಮಾನ, ಫಲಕವನ್ನು ಒಳಗೊಂಡು ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ವಿಜಯಾದಬ್ಬೆ ಅವರ ಒಡನಾಡಿಯಾಗಿದ್ದ ನಿವೃತ್ತ ಪ್ರಾಂಶುಪಾಲ ಡಾ.ಟಿ. ಸುಬ್ರಹ್ಮಣ್ಯಂ ತಮ್ಮ ಮತ್ತು ವಿಜಯಾ ಅವರ ಒಡನಾಟದ ಕುರಿತು ಮಾತನಾಡುವರು. ಕೇಂದ್ರದ ಅಧ್ಯಕ್ಷೆ ಡಾ.ಸಬಿಹಾ ಭೂಮಿಗೌಡ ಅಧ್ಯಕ್ಷತೆ ವಹಿಸಲಿದ್ದಾರೆ.

## ಅರಮನೆ ಮಂಡಳಿ, ಅದರ ಉಪ ನಿರ್ದೇಶಕ ಸುಬ್ರಹ್ಮಣ್ಯ ವಿರುದ್ಧ ಅಪಪ್ರಚಾರಕ್ಕೆ ಕೋರ್ಟ್ ತಡೆ



ಮೈಸೂರು, ಜು.20– ಮೈಸೂರು ಅರಮನೆ ಮಂಡಳಿ ಹಾಗೂ ಅದರ ಉಪ ನಿರ್ದೇಶಕ (ಡಿಡಿ)ರ ವಿರುದ್ಧ ಅಪಪ್ರಚಾರಕ್ಕೆ ನ್ಯಾಯಾಲಯ ತಡೆಯಾಜ್ಞೆ ನೀಡಿದೆ ಎಂದು ವಕೀಲ ಸಿ.ಎಸ್. ಲೋಕೇಶ್ ತಿಳಿಸಿದ್ದಾರೆ.

ಮೈಸೂರು ಅರಮನೆ ಮಂಡಳಿ ಹಾಗೂ ಅದರ ಉಪ ನಿರ್ದೇಶಕರಾದ ಟಿ.ಎಸ್.ಸುಬ್ರಹ್ಮಣ್ಯ ವಿರುದ್ಧ ಇಲ್ಲ–ಸಲ್ಲದ ಆರೋಪ–ಆಪಾದನೆಗಳನ್ನು ಮಾಡಿ, ಮಾನಹಾನಿಕರ ಹೇಳಿಕೆಗಳನ್ನು ಪ್ರಚಾರ ಮಾಡಿದ್ದು, ಇವೆಲ್ಲವೂ ಸತ್ಯಕ್ಕೆ ದೂರವಾದ ಸಂಗತಿಯಾಗಿದೆ. ಈ ಸಂಬಂಧ ನಮ್ಮ ಕಕ್ಷಿದಾರರು ಮೈಸೂರಿನ ಪ್ರಧಾನ ಸಿವಿಲ್ ನ್ಯಾಯಾಲಯ (ಕಿರಿಯ ಶ್ರೇಣಿ)ದಲ್ಲಿ ದಾವೆ (ದಾವಾ ಅಸಲು ಸಂಖ್ಯೆ 1135/2024) ಹೂಡಿದ್ದು, ಘನ ನ್ಯಾಯಾಲಯವು ತಡೆಯಾಜ್ಞೆ ನೀಡಿದೆ. ಹಾಗಾಗಿ ಯಾವ ದೃಶ್ಯ ಮಾಧ್ಯಮ–ಪತ್ರಿಕೆಗಳು ಹಾಗೂ ವ್ಯಕ್ತಿಗಳು ಅರಮನೆ ಮಂಡಳಿ ಹಾಗೂ ಉಪ ನಿರ್ದೇಶಕರ ಬಗ್ಗೆ ಅಪಪ್ರಚಾರ ಮಾಡುವುದು ನ್ಯಾಯಾಂಗ ನಿಂದನೆಯಾಗುತ್ತದೆ ಎಂದು ಅವರು ಕಾನೂನು ತಿಳುವಳಿಕೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.







| Department | Designation | Qualification | Experience |
|---|---|---|---|
| Wards | Resident Medical Officer | MBBS | 0 to 2 Years |
| Critical Care Services | Associate Consultant | MBBS/DA/DNB MD (Anaesthesia) | 0 to 2 Years |
| General Medicine | Consultant | MBBS/MD/DNB | 0 to 2 Years |
| Emergency Medicine | Associate Consultant | MBBS/DEM/MEM | 0 to 2 Years |
| Radiology | Associate Consultant | MBBS/DNB/DMRD/MD | 0 to 2 Years |
| Maintenance | Manager | B.E. Electrical Electronics/HVAC with Fire Safety Certification | 8 to10 Years |
| Physiotherapy | In-charge | Bachelor of Physiotherapy/ Master of Physiotherapy | 8 to10 Years |

## ನಕ್ಕರೆ ಅದೇ ಸ್ವರ್ಗ

ಮಗ : ಅಮ್ಮಾ..., ನಾನು ಕೊಳದಲ್ಲಿ ಈಜ್ತೀನಿ, ಪ್ಲೀಸ್...
ತಾಯಿ : ಬೇಡ ಮಗನೆ. ನೀನು ಮುಳುಗುತ್ತೀಯಾ.
ಮಗ : ಮತ್ತೆ ಅಪ್ಪ ಗಂಟೆಗಟ್ಟಲೆ ಈಜ್ತಾ ಇದ್ದಾರೆ.
ತಾಯಿ : ನಿಮ್ಮ ಅಪ್ಪ ಇನ್ಸೂರೆನ್ಸ್ ಮಾಡಿಸ್ಕೊಂಡಿದ್ದಾರಪ್ಪ..!

ಮೈಸೂರು ಮಿತ್ರ

ಭಾನುವಾರ, 21 ಜುಲೈ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

**ಅಮೃತವಾಹಿನಿ.........**

ನಡಿಯೋ ದಾರಿಯಲ್ಲಿ ನಿಂತುತ್ತ ಇದ್ದರೆ, ತಡಿಯೋ ತಾಕತ್ತು ಯಾರಿಗೂ ಇರೋದಿಲ್ಲ. – ನುಡಿಮುತ್ತು

**ವೇದ ಸುಳ್ಳಾದರೂ ಗಾದೆ ಸುಳ್ಳಾಗದು** { ಕಾಗೆಂಚು ಕೈಯಲ್ಲಿ ಕೊಟ್ಟರೆ ಕಾರಭಾರ, ಅದು ಮಾಡುವುದೇ ಉಪಕಾರ?

## ನಿಮ್ಮ ಪತ್ರಗಳು

### ತಂತ್ರಜ್ಞಾನವೇ ಅಂತಿಮವಲ್ಲ

ಮಾನ್ಯರೆ,

ಜಾಗತಿಕ ದೈತ್ಯ ಸಾಫ್ಟ್‌ವೇರ್ ಕಂಪನಿ ಮೈಕ್ರೋಸಾಫ್ಟ್ ಸೇವೆಗಳಲ್ಲಿ ಉಂಟಾದ ತಾಂತ್ರಿಕ ದೋಷಗಳ ಕಾರಣ ಅಮೆರಿಕ, ಭಾರತ ಸೇರಿದಂತೆ ಹಲವಾರು ದೇಶಗಳಲ್ಲಿ ವಿಮಾನ ಸೇವೆ, ಷೇರುಪೇಟೆ ಮತ್ತು ಹಲವಾರು ಸೇವೆಗಳಲ್ಲಿ ವ್ಯತ್ಯಾಯ ಉಂಟಾಗಿರುವುದು, ಹೈದರಾಬಾದ್ ವಿಮಾನ ನಿಲ್ದಾಣದಲ್ಲಿ ಹಳೆ ಗಂಡನ ಪಾದವೇ ಗತಿ ಎಂಬಂತೆ ಕೈ ಬರಹದ ಬೋರ್ಡಿಂಗ್ ಪಾಸ್‌ಗಳನ್ನು ವಿತರಿಸಿರುವುದು ಕೂಡ ವರದಿಯಾಗಿದೆ.

ವಿಶ್ವದಲ್ಲಿ ತಂತ್ರಜ್ಞಾನ ಮುಂದುವರಿಯುತ್ತಿದ್ದಂತೆ ಹಳೆ ಪದ್ಧತಿಗಳನ್ನು ಸಾರಸಗಟಾಗಿ ಮೂಲೆಗುಂಪು ಮಾಡಲಾಗುತ್ತಿದೆ. ಕಚೇರಿಗಳನ್ನು ಪೇಪರ್‌ಲೆಸ್ ಮಾಡುವುದಾಗಿ ಹೇಳಿ, ಕೈ ಬರಹದ ಪತ್ರಗಳಿಗೆ ಮನ್ನಣೆ ನೀಡದಿರುವುದು, ಹಣ ವರ್ಗಾವಣೆಗೆ ಫೋನ್ ಪೇ, ಗೂಗಲ್ ಪೇ, ನೆಫ್ಟ್ ಗಳನ್ನು ಅವಲಂಬಿಸಿ ಚೆಕ್, ಡಿಡಿಗಳನ್ನು ಕಡೆಗಣಿಸಲಾಗಿದೆ. ನೋಟುಗಳ ಮುದ್ರಣವನ್ನೇ ಕಡಿಮೆ ಮಾಡಲಾಗಿದೆ. ಬ್ಯಾಂಕ್‌ನಲ್ಲಿ ಖಾತೆ ತೆರೆಯಬೇಕೆಂದರೂ ಆನ್‌ಲೈನ್, ಕೆಲಸಕ್ಕೆ ಅರ್ಜಿ ಹಾಕಬೇಕು ಎಂದರೂ ಆನ್‌ಲೈನ್ ಆಗಿದೆ. ಪತ್ರಿಕೆಗಳಿಗೆ ಕಥೆ, ಕವನ ಕಳುಹಿಸಬೇಕು ಎಂದರೂ ಆನ್‌ಲೈನ್, ನುಡಿ –ಕನ್ನಡದಲ್ಲೇ ಕಳುಹಿಸಬೇಕು ಎಂದು ತಂತ್ರಜ್ಞಾನವನ್ನು ಬಳಸಲಾಗುತ್ತಿದೆ. ಮಹಾತ್ಮಗಾಂಧಿ ರೋಜ್ಗಾರ್ ಯೋಜನೆ, ನರೇಗಾ ಕೂಡ ವರ್ಷದಲ್ಲಿ 100 ದಿನ ಮಾನವ ಕೆಲಸ ನೀಡುವ ಭರವಸೆ ನೀಡಿದರೂ ಅದು ವಾಸ್ತವವಾಗಿ ಜೆಸಿಬಿಗಳಿಂದಲೇ ಆಗುತ್ತಿದೆ. ಹೀಗೆ ಎಲ್ಲದಕ್ಕೂ ತಂತ್ರಜ್ಞಾನವನ್ನೇ ಮುಂದೆ ಮಾಡಿದರೆ ಮುಂದೊಂದು ದಿನ ಅದು ವ್ಯವಸ್ಥೆಯನ್ನೇ ಬುಡಮೇಲು ಮಾಡಬಹುದು ಎನ್ನುವುದಕ್ಕೆ ಇದೊಂದು ದೃಷ್ಟಾಂತದಂತಿದೆ. ಹಳೆಯದನ್ನು ಮರೆಯದೆ ಜೊತೆ ಜೊತೆಗೆ ಅದನ್ನು ಕೂಡ ಉಳಿಸಿಕೊಂಡು ಬೆಳೆಸುವ ಕೆಲಸವೂ ಆಗಬೇಕು.

–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.

### ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲ

ಮಾನ್ಯರೆ,

ಖಾಸಗಿ ವಲಯದಲ್ಲಿ ಸ್ಥಳೀಯರಿಗೆ ಉದ್ಯೋಗದಲ್ಲಿ ಮೀಸಲಾತಿ ಕಲ್ಪಿಸುವ ವಿಧೇಯಕವನ್ನು ಸಚಿವ ಸಂಪುಟದ ಅನುಮೋದನೆ ಪಡೆದ ಕೆಲವೇ ಗಂಟೆಗಳಲ್ಲಿ ವಾಪಸ್ ಪಡೆದಿರುವುದು ಅಚ್ಚರಿಯ ಸಂಗತಿಯಾಗಿದೆ. ಈ ವಿಧೇಯಕವನ್ನು ಉದ್ಯಮಿ ಮೋಹನ್ ದಾಸ್ ಪೈ ಸೇರಿದಂತೆ ಕೆಲವರು ತೀವ್ರವಾಗಿ ವಿರೋಧಿಸಿದ್ದರ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ತನ್ನ ವರಸೆ ಬದಲಾಯಿಸಿರಬಹುದು. ಈ ವಿಷಯದ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟನೆ ನೀಡಿ, ಈ ವಿಷಯವನ್ನು ಮತ್ತೊಮ್ಮೆ ಸಚಿವ ಸಂಪುಟದ ಮುಂದೆ ಇಟ್ಟು ಇನ್ನಷ್ಟು ವಿಸ್ತಾರವಾಗಿ ಚರ್ಚೆ ನಡೆಸುವುದಾಗಿ ತಿಳಿಸಿದ್ದಾರೆ. ಅವರು ಚರ್ಚೆ ನಡೆಸುವ ಹೊತ್ತಿಗೆ ಏನೇನಾಗುವುದೋ ಯಾರಿಗೆ ಗೊತ್ತು. ಖಾಸಗಿ ರಂಗಗಳಲ್ಲಿ ಉದ್ಯೋಗದಲ್ಲಿ ಸ್ಥಳೀಯರಿಗೆ ಮೀಸಲಾತಿ ಕಲ್ಪಿಸುವುದು ಒಳ್ಳೆಯ ಉದ್ದೇಶ ಹೊಂದಿದ್ದರೂ ಸಹ ರಾಜ್ಯ ಸರ್ಕಾರ ಅದನ್ನು ಬಲವಂತವಾಗಿ ಹೇರುವಂತಹುದಲ್ಲ. ಖಾಸಗಿ ರಂಗದಲ್ಲಿ ಖಾಸಗಿಯವರು ನೇರ ಬಂಡವಾಳ ಹೂಡುವುದರಿಂದ ಸರ್ಕಾರ ತನ್ನ ಮೂಗು ತೂರಿಸುವಾಗ ಎಚ್ಚರಿಕೆ ವಹಿಸಬೇಕು. ಕನ್ನಡಿಗರಿಗೆ ಮೀಸಲಾತಿ ಕಲ್ಪಿಸಬೇಕೆಂದು ದಶಕಗಳ ಹಿಂದೆಯೇ ಸರೋಜಿನಿ ಮಹಿಷಿಯವರು ವರದಿ ನೀಡಿದ್ದರು. ಈ ವರದಿ 'ಸರೋಜಿನಿ ಮಹಿಷಿ ವರದಿ' ಎಂದೇ ಪ್ರಖ್ಯಾತವಾಯಿತಾದರೂ, ಅದನ್ನು ಜಾರಿಗೊಳಿಸಲು ಯಾವುದೇ ಪಕ್ಷದ ಸರ್ಕಾರಗಳಿಗೆ ಇದುವರೆಗೂ ಸಾಧ್ಯವಾಗದಿರುವುದು ಶೋಚನೀಯ ಸಂಗತಿ. ಪ್ರಸ್ತುತ ಈ ವರದಿಯ ಗತಿ ಏನಾಗಿದೆಯೋ ಯಾರಿಗೂ ಗೊತ್ತಿಲ್ಲ. ಒಟ್ಟಿನಲ್ಲಿ ಸರ್ಕಾರದ ಈ ನಡೆ, ಕೈಗೆ ಬಂದು ತುತ್ತು ಬಾಯಿಗೆ ಬರಲಿಲ್ಲ ಎಂಬ ಮಾತನ್ನು ಜ್ಞಾಪಕಕ್ಕೆ ತರುತ್ತದೆ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು.

### ರಾಜ್ಯದ ಹಿತಾಸಕ್ತಿ ಮುಖ್ಯವಲ್ಲವೇ...

ಮಾನ್ಯರೆ,

ಕಳೆದ ವಾರ ತಮಿಳುನಾಡಿಗೆ ಕಾವೇರಿ ನದಿ ನೀರು ಬಿಡುಗಡೆಗೆ ಸಂಬಂಧಿಸಿದಂತೆ ಮುಖ್ಯಮಂತ್ರಿಗಳು ಕರೆದಿದ್ದ ಸರ್ವಪಕ್ಷಗಳ ಸಭೆಗೆ ಮಾಜಿ ಮುಖ್ಯಮಂತ್ರಿ ಹಾಗೂ ಹಾಲಿ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ಸಭೆಗೆ ಹೋಗಿ ತಮ್ಮ ಪಕ್ಷದ ನಿಲುವನ್ನು ಹೇಳಬಹುದಿತ್ತು, ಗೋಡಂಬಿ – ದ್ರಾಕ್ಷಿ ತಿನ್ನಲು ಸಭೆಗೆ ಹೋಗಬೇಕಿತ್ತಾ? ಎಂದು ಮಾಧ್ಯಮಗಳ ಮುಂದೆ ಹೇಳಿಕೆ ನೀಡುವುದು ಎಷ್ಟರ ಮಟ್ಟಿಗೆ ಸರಿ. ಇವರು ಕಾವೇರಿ ವಿಚಾರದಲ್ಲಿ ಪಲಾಯನವಾದಿ ಎಂದೇ ಹೇಳಬೇಕಾಗುತ್ತದೆ. ರಾಜ್ಯದ ಜನತೆಗೆ ನೆಲ –ಜಲ ವಿಚಾರದಲ್ಲಿ ಧಕ್ಕೆ ಆದಾಗ, ರಾಜ್ಯದ ಹಿತಾಸಕ್ತಿ ಕಾಪಾಡುವುದು ಎಲ್ಲಾ ರಾಜಕೀಯ ಪಕ್ಷಗಳ ಮತ್ತು ನಾಯಕರುಗಳ ಆದ್ಯ ಕರ್ತವ್ಯವಾಗಬೇಕು.

ಹಿಂದೆ ಬಿಜೆಪಿ ಸರ್ಕಾರದಲ್ಲಿ ಕೇಂದ್ರದಲ್ಲಿ ಸಚಿವರಾಗಿದ್ದ ಅನಂತ್ ಕುಮಾರ್ ಅವರು ಕಾವೇರಿ ನೀರಿನ ವಿಚಾರ ಬಂದಾಗ ಪಕ್ಷಭೇದ ಮರೆತು ರಾಜ್ಯದ ಹಿತಾಸಕ್ತಿ ಕಾಪಾಡಲು ಮುತುವರ್ಜಿ ವಹಿಸಿದ ಅನೇಕ ಸಂದರ್ಭಗಳಿವೆ. ಅನಂತ್ ಕುಮಾರ್ ಅವರನ್ನು ನೋಡಿಯಾದರೂ ನಮ್ಮ ನಾಯಕರು ಕಲಿಯಲಿ.

–ಬೂಕನಕೆರೆ ವಿಜೇಂದ್ರ, ಕುವೆಂಪು ನಗರ, ಮೈಸೂರು.

### ಕಾವೇರಿ ಸಮಸ್ಯೆಗೆ ಶಾಶ್ವತ ಪರಿಹಾರ ಸಿಗುವುದೇ?

ಮಾನ್ಯರೆ,

ಲೋಕಸಭಾ ಚುನಾವಣಾ ಪ್ರಚಾರದ ವಿಚಾರಗಳನ್ನು ಒಮ್ಮೆ ಗಮನಿಸೋಣ. ಚುನಾವಣೆಯಲ್ಲಿ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಅವರನ್ನು ಗೆಲ್ಲಿಸಿ ಲೋಕಸಭೆಗೆ ಕಳುಹಿಸಿದರೆ ಕಾವೇರಿ ನದಿ ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರ ದೊರೆಯಲಿದೆ ಎಂದು ಹೇಳಿದವರು ಹಲವು ನಾಯಕರು. ಇಂದು ಆ ಕೆಲಸವನ್ನು ಮಂಡ್ಯ ಜಿಲ್ಲೆಯ ಮತದಾರರು ಚಾಚು ತಪ್ಪದೆ ಮಾಡಿದ್ದಾರೆ. ಕುಮಾರಸ್ವಾಮಿಯವರನ್ನು ಗೆಲ್ಲಿಸಿ ಲೋಕಸಭೆಗೆ ಆಯ್ಕೆ ಮಾಡಿದ್ದಾರೆ. ಸಾಲದೆಂಬಂತೆ ಕೇಂದ್ರ ಸರ್ಕಾರದ ಸಚಿವರೂ ಆಗಿದ್ದಾರೆ. ಆದರೆ ಚುನಾವಣೆಗೂ ಮುನ್ನ ಆಡಿದ ಮಾತು ಕುಮಾರಸ್ವಾಮಿ ಮತ್ತು ಅವರ ನಾಯಕರು ಮರೆಯುವಂತಿಲ್ಲ. ಇದನ್ನು ಕರ್ನಾಟಕದ ಜನರು ಮರೆಯುವುದಿಲ್ಲ. ಈಗಾಗಲೇ ಕರ್ನಾಟಕದ ವಿರುದ್ಧ ತಮಿಳುನಾಡು ಸುಪ್ರೀಂ ಮೊರೆ ಹೋಗುತ್ತಿದೆ. ಇದರಿಂದ ಕರ್ನಾಟಕಕ್ಕೆ ಪ್ರತಿವರ್ಷ ಅನ್ಯಾಯ ಆಗುತ್ತಲೇ ಇದೆ. ರಾಜ್ಯದ ರೈತರ ಹಿತದೃಷ್ಟಿಯಿಂದ ಆಡಿದ ಮಾತಿನಂತೆ ಕುಮಾರಸ್ವಾಮಿ ಮತ್ತವರ ನಾಯಕರು ಕಾವೇರಿ ಸಮಸ್ಯೆಗೆ ಶಾಶ್ವತ ಪರಿಹಾರ ಒದಗಿಸಲಿ.


–ದಡದಹಳ್ಳಿರಮೇಶ್, ಚಂದಕವಾಡಿ ಹೋಬಳಿ, ಚಾಮರಾಜನಗರ ಜಿಲ್ಲೆ.



ಡಾ.ರಮಾ ವಿ. ಬೆಣ್ಣೂರ್
ಸಂಗೀತ ವಿಮರ್ಶಕರು
ಮೊ: 99452 82346

## ನಾದಲಹರಿ

# ವಿದೇಶದಲ್ಲಿ ವೇದಾಂತ



1893ರಲ್ಲಿ ಚಿಕಾಗೊದಲ್ಲಿ ನಡೆದ ವಿಶ್ವಧರ್ಮ ಸಮ್ಮೇಳನದಲ್ಲಿ ಭಾರತದ ಸ್ವಾಮಿ ವಿವೇಕಾನಂದರು ಭಾಗವಹಿಸಿ, ಇಡೀ ವಿಶ್ವದ ಗಮನವನ್ನು ಸೆಳೆದ ಸಂಗತಿ ಈಗ ಇತಿಹಾಸ. ಜಗತ್ತಿಗೆ ಭಾರತದ ವೇದಾಂತ ದರ್ಶನ, ಅದರ ಸವಿ ಉಣಬಡಿಸಿದ್ದಲ್ಲದೆ ರಾಮಕೃಷ್ಣ ಪರಮಹಂಸರ ಬೋಧನೆಗಳಲ್ಲಿ ಹಾಗೂ ವೇದಾಂತದಲ್ಲಿ ಆಸಕ್ತಿ ಉಳ್ಳವರಿಗೆ ಅವು ಸದಾ ಲಭ್ಯವಾಗುವಂತೆ ಏರ್ಪಾಡು ಮಾಡಿದ್ದೂ ಸಹ ಅವರ ಮಹಾನ್ ಕಾರ್ಯಗಳಲ್ಲೊಂದಾಗಿದೆ. ತಮ್ಮ ಗುರುಗಳು ಕಂಡ ಸತ್ಯದ ಪರಿಮಳವನ್ನು ಎಲ್ಲ ಮಾನವರೂ ಸವಿಯಲೆಂಬ ಸದುದ್ದೇಶದಿಂದ ಅವರು ಆರಂಭಿಸಿದ ವೇದಾಂತ ಸೊಸೈಟಿಯ ಶಾಖೆಗಳು ಇಂದು ವಿದೇಶಗಳಲ್ಲೆಲ್ಲ ಹರಡಿ, ಭಾರತೀಯ ವೇದಾಂತದ ಅಮೃತವನ್ನು ಉಣಬಡಿಸುತ್ತಿವೆ. ಅನ್ಯ ಧರ್ಮ ಸಹಿಷ್ಣುತೆಯೊಂದಿಗೆ ಎಲ್ಲ ಧರ್ಮಗಳೂ ಒಂದೇ ಸತ್ಯದೆಡೆಗೆ ಒಯ್ಯುವ ಪಥಗಳು ಎಂಬುದನ್ನು ಒಪ್ಪಿಕೊಳ್ಳುವ ಈ ಕೇಂದ್ರಗಳು ವೇದಾಂತ ತತ್ತ್ವದ ಹಿನ್ನೆಲೆಯಲ್ಲಿ ತಮ್ಮ ತಮ್ಮ ಧರ್ಮಗಳನ್ನು ಗಾಢವಾಗಿ ಅರ್ಥಮಾಡಿಕೊಳ್ಳಲು ಸಹಕಾರಿ.

ಧಾರ್ಮಿಕ ಚೈತನ್ಯ ಹಾಗೂ ಆಧ್ಯಾತ್ಮಿಕ ಸತ್ಯಗಳನ್ನು ನೀಡುವ ದೆಸೆಯಲ್ಲಿ ಕೆಲಸ ಮಾಡುವುದು ಒಂದು ಸವಾಲೇ ಸರಿ. ಏಕೆಂದರೆ ಪಾಶ್ಚಾತ್ಯರ ಸಂಸ್ಕೃತಿ ಹಾಗೂ ವಿಚಾರಧಾರೆಯು ಭಾರತೀಯರಿಗಿಂತ ತೀರಾ ಭಿನ್ನವಾದುದು. ಹಾಗಿರುವಾಗ ಭಾರತದಲ್ಲೇ ಹುಟ್ಟಿ ಬೆಳೆದವರಿಗೆ ಇಲ್ಲಿನ ವೇದಾಂತದ ವಿಚಾರಗಳು (ಅವರ ಹಿನ್ನೆಲೆಯ ಕಾರಣದಿಂದಾಗಿ) ಪರಿಚಿತ ಎಂದೆನಿಸುವಂತೆ ವಿದೇಶಿಯರಿಗೆ ಅನಿಸುವುದು ಅಷ್ಟೇನೂ ಸುಲಭವಲ್ಲ. ಸಮೃದ್ಧ ಐಹಿಕ ಭೋಗಗಳ ಮಧ್ಯೆ ಮುಕ್ತವಾಗಿರುವಂತೆ ಕಾಣಿಸುವ ಸಮಾಜದಲ್ಲಿ ಬದುಕುವ ಅಮೆರಿಕನ್ನರನ್ನು ವೇದಾಂತದೆಡೆಗೆ ಆಕರ್ಷಿಸುವುದೂ ಕಠಿಣ ಸಾಧ್ಯವೇ ಸರಿ. ಅದನ್ನು ಆಶ್ಚರ್ಯಕರ ರೀತಿಯಲ್ಲಿ ಮಾಡಿರುವ ಭಾರತೀಯರಾದ ದಿವಂಗತ ಸ್ವಾಮಿ ವಿವಿ ದಿಶಾನಂದ ಮತ್ತು ಈಗಿನ ಭಾಸ್ಕರಾನಂದ ಅವರಿಗೆ ಈ ಗರಿಮೆ ಸಲ್ಲುತ್ತದೆ. ತಮ್ಮ ಇಳಿ ವಯಸ್ಸಿನಲ್ಲೂ ಬಾಡದ ಉತ್ಸಾಹದಿಂದ ಸ್ವಾಮಿ ಭಾಸ್ಕರಾನಂದ ಅವರು ಮಾಡುತ್ತಿರುವ ಮಾನವ ಸೇವೆ ಸ್ತುತ್ಯಾರ್ಹ.

ವಿಶ್ವ ಭ್ರಾತೃತ್ವ ಮತ್ತು ಸರ್ವ ಸಮಾನತೆಗಳಲ್ಲಿ ಸಂಪೂರ್ಣ ವಿಶ್ವಾಸವಿಡುವ ರಾಮಕೃಷ್ಣಾಶ್ರಮದ ಅನುಯಾಯಿಗಳಲ್ಲಿ ಮೊದಲು ಎದ್ದು ಕಾಣುವುದು ಯಾವುದೇ ದೇಶದ, ಜನಾಂಗದ ಮಾನವರನ್ನು ತಮ್ಮವರೆಂದೇ ಭಾವಿಸಿ ಆದರಿಸುವ ಗುಣ. ಆ ರೀತಿ ಎಲ್ಲರನ್ನೂ ಪ್ರೀತಿಯಿಂದ ಕಾಣುವುದು ಸ್ವಾಮಿ ವಿವೇಕಾನಂದರ ಅನುಯಾಯಿಗಳಿಗೆ ಮಾತ್ರ ಸಾಧ್ಯವೇನೋ ಎಂದು ನನಗೆ ಅನ್ನಿಸಿದ್ದುಂಟು. ಅಮೆರಿಕಾ ಹಾಗೂ ಕೆನಡಾದಲ್ಲಿ ಸುಮಾರು 16 'ವೇದಾಂತ ಸೊಸೈಟಿ'ಗಳಿವೆ. ಅಧ್ಯಾತ್ಮಿಕವಾಗಿ ಭಾರತದ ರಾಮಕೃಷ್ಣಾಶ್ರಮಗಳನ್ನು ಅನುಸರಿಸಿದರೂ, ಇವು ಆರ್ಥಿಕವಾಗಿಯೂ ಇನ್ನಿತರ ವಿಷಯವಾಗಿಯೂ ಸ್ವತಂತ್ರವಾದ ಸಂಸ್ಥೆಗಳು. ದೈವವನ್ನು ಅರಿಯಲು, ಸಿದ್ಧಿಸಿಕೊಳ್ಳಲು ಹಾಗೂ ಮನುಷ್ಯ ಕುಲದ ಸೇವೆಯನ್ನು ಮಾಡಲೆಂದೇ ತಮ್ಮ ಜೀವಿತವನ್ನು ಮುಡು ಪಾಗಿಟ್ಟಿರುವ ಸ್ವಾಮೀಜಿಗಳನ್ನು ಇಲ್ಲಿ ಕಾಣಬಹುದು.

1938ರಲ್ಲಿ ಸ್ವಾಮಿ ವಿವಿದಿಶಾನಂದ ಅವರಿಂದ ಪಶ್ಚಿಮ ವಾಷಿಂಗ್ಟನ್ ರಾಜ್ಯದಲ್ಲಿ **'ದಿ ರಾಮಕೃಷ್ಣ ವೇದಾಂತ ಸೆಂಟರ್ ಆಫ್ ಸಿಯಾಟಲ್'** ಆರಂಭಗೊಂಡಿತು. 1979ರಲ್ಲಿ ಇದನ್ನು **'ದಿ ವೇದಾಂತ ಸೊಸೈಟಿ ಆಫ್ ವೆಸ್ಟರ್ನ್ ವಾಷಿಂಗ್ಟನ್'** ಎಂದು ಬದಲಿಸಲಾಯಿತು. ಸ್ವಾಮೀಜಿ ಅವರಿಗೆ ವಯಸ್ಸಾದ ಕಾರಣ ಅವರ ಸಹಾಯಕ್ಕೆಂದು ಭಾರತದಿಂದ ಸ್ವಾಮಿ ಭಾಸ್ಕರಾನಂದ ಅವರನ್ನು 1974ರಲ್ಲಿ ಕಳುಹಿಸಲಾಯಿತು. ಸ್ವಾಮಿ ವಿವಿದಿಶಾನಂದರ ಕಾಲಾನಂತರ ಇವರೇ ಸೊಸೈಟಿಯ ನೇತೃತ್ವವನ್ನು ವಹಿಸಿಕೊಂಡು ಅದರ ಸರ್ವತೋಮುಖ ಬೆಳವಣಿಗೆಗೆ ಕಾರಣರಾದರು. ಸಾಧನೆ, ವಿವೇಕಯುತ ನಡವಳಿಕೆ, ಪ್ರೀತಿ, ಧ್ಯಾನ ಮತ್ತು ಕೆಲಸಕಾರ್ಯಗಳ ಮೂಲಕ ಎಲ್ಲರಿಗೂ ಅನ್ವಯಿಸುವ ವೇದಾಂತದ–ಆಧ್ಯಾತ್ಮಿಕ ತತ್ತ್ವಜ್ಞಾನವನ್ನು ಹರಡುವುದು ಇದರ ಮುಖ್ಯ ಗುರಿ. ನಿಯತವಾದ ಕಾರ್ಯಕ್ರಮಗಳನ್ನು ತಪ್ಪದೇ ನಡೆಸಿ ಕೊಂಡು ಬರಲು ಟೊಂಕ ಕಟ್ಟಿನಿಂತ ಸ್ವಯಂಸೇವಕರ ಗುಂಪೇ ಇರುತ್ತದೆ. ಇದರಲ್ಲಿ ಭಾರತೀಯರಿಗಿಂತ ಅಮೆರಿಕನ್ನರ ಸಂಖ್ಯೆಯೇ ಹೆಚ್ಚು. ಪ್ರತಿ ಭಾನುವಾರ ಬೆಳಗ್ಗೆ ಧರ್ಮಕ್ಕೆ ಸಂಬಂಧಿಸಿದಂತೆ, ವೇದಾಂತದ ತತ್ತ್ವಗಳನ್ನು ಕುರಿತಂತೆ ಉಪನ್ಯಾಸವಿರುತ್ತದೆ. ಪ್ರತಿನಿತ್ಯ ಸಂಜೆ ಆರತಿ ಇರುತ್ತದೆ. ಭಾನುವಾರದ ಸಂಜೆ ನಡೆಯುವ ಮತ್ತೊಂದು ಕಾರ್ಯ ಕ್ರಮವೆಂದರೆ 'ರಾಮನಾಮ'. ಇದರಲ್ಲಿ ಸಂಸ್ಕೃತ, ಹಿಂದಿ, ಬಂಗಾಲಿ ಮತ್ತು ಇಂಗ್ಲಿಷ್ ಗೀತೆಗಳನ್ನು ಹಾಡುತ್ತಾರೆ. ಅಮೆರಿಕನ್ ಯುವಕರು ತಮ್ಮ ವಿಶಿಷ್ಟ ಉಚ್ಚಾರಣೆಯಲ್ಲಿ ಈ ಗೀತೆಗಳನ್ನು ತನ್ಮಯತೆಯಿಂದ ಹಾಡುವುದನ್ನು ನೋಡಿದಾಗ ಬೇಡವೆಂದರೂ ಮನಸ್ಸು ಭಾರತದ ಇಂದಿನ ಯುವಕರನ್ನು ನೆನೆಯುತ್ತದೆ. ರಾಮಕೃಷ್ಣರ ವಚನ ಅಥವಾ ಭಗವದ್ಗೀತೆಯನ್ನು ಕುರಿತು ಪ್ರತಿ ಮಂಗಳವಾರ ಸ್ವಾಮಿ ಭಾಸ್ಕರಾನಂದ ಅವರು ಮಾತನಾಡುತ್ತಾರೆ. ಆತ್ಮೀಯವಾಗಿ ಆದರೆ ಖಚಿತವಾಗಿ ಅವರ ವಾಗ್ಝರಿ ಹರಿಯು ತ್ತದೆ. ನೆರೆದಿರುವವರಲ್ಲಿ ಹೆಚ್ಚಿನವರು ವಿದೇಶೀಯರೆಂದು ಪ್ರತ್ಯೇಕವಾಗಿ ಹೇಳುವುದೇ ಬೇಡ. ಅಲ್ಲಿರುವ ಪ್ರತಿಯೊಬ್ಬ ಶ್ರೋತೃವೂ ತತ್ತ್ವಶಾಸ್ತ್ರವನ್ನು ಚೆನ್ನಾಗಿ ಅಭ್ಯಾಸ ಮಾಡಿಯೇ ಬಂದಿರುತ್ತಾನೆಂಬುದು ಪರಸ್ಪರರ ಪ್ರಶ್ನೋತ್ತರದಲ್ಲಿ ವಿಧಿತವಾಗುತ್ತದೆ. 'ನಾನು ನಮ್ಮ ವೇದಾಂತ ಪದ್ಧತಿಯ ವಕ್ತಾರ ನಷ್ಟೇ' ಎನ್ನುವ ಸ್ವಾಮೀಜಿ ಹಿಂಸೆ, ಕ್ರೌರ್ಯ, ಅದು ಭಾರತದ ಪುರಾಣ ದಲ್ಲಿರಲಿ ಅಥವಾ ಎಲ್ಲೇ ಇರಲಿ ಅದನ್ನು ಲವಲೇಶವೂ ಒಪ್ಪುವುದಿಲ್ಲ. ಅಂತೆಯೇ ಒಳ್ಳೆಯ ವಿಚಾರಗಳು ಕುರಾನಿನಲ್ಲಿರಲಿ, ಬೈಬಲಿನಲ್ಲಿರಲಿ ಅದನ್ನು ಪ್ರಶಂಸಿಸುತ್ತಾರೆ. ಪ್ರಾರ್ಥನೆಗೆ ಕುರಾನ್ ನೀಡುವ ಮಹತ್ವವನ್ನು ನಾನು ಇನ್ನೆಲ್ಲೂ ನೋಡಿಲ್ಲ ಎನ್ನುವ ಇವರ ಬಾಯಲ್ಲಿ ಭಾರತದ ಪುರಾಣ ಪ್ರಸಂಗಗಳು ಹೊಸ ಹೊಸ ಅರ್ಥಗಳನ್ನು ಸ್ಫುರಿಸತೊಡಗುತ್ತವೆ. ಅನೇಕ ಧರ್ಮಗ್ರಂಥಗಳ ಅಧ್ಯಯನದಿಂದ ಅವರ ಮನ ವಿಶಾಲವಾಗಿದೆ. ಯಾರೂ ಸಂಪೂರ್ಣವಾಗಿ ಒಳ್ಳೆಯವರಾಗಲಿ, ಕೆಟ್ಟವರಾಗಲಿ ಇರುವುದಿಲ್ಲ ಎನ್ನುವ ಇವರು ರಾಮನನ್ನು ಆದರಿಸುವಂತೆ ರಾವಣನನ್ನು ದುಷ್ಟನೆನ್ನದೆ ಅವನ ನಡವಳಿಕೆಗೆ ಕಾರಣಗಳನ್ನು ನೀಡುವುದನ್ನು ಕೇಳಿದಾಗ ಅವರೊಬ್ಬ ಮನಃಶಾಸ್ತ್ರಜ್ಞರೆನಿಸುತ್ತದೆ. ತಮ್ಮ ಉಪನ್ಯಾಸಗಳಲ್ಲಿ ಅವರವರ ಧರ್ಮಗ್ರಂಥಗಳಿಂದಲೇ ಉದ್ಧರಿಸುತ್ತಾ ವೇದಾಂತಕ್ಕೆ ಸಮಾನಾಂತರ ವಾಗಿಯೇ ಹೋಗುತ್ತಾರೆ. 'ನಮ್ಮ ಪದ್ಧತಿಯಲ್ಲಿ ಕಲಿತದ್ದನ್ನೇ ಅವರಿಗೆ ನೀಡುತ್ತೇನೆ' ಎನ್ನುವ ವಿನೀತಭಾವ ಅವರಲ್ಲಿ ತುಂಬಿರುತ್ತದೆ. ಅವರ ಉಪನ್ಯಾಸಗಳು ಹೆಚ್ಚು ಕಡಿಮೆ ಸಂಭಾಷಣಾ ರೂಪದಲ್ಲೇ ಇರುವುದ ರಿಂದ ವಿದೇಶೀಯರಿಗೆ ತಿಳಿಯಲು, ಕಲಿಯಲು ಮುಕ್ತ ಅವಕಾಶ.

ಈ ಇಳಿವಯಸ್ಸಿನಲ್ಲೂ ಸ್ವಾಮೀಜಿಯವರು ತಿಂಗಳಿಗೊಮ್ಮೆ ವ್ಯಾಂಕೋವರಿಗೆ ಮತ್ತು ವರುಷಕ್ಕೊಮ್ಮೆ ಹವಾಯಿಯ ವೇದಾಂತ ಸೊಸೈಟಿಗೆ ಉಪನ್ಯಾಸ ನೀಡಲು ಹೋಗುತ್ತಾರೆ. ಇವರು 'ದ ಎಸೆನ್ಷಿಯಲ್ಸ್ ಆಫ್ ಹಿಂದೂಯಿಸಂ', 'ಮೆಡಿಟೇಷನ್, ಮೈಂಡ್ ಅಂಡ್ ಪತಂಜಲಿ ಯೋಗ' 'ಜರ್ನಿ ಫ್ರಂ ಮೆನಿ ಟು ಒನ್' ಹೀಗೆ ಅನೇಕ ಹೊತ್ತಿಗೆಗಳನ್ನು ರಚಿಸಿದ್ದಾರೆ. ವೇದಾಂತ ಸೊಸೈಟಿಯಲ್ಲಿ ಪುಸ್ತಕ ಮಳಿಗೆಯೂ ಇದೆ. ಆಸಕ್ತರಿಗೆ ವೇದಾಂತ, ಧ್ಯಾನ, ಪ್ರಾರ್ಥನೆ, ಎಲ್ಲ ಧರ್ಮಗಳ ಹೊಂದಾಣಿಕೆಯ ಬಗ್ಗೆ ಹಲವಾರು ಪುಸ್ತಕಗಳು ಲಭ್ಯ. 'ಗ್ಲೋಬಲ್ ವೇದಾಂತ' ಎಂಬ ತ್ರೈಮಾಸಿಕವನ್ನೂ ಸೊಸೈಟಿ ಹೊರಡಿಸುತ್ತದೆ. ಸಿಯಾಟಲ್‌ನಿಂದ ಸುಮಾರು 45 ಮೈಲಿ ದೂರದಲ್ಲಿ 'ತಪೋವನ' ಎಂಬ ರಿಟ್ರೀಟ್ ಒಂದಿದೆ. ಅಮೆರಿಕನ್ ಮಹಿಳೆಯೊಬ್ಬಳು ತನ್ನ ಆಸ್ತಿಯನ್ನು ಸೊಸೈಟಿಗೆ ನೀಡಿದುದರಿಂದ ಇಲ್ಲಿ ತಪೋವನವನ್ನು ಸ್ವಂತ ಶ್ರಮದಿಂದ ಕಟ್ಟಲಾಯಿತು. 21 ಎಕರೆಗಳ ಈ ಜಾಗದಲ್ಲಿ ಸುಂದರವಾದ ಧ್ಯಾನ ಮಂದಿರವಿದೆ. (ಲೇಖನದ ಆರಂಭದಲ್ಲಿ ಉಲ್ಲೇಖಿಸಿರುವ) ಸ್ವಾಮಿ ಮನೀಷಾನಂದರ ನೇತೃತ್ವದಲ್ಲಿ ಬೆಳೆಸಿರುವ ತೋಟವಿದೆ. ಇಲ್ಲಿ ತಿಂಗಳಿಗೊಮ್ಮೆ ಸದಸ್ಯರು ಸೇರಿ ದಿನವಿಡೀ ಸತ್ಸಂಗದಲ್ಲಿ ಕಾಲ ಕಳೆಯುತ್ತಾರೆ.

ಸಿಯಾಟಲ್‌ನ ಸೊಸೈಟಿಯಲ್ಲೂ ಪ್ರಶಾಂತವಾದ ಧ್ಯಾನ ಮಂದಿರ ಇದೆ. ಇಲ್ಲಿನ ಪ್ರಾರ್ಥನಾ ಮಂದಿರದ ಸ್ವಾಮಿ ರಾಮಕೃಷ್ಣ ಪರಮ ಹಂಸರ ದೊಡ್ಡ ಚಿತ್ರದ ಸುತ್ತಲೂ ಎಲ್ಲ ಧರ್ಮಗಳ ಲಾಂಛನವಿದೆ. ಆಸಕ್ತಿ ಇದ್ದವರು ಧ್ಯಾನ ಮಂದಿರದಲ್ಲಿ ಧ್ಯಾನನಿರತರಾಗಬಹುದು. ಇಲ್ಲಿ ಕಳೆದ 20 ವರ್ಷಗಳಿಂದಲೂ ಸಾಧನೆ ಮಾಡುತ್ತಿರುವ ಬ್ರಹ್ಮಚಾರಿಗಳಿದ್ದಾರೆ. ಅಮೆರಿಕನ್ ಸ್ವಾಮಿಗಳಿದ್ದಾರೆ. ಈ ಘಟ್ಟ ತಲುಪಲು ಅವರು ಮೊದಲು ಮಂತ್ರ ದೀಕ್ಷೆಯನ್ನು ತೆಗೆದುಕೊಂಡು ಅನೇಕ ವರ್ಷಗಳವರೆಗೆ ಸಾಧನೆ ಮಾಡಿ ನಂತರ ಬ್ರಹ್ಮಚರ್ಯ ದೀಕ್ಷೆಯನ್ನು ತೆಗೆದುಕೊಳ್ಳಬೇಕಾಗುತ್ತದೆ.

ಹೀಗೆ ಹತ್ತಿಪ್ಪತ್ತು ವರ್ಷಗಳ ಸಾಧನೆಯ ನಂತರ ಮುಖ್ಯ ಸ್ವಾಮಿಗಳಿಗೆ ಅವರು ಅರ್ಹರೆನಿಸಿದಲ್ಲಿ ಸ್ವಾಮೀಜಿಯಾಗಲು ಭಾರತಕ್ಕೆ ಕಳುಹಿ ಸಲ್ಪಡುತ್ತಾರೆ. ವೇದಾಂತದ, ತತ್ವಜ್ಞಾನದ, ಪರಮಾನಂದದ ಅಮಲನ್ನು ತಲೆಗೆ ಏರಿಸಿಕೊಂಡವರು ಅದರ ಬೆನ್ನು ಹತ್ತುವುದು ಸಹಜವೇ! ಆಳವಾಗಿ ವೇದಾಂತವನ್ನು ಅಭ್ಯಾಸ ಮಾಡಿರುವ ಇವರು (ಅಮೆರಿಕನ್ ಸ್ವಾಮೀಜಿಗಳು) ಭಾಸ್ಕರಾನಂದ ಅವರ ಅನುಪಸ್ಥಿತಿಯಲ್ಲಿ ಉಪನ್ಯಾಸ ನೀಡುತ್ತಾರೆ. ಉಪನ್ಯಾಸದ ನಂತರ ತಾವೇ ಎಲ್ಲರಿಗೂ ಕಾಫಿ ಮಾಡಿಕೊಡುವಷ್ಟು ಸರಳತೆ ಅವರಲ್ಲಿ ಮೈಗೂಡಿರುತ್ತದೆ. ಸ್ವಾಮಿ ಭಾಸ್ಕರಾನಂದ ಅವರು 'ಯಾವುದಕ್ಕೂ ಅಂಟಿಕೊಳ್ಳದಿರುವುದು ಎಂದರೇನು?' ಎಂಬ ಪ್ರಶ್ನೆಗೆ ಒಂದೇ ಮಾತಿನಲ್ಲಿ ಉತ್ತರಿಸಿದರು "ಸ್ವಾರ್ಥವಿಲ್ಲದ ಪ್ರೀತಿಯೇ ಅಂಟಿಕೊಳ್ಳದಿರುವಿಕೆ"! ನಿಜ. ನಾನು, ನನ್ನದು ಎಂಬ ಮಮಕಾರವನ್ನು ವಿಸ್ತರಿಸಿ ನೋಡಿ–ಎಲ್ಲವನ್ನೂ ಎಲ್ಲರನ್ನೂ ಪ್ರೀತಿಸಬಲ್ಲಿರಿ. ಆದರೆ ಆಗ ಯಾವುದಕ್ಕೂ 'ನನ್ನದು' ಎಂಬ ಸ್ವಾರ್ಥ ಲೇಪನ ಇರುವುದಿಲ್ಲ.

> “ ಧಾರ್ಮಿಕ ಚೈತನ್ಯ ಹಾಗೂ ಆಧ್ಯಾತ್ಮಿಕ ಸತ್ಯಗಳನ್ನು ನೀಡುವ ದೆಸೆಯಲ್ಲಿ ಕೆಲಸ ಮಾಡುವುದು ಒಂದು ಸವಾಲೇ ಸರಿ. ಏಕೆಂದರೆ ಪಾಶ್ಚಾತ್ಯರ ಸಂಸ್ಕೃತಿ, ವಿಚಾರ ಧಾರೆಯು ಭಾರತೀಯರಿಗಿಂತ ತೀರಾ ಭಿನ್ನವಾದುದು. ಹಾಗಿರುವಾಗ ಭಾರತದಲ್ಲೇ ಹುಟ್ಟಿ ಬೆಳೆದವರಿಗೆ ಇಲ್ಲಿನ ವೇದಾಂತದ ವಿಚಾರಗಳು (ಅವರ ಹಿನ್ನೆಲೆಯ ಕಾರಣದಿಂದಾಗಿ) ಪರಿಚಿತ ಎಂದೆನಿಸುವಂತೆ ವಿದೇಶಿಯರಿಗೆ ಅನಿಸುವುದು ಅಷ್ಟೇನೂ ಸುಲಭವಲ್ಲ. ಸಮೃದ್ಧ ಐಹಿಕ ಭೋಗಗಳ ಮಧ್ಯೆ ಮುಕ್ತವಾಗಿರುವಂತೆ ಕಾಣಿಸುವ ಸಮಾಜದಲ್ಲಿ ಬದುಕುವ ಅಮೆರಿಕನ್ನರನ್ನು ವೇದಾಂತದೆಡೆಗೆ ಆಕರ್ಷಿಸುವುದೂ ಕಠಿಣ ಸಾಧ್ಯವೇ ಸರಿ.

# ನಮ್ಮ ಮೈಸೂರಿನ ಅಸಾಮಾನ್ಯರು...



ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರಿಂದ ಹಿಡಿದು ಯದುವಂಶದ ಕೊನೆಯ ಮಹಾರಾಜರಾದ ಜಯಚಾಮರಾಜ ಒಡೆಯರ್ ಆಡಳಿತದ ಅವಧಿಯವರೆಗೆ ಅನೇಕ ಶ್ರೇಷ್ಠ ಮಹನೀಯರು ಮೈಸೂರು ರಾಜ್ಯದಲ್ಲಿ ಗಣನೀಯ ಸೇವೆ ಸಲ್ಲಿಸಿದ್ದಾರೆ. ಅಂತಹ ಕೆಲವರ ಹೆಸರುಗಳನ್ನು ಮೈಸೂರು ಚರಿತ್ರೆಗೆ ಸಂಬಂಧಪಟ್ಟ ಇತಿಹಾಸದ ಪುಸ್ತಕಗಳಲ್ಲಿ ಪ್ರಸ್ತಾಪಿಸಿರುವುದನ್ನು ನಾವು ಕಾಣುತ್ತೇವೆ. ಆಡಳಿತದ ಪ್ರಮುಖ ಹುದ್ದೆಯಲ್ಲಿದ್ದು, ಗಣನೀಯ ಸೇವೆ ಸಲ್ಲಿಸಿದ್ದ ಕೆಲವರ ಹೆಸರುಗಳು ಅವುಗಳಲ್ಲಿ ಕಂಡು ಬಂದರೂ, ಅವರಂತೆಯೇ ಅಪೂರ್ವ ಸೇವೆ ಸಲ್ಲಿಸಿರುವ ಇತರ ನೂರಾರು ಮಂದಿ ಎಲ್ಲಿಯೂ ಪ್ರಸ್ತಾಪಗೊಳ್ಳದೆ ಎಲೆಮರೆಕಾಯಿಯಾಗಿ ಉಳಿದು ಹೋಗಿದ್ದಾರೆ. ನೆನಪಿನ ಅಂಗಳದಿಂದ ಜಾರಿ ಹೋಗಿದ್ದಾರೆ. ಹಾಗೆ ಸೇವೆ ಸಲ್ಲಿಸಿದರಲ್ಲಿ ಹಲವಾರು ಮಂದಿ ಅಂದಿಗೆ ಖ್ಯಾತನಾಮರಾಗಿದ್ದರೂ ಇಂದು ಅವರ ಬಗ್ಗೆ ನಮಗೆ ಹೆಚ್ಚು ತಿಳಿಯದೆ ಹೋಗಿದೆ. ನೆನಪಿನಿಂದ ಅಳಿಸಿಹೋಗಿದ್ದಾರೆ. ಕೆಲವರ ಸೇವೆಯನ್ನಾದರೂ ಇಲ್ಲಿ ಗುರುತಿಸುವ ಪ್ರಯತ್ನ ನನ್ನದು. ಇಂತಹ ಪ್ರಯತ್ನ ಬಹಳ ಹಿಂದೆಯೇ ಪ್ರಾರಂಭಿಸುವ ಉದ್ದೇಶ ಹೊಂದಿದ್ದರೂ, ಅದು ಈಗ ಸಾಧ್ಯವಾಗುತ್ತಿದೆ. ನೆನಪಿನಂಗಳದಿಂದ ಮರೆಯಾದ ಮಹನೀಯರ ಪರಿಚಯ ಒಂದು ಮಾಲಿಕೆಯಾಗಿ ಪ್ರಕಟಗೊಳ್ಳಲಿದೆ. ಅವು 'ಮೈಸೂರು ಮಿತ್ರ' ಓದುಗರಿಗೆ ಮೆಚ್ಚುಗೆಯಾದರೆ, ಅದೇ ನನಗೆ ಬರೆದ ತೃಪ್ತಿ.



## 28. 'ಭಿಷಕ್‌ರತ್ನ' ವೈ. ಲಕ್ಷ್ಮೀನರಸಿಂಹ ಶಾಸ್ತ್ರಿಗಳು



ಗೌರಿ ಸತ್ಯ
ಹಿರಿಯ ಪತ್ರಕರ್ತರು
ಮೊ. 87627 88685

ಮೈಸೂರಿನಲ್ಲಿ ಆಯುರ್ವೇದದ ಏಳಿಗೆಗೆ ಹಲವಾರು ಮಂದಿ ವೈದ್ಯ ಪಂಡಿತರು ದುಡಿದಿದ್ದಾರೆ. ವೈದ್ಯ ಪದ್ಧತಿ ಮಾತ್ರವಲ್ಲದೆ ಆಯುರ್ವೇದ ಶಿಕ್ಷಣ ಬಲವಾಗಿ ಬೇರೂರಲು ಹಲವರು ಶ್ರಮಿಸಿದ್ದಾರೆ. ಅವರಲ್ಲಿ ಮುಂಚೂಣಿಯಲ್ಲಿರುವ ಒಬ್ಬರೆಂದರೆ ವೈ.ಲಕ್ಷ್ಮೀನರಸಿಂಹ ಪಂಡಿತರು. ಸರ್ ಎಂ.ವಿಶ್ವೇಶ್ವರಯ್ಯ ವೃತ್ತದಲ್ಲಿ ಕಾಣುವ ಸುಂದರ ವಾಸ್ತುಶಿಲ್ಪದ ಆಯುರ್ವೇದ ಮಹಾ ಪಾಠಶಾಲೆ ಮತ್ತು ಆಸ್ಪತ್ರೆ ಈ ಹಿರಿಯ ಪಂಡಿತರ ಶ್ರಮದ ಕೊಡುಗೆಯಾಗಿ ನಿಂತಿದೆ. ಶತಮಾನೋತ್ಸವವನ್ನು ದಾಟಿ ಇಂದಿಗೂ ಉತ್ತಮ ಶಿಕ್ಷಣ ಮತ್ತು ಚಿಕಿತ್ಸೆ ನೀಡುತ್ತಾ ಬಂದಿದೆ.

ವೈ.ಲಕ್ಷ್ಮೀನರಸಿಂಹ ಶಾಸ್ತ್ರಿಗಳು ಅನುವಂಶಿಕವಾಗಿ ವೈದ್ಯ ವೃತ್ತಿಯನ್ನು ನಡೆಸುತ್ತಿದ್ದ ಮನೆತನದಲ್ಲಿ 1884ರಲ್ಲಿ ಬೆಂಗಳೂರು ಜಿಲ್ಲೆಯ ತ್ಯಾಮಗೊಂಡ್ಲು ಗ್ರಾಮದಲ್ಲಿ ಜನಿಸಿದರು. ಸಂಸ್ಕೃತ ವಿದ್ವಾಂಸರೂ ಆದ ಇವರ ತಂದೆ ಯೋಗಾನರಸಿಂಹ ಭಟ್ಟರು ಆಯುರ್ವೇದ ಶಾಸ್ತ್ರಜ್ಞರೂ ಆಗಿದ್ದರು. ತಂದೆಯವರ ಮಾರ್ಗವನ್ನೇ ಅನುಸರಿಸಿ ಲಕ್ಷ್ಮೀ ನರಸಿಂಹ ಶಾಸ್ತ್ರಿಗಳು 1909ರಲ್ಲಿ ಮೈಸೂರಿನ ಆಯುರ್ವೇದ ಪಾಠಶಾಲೆಯನ್ನು ಸೇರಿ 1914ರಲ್ಲಿ ಉನ್ನತ ಪ್ರೌಢಿಮೆಯಿಂದ ಉತ್ತೀರ್ಣರಾಗಿ 'ಆಯುರ್ವೇದ ವಿದ್ವಾನ್' ಪದವಿ ಗಳಿಸಿದರು. ಸರ್ಕಾರ ಕೊಡುತ್ತಿದ್ದ ವಿದ್ಯಾರ್ಥಿವೇತನ ಪಡೆದು ಕಲ್ಕತ್ತಾ ನಗರಕ್ಕೆ ತೆರಳಿ ಅಲ್ಲಿ ಎರಡು ವರ್ಷ ಅಧ್ಯಯನ ಮಾಡಿ "ಭಿಷಕ್ ಚೂಡಾಮಣಿ" ಎಂಬ ಸ್ನಾತಕೋತ್ತರ ಪದವಿ ಪಡೆದು ಹಿಂತಿರುಗಿದರು. ಇವರ ಶಾಸ್ತ್ರ ಪ್ರಾವೀಣ್ಯತೆಯನ್ನು ಕೇಳಿ ಮೈಸೂರು ಸರ್ಕಾರ ಇವರನ್ನು ದಾವಣಗೆರೆ ಪುರಸಭೆ ಸ್ಥಾಪಿಸಿದ ಆಯುರ್ವೇದ ವೈದ್ಯಶಾಲೆಗೆ ಪ್ರಥಮ ವೈದ್ಯರನ್ನಾಗಿ ನೇಮಿಸಿತು. ಮೊದಲಿಗೆ ಇವರು ಇಲ್ಲಿ ಖ್ಯಾತಿ ಪಡೆದರು.

1927ರಲ್ಲಿ ಇವರಿಗೆ ಮತ್ತೆ ವಿದ್ಯಾರ್ಥಿ ವೇತನ ನೀಡಿ ಆಧುನಿಕ ವೈದ್ಯಕೀಯ ವಿಜ್ಞಾನವನ್ನು ಕಲಿಯಲು ಕಳುಹಿಸಲಾಯಿತು. ಅಲ್ಲಿಂದ ಹಿಂತಿರುಗಿದ ಮೇಲೆ ಅವರನ್ನು ಆಯುರ್ವೇದ ಕಾಲೇಜಿನ ಪ್ರಿನ್ಸಿಪಾಲರನ್ನಾಗಿ ನೇಮಿಸಲಾಯಿತು. ಆಗ ಕಾಲೇಜಿಗೆ ವಿಶಾಲವಾದ ಸ್ವಂತ ಕಟ್ಟಡವಿರಲಿಲ್ಲ. ಇದನ್ನು ಕಂಡ ಲಕ್ಷ್ಮೀನರಸಿಂಹ ಶಾಸ್ತ್ರಿಗಳು ವೈದ್ಯರತ್ನ ಗುಂಡ್ಲುಪಂಡಿತ ಲಕ್ಷ್ಮಣಾಚಾರ್ಯರು ಮತ್ತಿತರರಿಂದ ಹಣ ಸಂಗ್ರಹಿಸಿ ಎರಡು ವರ್ಷಗಳಲ್ಲೇ ವಿಶಾಲವಾದ ಕಟ್ಟಡವನ್ನು ಕಟ್ಟಿಸಿದರು. ಜೊತೆಗೆ ಸುಸಜ್ಜಿತವಾದ ಆಸ್ಪತ್ರೆ, ಮೂಲಿಕಾ ವನ ಮುಂತಾದವುಗಳನ್ನು ವ್ಯವಸ್ಥೆ ಮಾಡಿದರು. ಅಲ್ಲದೆ ಬೋಧನಾ ವಿಷಯಗಳನ್ನು ಅಂದಿನ ಅವಶ್ಯಕತೆಗೆ ತಕ್ಕಂತೆ ಪುನರ್ ರಚಿಸಿದರು.

1930ರ ಡಿಸೆಂಬರ್ 27ರಿಂದ 29ರವರೆಗೆ ಮೂರು ದಿನಗಳ 21ನೇ ಅಖಿಲ ಭಾರತ ಆಯುರ್ವೇದ ಸಮ್ಮೇಳನವನ್ನು ಮೈಸೂರಿನಲ್ಲಿ ಏರ್ಪಡಿಸಿ ಅಖಿಲ ಭಾರತ ಮನ್ನಣೆ ಸಿಗುವಂತೆ ಮಾಡಿದರು. ಸಮ್ಮೇಳನದ ಭಾಗವಾಗಿ ಒಂದು ವಸ್ತುಪ್ರದರ್ಶನವನ್ನೂ ಏರ್ಪಡಿಸಲಾಗಿತ್ತು. ಇದೇ ಸಂದರ್ಭದಲ್ಲಿ ಡಿಸೆಂಬರ್ 29ರಂದು ಆರನೇ ಕರ್ನಾಟಕ ಆಯುರ್ವೇದ ಸಮ್ಮೇಳನವನ್ನೂ ಏರ್ಪಡಿಸಲಾಗಿತ್ತು. ಎರಡೂ ಸಮ್ಮೇಳನಗಳು ಇರ್ವಿನ್ ರಸ್ತೆಯಲ್ಲಿರುವ ಹಿಂದಿನ ದಸರಾ ವಸ್ತುಪ್ರದರ್ಶನ ಕಟ್ಟಡದಲ್ಲಿ ವ್ಯವಸ್ಥೆಯಾಗಿತ್ತು. ಸಮ್ಮೇಳನವನ್ನು ವ್ಯವಸ್ಥೆ ಮಾಡಲು ಮಹಾರಾಜರು ಮತ್ತು ಅವರ ಸರ್ಕಾರ ನೆರವು ನೀಡಿತ್ತು. ಲಕ್ಷ್ಮೀನಾರಾಯಣ ಶಾಸ್ತ್ರಿಗಳು ಸಮ್ಮೇಳನದ ಪ್ರಧಾನ ಕಾರ್ಯದರ್ಶಿಯಾಗಿದ್ದು, ಇಡೀ ಸಮ್ಮೇಳನ ಯಶಸ್ವಿಯಾಗಿ ನಡೆಯುವಂತೆ ಮುತುವರ್ಜಿ ವಹಿಸಿದ್ದರು. ಕಲ್ಕತ್ತದ ಮಹೋಮಹಾಪಾಧ್ಯಾಯ ಕವಿರಾಜ್ ಡಾ.ಗಣನಾಥ ಸೇನ್ ಸರಸ್ವತಿ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಸಮ್ಮೇಳನದ ಪೂರ್ವಭಾವಿಯಾಗಿ ಕರ್ನಾಟಕದ ಪ್ರಮುಖ ಆಯುರ್ವೇದ ವೈದ್ಯರ ಮತ್ತು ಆಯುರ್ವೇದಾಭಿಮಾನಿಗಳ ಸಭೆಯೊಂದನ್ನು ಶಾಸ್ತ್ರಿಗಳು ಕರೆದಿದ್ದರು. ಸಭೆಯಲ್ಲಿ ಸಮ್ಮೇಳನದ ಸ್ವಾಗತ ಸಮಿತಿಯನ್ನು ರಚಿಸುವುದರ ಜೊತೆಗೆ ಸಮ್ಮೇಳನದ ವ್ಯವಸ್ಥೆಯ ಬಗ್ಗೆ ಚರ್ಚಿಸಿತು.

ಲಕ್ಷ್ಮೀನರಸಿಂಹ ಶಾಸ್ತ್ರಿಗಳು ಮುಂದೆ ನಡೆದ ಆಯುರ್ವೇದ ಸಮ್ಮೇಳನಗಳಲ್ಲಿ ಮೈಸೂರನ್ನು ಪ್ರತಿನಿಧಿಸಿ ಭಾಗವಹಿಸಿದರು. ಇವರ ಇನ್ನೊಂದು ಕೊಡುಗೆ ಅಖಿಲ ಕರ್ನಾಟಕ ಆಯುರ್ವೇದ ಮಂಡಲ ಮತ್ತು ಮೈಸೂರು ವೈದ್ಯ ಸಂಘದ ರಚನೆ.

ನಿವೃತ್ತರಾದ ಮೇಲೆ ಲಕ್ಷ್ಮೀನರಸಿಂಹ ಶಾಸ್ತ್ರಿಗಳು ನಿಖಿಲ ಕರ್ನಾಟಕ ಆಯುರ್ವೇದ ಮಂಡಲದ ಆಶ್ರಯದಲ್ಲಿ 1942ರಲ್ಲಿ ಒಂದು ಚಿಕಿತ್ಸಾಲಯವನ್ನು ಪ್ರಾರಂಭಿಸಿದರು. 1968 ರವರೆಗೆ ತಾವೇ ಅದರ ನಿರ್ವಾಹಕ ವ್ಯವಸ್ಥಾಪಕರಾಗಿದ್ದು ಸಂಸ್ಥೆಗೆ ಭದ್ರ ಬುನಾದಿ ಹಾಕಿಕೊಟ್ಟರು. ಅದಿಂದು ಕರ್ನಾಟಕದ ಒಂದು ಪ್ರಮುಖ ಔಷಧಾಲಯವಾಗಿ ಹೆಸರು ಗಳಿಸಿದೆ. 'ಅಖಿಲ ಕರ್ನಾಟಕ ಸೆಂಟ್ರಲ್ ಆಯುರ್ವೇದ ಫಾರ್ಮಸಿ ಲಿ.' ಹೆಸರಿನಲ್ಲಿ ಆಯುರ್ವೇದ ಔಷಧಿಗಳನ್ನು ಪೂರೈಸುವ ಉದ್ಯಮವಾಗಿ ಮುನ್ನಡೆಯುತ್ತಿದೆ. ಮೈಸೂರಿನ ಶ್ರೀರಾಂಪುರದಲ್ಲಿ ಅದು ತನ್ನ ಔಷಧಿಗಳ ತಯಾರಿಕಾ ಘಟಕವನ್ನು ಹೊಂದಿದೆ. ನಾಲ್ಕು ನೂರಕ್ಕೂ ಹೆಚ್ಚು ಷೇರುಗಳನ್ನು ಹೊಂದಿ ರಾಜ್ಯದಲ್ಲಿ ಸಾರ್ವಜನಿಕ ಸಹಭಾಗಿತ್ವದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಏಕೈಕ ಸಂಸ್ಥೆ ಎಂಬ ಹೆಗ್ಗಳಿಕೆಯನ್ನು ಈ ಸಂಸ್ಥೆ ಗಳಿಸಿದೆ. ಮೈಸೂರಿನಲ್ಲಿ ನಾಲ್ಕು, ಬೆಂಗಳೂರಿನಲ್ಲಿ ಎರಡು ಶಾಖೆಗಳನ್ನು ಹೊಂದಿದ್ದು ಶಾಸ್ತ್ರಿಗಳು 75 ವರ್ಷಗಳ ಹಿಂದೆ ಔಷಧಾಲಯವನ್ನು ಸ್ಥಾಪಿಸಿದ ಉದ್ದೇಶವನ್ನು ಸಫಲಗೊಳಿಸಿದೆ.

ತಮ್ಮ ಚಿಕಿತ್ಸಾಲಯವನ್ನು ಸ್ಥಾಪಿಸಿದ ನಂತರವೇ ಅವರು 1958ರಲ್ಲಿ ಆಯುರ್ವೇದ ಕಾಲೇಜಿನ ಫಾರ್ಮಸಿಯನ್ನು ರೂಪಿಸಿದ್ದು. ಲಕ್ಷ್ಮೀ ನರಸಿಂಹ ಶಾಸ್ತ್ರಿಗಳ ಕಾರ್ಯ ಸಾಧನೆಯನ್ನು ಗಮನಿಸಿ ಮೈಸೂರು ಸರ್ಕಾರ ಆಯುರ್ವೇದದ ಅಭಿವೃದ್ಧಿಗೆ ರಚಿಸಿದ ಎಲ್ಲಾ ಸಮಿತಿಗಳಲ್ಲಿ ಅವರನ್ನು ನೇಮಿಸಿತ್ತು. ಭಾರತೀಯ ವೈದ್ಯ ಪದ್ಧತಿಯ ಮಂಡಲಿ ಮತ್ತು ರಿಜಿಸ್ಟ್ರೇಶನ್ ಮಂಡಲಿಗಳೂ ಅವುಗಳಲ್ಲಿ ಸೇರಿದ್ದವು.

*Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com*

# ಶಿರೂರು ಬಳಿ ಗುಡ್ಡ ಕುಸಿತ ಸ್ಥಳಕ್ಕೆ ಕೇಂದ್ರ ಸಚಿವ ಕುಮಾರಸ್ವಾಮಿ ಭೇಟಿ

## ರಾಜ್ಯ ಸರ್ಕಾರದ ವಿರುದ್ಧ ಜೆಡಿಎಸ್ ವಾಗ್ದಾಳಿ



ಉತ್ತರ ಕರ್ನಾಟಕದ ಶಿರೂರುಗುಡ್ಡ ಕುಸಿತ ಪ್ರದೇಶಕ್ಕೆ ಹೆಚ್.ಡಿ.ಕುಮಾರಸ್ವಾಮಿ ಭೇಟಿ ನೀಡಿ, ಪರಿಶೀಲಿಸಿದರು.

ಶಿರೂರು, ಜು.20– ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲೂಕಿನ ಶಿರೂರು ಹೆದ್ದಾರಿ ಬಳಿ ಗುಡ್ಡ ಕುಸಿದಿದ್ದ ಸ್ಥಳಕ್ಕೆ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಈ ಸಂದರ್ಭದಲ್ಲಿ ಕೇಂದ್ರ ಸಚಿವರು ಮಳೆ, ನೆರೆ ಪರಿಸ್ಥಿತಿ, ಹಾನಿ ಇತ್ಯಾದಿಗಳ ಬಗ್ಗೆ ಜಿಲ್ಲಾಧಿಕಾರಿಗಳಿಂದ ಮಾಹಿತಿ ಪಡೆದುಕೊಂಡರು. ವಿಧಾನಸಭೆಯ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಸಿ.ಬಿ. ಸುರೇಶ್ ಬಾಬು ಸೇರಿದಂತೆ ಹಲವರು ಸಚಿವರ ಜತೆಯಲ್ಲಿ ಇದ್ದರು.

ಈ ವೇಳೆ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಕೇಂದ್ರ ಸಚಿವ ಕುಮಾರಸ್ವಾಮಿ, ರಾಜ್ಯದಲ್ಲಿ ನಡೆಯುತ್ತಿರುವ ರಾಜಕೀಯ ಘಟನೆಗಳು ಏನೇ ಇರಲಿ, ಇಂತಹ ಪ್ರಾಕೃತಿಕ ವಿಕೋಪದ ಸಂದರ್ಭದಲ್ಲಿ ಸ್ಥಳಕ್ಕೆ ಭೇಟಿ ನೀಡಿ ಖುದ್ದು ಪರಿಶೀಲಿಸಬೇಕು. ಬೆಂಗಳೂರಿನಲ್ಲಿ ಕೂತು ಆದೇಶ ನೀಡುವುದಲ್ಲ ಎಂದರು.

ಈ ಸಂದರ್ಭದಲ್ಲಿ ಕೇಂದ್ರ ಹಾಗೂ ರಾಜ್ಯ ಎಂದು ರಾಜ್ಯ ಸರ್ಕಾರ ರಾಜಕಾರಣ ಮಾಡಬಾರದು. ಹಾನಿಯಾದ ಕುಟುಂಬದ ಜೊತೆ ಸರ್ಕಾರ ಇರಬೇಕು. ಘಟನೆ ಆಗಿದ್ದರ ಬಗ್ಗೆ ನನಗೆ ಬೇಸರವಿದೆ ಎಂದರು. ಅವೈಜ್ಞಾನಿಕ ಕಾಮಗಾರಿಯಿಂದ ಘಟನೆ ನಡೆದಿದೆ ಎಂದು ಜಿಲ್ಲಾಧಿಕಾರಿ ಲಕ್ಷ್ಮಿ ಪ್ರಿಯಾ ಮಾಹಿತಿ ನೀಡಿದ್ದಾರೆ. ಈ ಘಟನೆಯಿಂದ ಒಂದೇ ಕುಟುಂಬದ ಐವರು ಮೃತಪಟ್ಟಿರುವುದು ದುರಂತ. 2018ರಲ್ಲಿ ನಾನು ಸಿಎಂ ಆಗಿದ್ದಾಗ ಕೊಡಗಿನಲ್ಲಿ ಭೂ ಕುಸಿತ ಆಗಿತ್ತು. ಆಗ ಮನೆ ಕಳೆದುಕೊಂಡವರಿಗೆ ಹತ್ತು ಲಕ್ಷ ಹಣ ಕೊಟ್ಟಿದ್ದೆವು ಎಂದು ತಮ್ಮ ಅವಧಿಯಲ್ಲಿ ನಡೆದ ಘಟನೆಯನ್ನು ನೆನೆದರು. ಇನ್ನು ಎನ್‌ಡಿಆರ್‌ಎಫ್ ಈ ಕಾರ್ಯಾಚರಣೆಯಲ್ಲಿ ಸಹಾಯ ಮಾಡುತ್ತಿದೆ. ಅದು ಕೇಂದ್ರ ಸರ್ಕಾರದ ಅಂಗವಲ್ಲವೇ, ಮೊದಲು ಇಂತಹ ಘಟನೆಯಲ್ಲಿ ರಾಜಕಾರಣ ಮಾಡು ವುದನ್ನು ರಾಜ್ಯ ಸರ್ಕಾರ ಬಿಡಲಿ ಎಂದು ವಾಗ್ದಾಳಿ ನಡೆಸಿದರು. ಇನ್ನು ಕುಮಾರಸ್ವಾಮಿಯವರು ಭೇಟಿ ನೀಡದಂತೆ ಸಿದ್ದರಾಮಯ್ಯ ಸರ್ಕಾರ ತಡೆದಿದೆ ಎಂದು ಜೆಡಿಎಸ್ ಗಂಭೀರ ಆರೋಪ ಮಾಡಿದೆ.

# ನೀಟ್ ಫಲಿತಾಂಶ ಪ್ರಕಟ: ರಾಜಸ್ಥಾನದ 149 ಅಭ್ಯರ್ಥಿಗಳಿಗೆ 700ಕ್ಕಿಂತ ಹೆಚ್ಚು ಅಂಕ

ನವದೆಹಲಿ, ಜು.20– ಸುಪ್ರೀಂಕೋರ್ಟ್ ನಿರ್ದೇಶನದ ಮೇರೆಗೆ ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ (ಎನ್‌ಟಿಎ) ಈ ವರ್ಷದ 'ನೀಟ್–ಯುಜಿ ಯ ಕೇಂದ್ರ ಮತ್ತು ನಗರವಾರು ಫಲಿತಾಂಶಗಳನ್ನು ಶನಿವಾರ ಪ್ರಕಟಿಸಿದ್ದು, ಅಭ್ಯರ್ಥಿಗಳ ಗುರುತನ್ನು ಮರೆಮಾಚಿದೆ.

ಮೇ 5ರಂದು ನಡೆದಿದ್ದ ಪರೀಕ್ಷೆಯ ಫಲಿತಾಂಶವನ್ನು ಜೂನ್ 4ರಂದೇ ಎನ್‌ಟಿಎ ಪ್ರಕಟಿಸಿತ್ತು. ಪ್ರಶ್ನೆಪತ್ರಿಕೆ ಸೋರಿಕೆ ಸೇರಿದಂತೆ ವಿವಿಧ ಬಗೆಯ ಪರೀಕ್ಷಾ ಅಕ್ರಮಗಳಿಗೆ ಸಂಬಂಧಿಸಿದ ಅರ್ಜಿಗಳ ವಿಚಾರಣೆ ನಡೆಸಿದ್ದ ಸುಪ್ರೀಂ ಕೋರ್ಟ್, ಕೇಂದ್ರವಾರು ಮತ್ತು ನಗರವಾರು ಫಲಿತಾಂಶಗಳನ್ನು ಶನಿವಾರ ಮಧ್ಯಾಹ್ನ 12 ಗಂಟೆಯೊಳಗೆ ಪ್ರಕಟಿಸುವಂತೆ ನಿರ್ದೇಶನ ನೀಡಿತ್ತು.

ಹರಿಯಾಣದ ಬಹದ್ದೂರ್‌ಗಢದಲ್ಲಿರುವ ಹರದಯಾಳ್ ಪಬ್ಲಿಕ್ ಸ್ಕೂಲ್ ಪರೀಕ್ಷಾ ಕೇಂದ್ರದಲ್ಲಿ 720ಕ್ಕೆ ಪೂರ್ಣ 720 ಅಂಕಗಳನ್ನು ಪಡೆದಿದ್ದ ಆರು ಅಭ್ಯರ್ಥಿಗಳ ಪೈಕಿ ಯಾರೊಬ್ಬರಿಗೂ ಪೂರ್ಣ ಅಂಕಗಳು ಬಂದಿಲ್ಲ. ಈ ಕೇಂದ್ರದಲ್ಲಿ 494 ಅಭ್ಯರ್ಥಿಗಳು ಪರೀಕ್ಷೆ ಬರೆದಿದ್ದರು. ಅವರಲ್ಲಿ ಒಬ್ಬರು ಗರಿಷ್ಠ ಅಂದರೆ 682 ಅಂಕಗಳನ್ನು ಪಡೆದಿದ್ದು, ಅವರೇ ಕೇಂದ್ರದ 'ಟಾಪರ್' ಆಗಿದ್ದಾರೆ. ಅಲ್ಲದೆ ಇತರ 13 ಅಭ್ಯರ್ಥಿಗಳು 600ಕ್ಕಿಂತ ಹೆಚ್ಚು ಅಂಕಗಳನ್ನು ಗಳಿಸಿದ್ದಾರೆ ಎಂಬುದು ಕೇಂದ್ರವಾರು ಫಲಿತಾಂಶದಿಂದ ಗೊತ್ತಾಗಿದೆ.

ಜೂನ್ 4ರಂದು ಪ್ರಕಟಿಸಲಾಗಿದ್ದ ಫಲಿತಾಂಶದಲ್ಲಿ ಈ ಕೇಂದ್ರದ ಆರು ಅಭ್ಯರ್ಥಿಗಳು ಪೂರ್ಣ ಅಂಕಗಳನ್ನು ಪಡೆದಿದ್ದರು. ಅಲ್ಲದೆ ಇತರ ಇಬ್ಬರು ಅಭ್ಯರ್ಥಿಗಳು ಕ್ರಮವಾಗಿ 718 ಮತ್ತು 719 ಅಂಕಗಳನ್ನು ಗಳಿಸಿದ್ದರು. ಒಂದೇ ಕೇಂದ್ರದ ಇಷ್ಟು ಅಭ್ಯರ್ಥಿಗಳು ಗರಿಷ್ಠ ಅಂಕಗಳನ್ನು ಪಡೆದಿದ್ದು ಅನುಮಾನಕ್ಕೆ ಕಾರಣವಾಗಿತ್ತು.

ಫಲಿತಾಂಶ ಪ್ರಶ್ನಿಸಿ ಕೆಲ ಅಭ್ಯರ್ಥಿಗಳು ಸುಪ್ರೀಂಕೋರ್ಟ್ ಮೊರೆಹೋದರು. ಆಗ ಕೇಂದ್ರ ಶಿಕ್ಷಣ ಸಚಿವಾಲಯವು ಈ ವಿದ್ಯಾರ್ಥಿಗಳಿಗೆ ನೀಡಿದ್ದ ಕೃಪಾಂಕಗಳನ್ನು ರದ್ದುಗೊಳಿಸಿ, ಒಟ್ಟು 1,563 ಅಭ್ಯರ್ಥಿಗಳಿಗೆ ಜೂನ್ 23ರಂದು ಮರು ಪರೀಕ್ಷೆ ನಡೆಸಿತ್ತು. ಈ ಪೈಕಿ ಸುಮಾರು 813 ಅಭ್ಯರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು. ಅವರ ಫಲಿತಾಂಶವನ್ನು ಜೂನ್ 30ರಂದು ಪ್ರಕಟಿಸಲಾಗಿತ್ತು. ಪರೀಕ್ಷೆಗೆ ಹಾಜರಾಗದ ಅಭ್ಯರ್ಥಿಗಳಿಗೆ ಕೃಪಾಂಕ ಬಿಟ್ಟು, ಅವರು ಪಡೆದಿದ್ದ ನೈಜ ಅಂಕಗಳನ್ನೇ ಅಂತಿಮಗೊಳಿಸಲಾಗಿತ್ತು.

ಜಾರ್ಖಂಡ್‌ನ ಹಜಾರಿಬಾಗ್‌ನ ಓಯಸಿಸ್ ಪಬ್ಲಿಕ್ ಸ್ಕೂಲ್‌ನ ಪ್ರಾಂಶುಪಾಲರನ್ನು ಪ್ರಶ್ನೆ ಪತ್ರಿಕೆ ಸೋರಿಕೆ ಪ್ರಕರಣದಲ್ಲಿ ಬಂಧಿಸಲಾಗಿದೆ. ಈ ಕೇಂದ್ರದಲ್ಲಿ ಯಾರೊಬ್ಬರೂ 700ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದಿಲ್ಲ. ಇಲ್ಲಿನ ಏಳು ಅಭ್ಯರ್ಥಿಗಳು 650ಕ್ಕಿಂತ ಹೆಚ್ಚು, 23 ಅಭ್ಯರ್ಥಿಗಳು 600ಕ್ಕಿಂತ ಹೆಚ್ಚು ಹಾಗೂ 46 ಅಭ್ಯರ್ಥಿಗಳು 550ಕ್ಕಿಂತ ಹೆಚ್ಚು ಅಂಕಗಳಲ್ಲಿ ಪಡೆದಿದ್ದಾರೆ. ರಾಜಸ್ಥಾನದ ಸಿಕರ್ ಜಿಲ್ಲೆಯ ಅತೀ ಹೆಚ್ಚಿನ ಅಭ್ಯರ್ಥಿಗಳು ಅತ್ಯುತ್ತಮ ಅಂಕಗಳನ್ನು ಪಡೆದು ದೇಶದ ಗಮನ ಸೆಳೆದಿದ್ದಾರೆ. ಜಿಲ್ಲೆಯ 149 ಅಭ್ಯರ್ಥಿಗಳು 700ಕ್ಕೂ ಹೆಚ್ಚು ಅಂಕಗಳನ್ನು ಗಳಿಸಿದ್ದರೆ, 2,037 ಅಭ್ಯರ್ಥಿಗಳು 650ಕ್ಕೂ ಹೆಚ್ಚು ಹಾಗೂ 4,297 ಅಭ್ಯರ್ಥಿಗಳು 600ಕ್ಕೂ ಹೆಚ್ಚು ಅಂಕಗಳನ್ನು ಗಳಿಸಿದ್ದಾರೆ.


ಗುಜರಾತ್‌ನ ರಾಜ್‌ಕೋಟ್ ಸ್ಕೂಲ್ ಆಫ್ ಎಂಜಿನಿಯರಿಂಗ್ ಕೇಂದ್ರದಲ್ಲಿ ಪರೀಕ್ಷೆಗೆ ಹಾಜರಾದ 1,968 ಅಭ್ಯರ್ಥಿಗಳ ಪೈಕಿ 112 ಅಭ್ಯರ್ಥಿಗಳು 700ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದಿದ್ದಾರೆ. ಅಲ್ಲದೆ 112 ಅಭ್ಯರ್ಥಿಗಳು 650ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದು ಗಮನಾರ್ಹ ಸಾಧನೆ ಮಾಡಿದ್ದಾರೆ. ಅಹಮದಾಬಾದ್ ಕೇಂದ್ರವೊಂದರ 676 ಅಭ್ಯರ್ಥಿಗಳ ಪೈಕಿ 12 ಅಭ್ಯರ್ಥಿಗಳು 700ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದಿದ್ದಾರೆ. ತಮಿಳುನಾಡಿನ ನಾಮಕ್ಕಲ್‌ನಲ್ಲಿ ಇರುವ ಪೊವೈ ಎಂಜಿನಿಯರಿಂಗ್ ಕಾಲೇಜಿನ ಕೇಂದ್ರದಲ್ಲಿ ಪರೀಕ್ಷೆ ಬರೆದ 1,017 ಅಭ್ಯರ್ಥಿಗಳ ಪೈಕಿ ಇಬ್ಬರು 700 ಅಂಕಗಳನ್ನು ದಾಟಿದ್ದರೆ, 52 ಅಭ್ಯರ್ಥಿಗಳು 650ಕ್ಕೂ ಹೆಚ್ಚು ಅಂಕಗಳನ್ನು ಗಳಿಸಿದ್ದಾರೆ.

# ಕನ್ನಡ ಕಿರುತೆರೆಯ ನಿರ್ದೇಶಕ ವಿನೋದ್ ದೊಂಡಾಲೆ ಆತ್ಮಹತ್ಯೆ



ಬೆಂಗಳೂರು,ಜು.20–ಕನ್ನಡ ಕಿರುತೆರೆ ಖ್ಯಾತ ನಿರ್ದೇಶಕ ವಿನೋದ್ ದೊಂಡಾಲೆ ಬೆಂಗಳೂರಿನ ನಾಗರಬಾವಿಯಲ್ಲಿ ತಮ್ಮ ನಿವಾಸದಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅತಿಥಿ, ಬೇರು, ತುತ್ತೂರಿ, ವಿಮುಕ್ತಿ ಸೇರಿದಂತೆ ಹಲವು ಚಿತ್ರಗಳಲ್ಲಿ ವಿನೋದ್ ಅವರ ಕೆಲಸ ಕಾಣಬಹುದು. ಕರಿಮಣಿ, ಶಾಂತಂ ಪಾಪಂ ಸೇರಿದಂತೆ ಅನೇಕ ಧಾರಾವಾಹಿಗಳಿಗೆ ವಿನೋದ್ ನಿರ್ದೇಶನ ಮಾಡಿದ್ದಾರೆ. ನೀನಾಸಂ ಸತೀಶ್ ನಟನೆಯ 'ಅಶೋಕ ಬ್ಲೇಡ್' ಚಿತ್ರ ನಿರ್ದೇಶನಕ್ಕೆ ಸಿದ್ಧತೆ ಮಾಡಿಕೊಂಡಿದ್ದರು. ಇನ್ನೇನು ಮುಂದಿನ ವಾರದಿಂದ ಸಿನಿಮಾದ ಚಿತ್ರೀಕರಣ ಶುರು ಮಾಡಬೇಕಿತ್ತು. ಅಷ್ಟರೊಳಗೆ ಈ ದುರ್ಘಟನೆ ನಡೆದಿದೆ.

# ಹಿರಿಯ ಪತ್ರಕರ್ತ ಈಚನೂರು ಕುಮಾರ್ ನಿಧನ



ಮೈಸೂರು, ಜು. 20–ಹಿರಿಯ ಪತ್ರಕರ್ತರು ಹಾಗೂ ಮೈಸೂರಿನ ಕುವೆಂಪುನಗರ ನಿವಾಸಿ ಈಚನೂರು ಕುಮಾರ್ (70) ಶನಿವಾರ ಬೆಳಗ್ಗೆ ನಿಧನರಾದರು. ಮೃತರು ಪುತ್ರಿ ಅಕ್ಷರ, ಪುತ್ರ ಅಜಿತ್ ಸೇರಿದಂತೆ ಅಪಾರ ಬಂಧು ಬಳಗ, ಸ್ನೇಹಿತರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿ ಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ. ಈಚನೂರು ಕುಮಾರ್ ಅವರು ಕನ್ನಡದಲ್ಲಿ 'ಮೈಸೂರಿನ ಪಾರಂಪರಿಕ ತಾಣಗಳು', 'ಚರಿತ್ರೆ ಚಂದ್ರಿಕೆ', 'ನಾಡಿಗಾಗಿ ದುಡಿದವರು', 'ಸಹಕಾರಿ ನೇತಾರ ಕಂಠೀರವ ನರಸಿಂಹರಾಜ ಒಡೆಯರ್' ಸೇರಿದಂತೆ ಹಲವಾರು ಪುಸ್ತಕಗಳನ್ನು ಬರೆದಿದ್ದಾರೆ. ಶ್ರೀಯುತರು 2005 ರಲ್ಲಿ ಕರ್ನಾಟಕ ಮಾಧ್ಯಮ ಅಕಾಡೆಮಿ ಪ್ರಶಸ್ತಿ, ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಪ್ರಶಸ್ತಿ ಸೇರಿದಂತೆ ಹಲವಾರು ಪ್ರಶಸ್ತಿಗಳಿಗೆ ಭಾಜನರಾಗಿದ್ದರು.

**ಜಿಟಿಡಿ ಸಂತಾಪ:** ಈಚನೂರು ಕುಮಾರ್ ನಿಧನದಿಂದ ಪತ್ರಿಕಾರಂಗಕ್ಕೆ ತುಂಬಲಾರದ ನಷ್ಟವಾಗಿದೆ. ಅವರು ಯುವ ಪತ್ರಕರ್ತರಿಗೆ ಮಾದರಿಯಾಗಿದ್ದರು ಎಂದು ಶಾಸಕ ಜಿ.ಟಿ. ದೇವೇಗೌಡ ಸಂತಾಪ ಸೂಚಿಸಿದ್ದಾರೆ.













ಮೈಸೂರು ಮಿತ್ರ ಭಾನುವಾರ 21 ಜುಲೈ 2024

# ಶಾಲಾ ಮಕ್ಕಳಿಗೆ ವಾರದಲ್ಲಿ ನಾಲ್ಕು ದಿನ ಮೊಟ್ಟೆ ವಿತರಣೆ



ಪೌಷ್ಟಿಕ ಆಹಾರ ನೀಡುವ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಶಿಕ್ಷಣ ಸಚಿವ ಮಧು ಬಂಗಾರಪ್ಪ, ವಿಪ್ರೋ ಅಧ್ಯಕ್ಷ ಅಜೀಂ ಪ್ರೇಮ್‌ಜಿ ದಂಪತಿ, ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಲ್.ಅತೀಕ್ ಅಹಮದ್, ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ನಸೀರ್ ಅಹಮದ್, ಖಾತರಿ ಅನುಷ್ಠಾನ ಸಮಿತಿ ಉಪಾಧ್ಯಕ್ಷ ಮೆಹರೂಜ್ ಉಪಸ್ಥಿತರಿದ್ದರು.

ಬೆಂಗಳೂರು, ಜು.20–ರಾಜ್ಯದ ಸರ್ಕಾರಿ ಮತ್ತು ಸರ್ಕಾರದಿಂದ ಅನುದಾನ ಪಡೆಯುತ್ತಿರುವ ಶಾಲೆಗಳ ಮಕ್ಕಳಿಗೆ ವಾರದಲ್ಲಿ ನಾಲ್ಕು ದಿನ ಮೊಟ್ಟೆ ವಿತರಣೆ ಮಾಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ಬೆಂಗಳೂರಿನಲ್ಲಿಂದು ಅಜೀಂ ಪ್ರೇಮ್‌ಜಿ ಫೌಂಡೇಷನ್ ಸಹಭಾಗಿತ್ವದಲ್ಲಿ ಸರ್ಕಾರಿ ಮತ್ತು ಅನುದಾನಿತ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಮಕ್ಕಳಿಗೆ ವಾರದಲ್ಲಿ ಆರು ದಿನ ಪೂರಕ ಪೌಷ್ಟಿಕ ಆಹಾರ ನೀಡುವ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಮಕ್ಕಳ ಮಾನಸಿಕ ಆರೋಗ್ಯ ಮತ್ತು ಉತ್ತಮ ಶಿಕ್ಷಣಕ್ಕೆ ಗುಣಮಟ್ಟದ ಆಹಾರ ಅತ್ಯಗತ್ಯ. ಬಡವರ ಮಕ್ಕಳಿಗೆ ಉತ್ತಮ ಶಿಕ್ಷಣದ ಅವಕಾಶಗಳನ್ನು ಸೃಷ್ಟಿಸುವುದು ನಮ್ಮ ಆಶಯವಾಗಿದೆ ಎಂದರು.

ಅನೇಕ ಕಡೆಗಳಲ್ಲಿ ಮಕ್ಕಳು ಹಲವು ಕಾರಣಗಳಿಂದ ಬೆಳಗ್ಗೆ ತಿಂಡಿ ತಿನ್ನದೆ ಶಾಲೆಗೆ ಬರುವುದನ್ನು ನಾನು ನೋಡಿದ್ದೇನೆ. ಅಂತಹ ಮಕ್ಕಳು ಮಧ್ಯಾಹ್ನದವರೆಗೆ ಊಟವಿಲ್ಲದೆ ಉಪವಾಸ ಇರುತ್ತಾರೆ. ಹೊಟ್ಟೆ ಹಸಿದುಕೊಂಡು ತರಗತಿಯಲ್ಲಿ ಕುಳಿತು ಪಾಠ ಕೇಳುವುದು ಕಷ್ಟ. ಹೀಗಾಗಿ ವಾರದಲ್ಲಿ ಎರಡು ದಿನ ಊಟ ಮತ್ತು ಮೊಟ್ಟೆ ನೀಡಲು ನಮ್ಮ ಸರ್ಕಾರ ನಿರ್ಧರಿಸಿತು. ಈಗ ವಾರದಲ್ಲಿ ನಾಲ್ಕು ದಿನ ಮಕ್ಕಳಿಗೆ ಮೊಟ್ಟೆ ಮತ್ತು ಪೂರಕ ಪೌಷ್ಟಿಕ ಆಹಾರ ನೀಡುವ ಉದಾತ್ತ ಕಾರ್ಯದಲ್ಲಿ ಅಜೀಂ ಪ್ರೇಮ್‌ಜಿ ಫೌಂಡೇಶನ್ ಸರ್ಕಾರದೊಂದಿಗೆ ಕೈಜೋಡಿಸಿದೆ ಎಂದರು. ಶಾಲಾ ಮಕ್ಕಳು ವೈಜ್ಞಾನಿಕವಾಗಿ ಮತ್ತು ಬೌದ್ಧಿಕವಾಗಿ ಅಭಿವೃದ್ಧಿ ಹೊಂದಬೇಕು, ಆಗ ಮಾತ್ರ ಸಾಮಾಜಿಕ ಹೊಣೆಗಾರಿಕೆ ಹೊಂದಲು ಸಾಧ್ಯ. ಬಡವರ ಮಕ್ಕಳಿಗೆ ಉತ್ತಮ ಶಿಕ್ಷಣದ ಅವಕಾಶಗಳನ್ನು ಸೃಷ್ಟಿಸುವುದು ನಮ್ಮ ಆಶಯವಾಗಿದೆ. ಈ ಕಾರಣಕ್ಕಾಗಿ ಸಮವಸ್ತ್ರ, ಶೂ, ಸಾಕ್ಸ್‌ಗಳನ್ನು ನೀಡುತ್ತಿದ್ದು, ಹೆಚ್ಚಿನ ವಸತಿ ಶಾಲೆಗಳನ್ನು ತೆರೆಯುತ್ತಿದ್ದೇವೆ ಎಂದು ಮುಖ್ಯಮಂತ್ರಿಗಳು ಹೇಳಿದರು.

ಶಿಕ್ಷಣ ಸಚಿವ ಮಧು ಬಂಗಾರಪ್ಪ, ವಿಪ್ರೋ ಅಧ್ಯಕ್ಷ ಅಜೀಂ ಪ್ರೇಮ್‌ಜಿ ದಂಪತಿ, ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಲ್. ಅತೀಕ್ ಅಹಮದ್, ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ನಸೀರ್ ಅಹಮದ್, ಖಾತರಿ ಅನುಷ್ಠಾನ ಸಮಿತಿ ಉಪಾಧ್ಯಕ್ಷ ಮೆಹರೂಜ್ ಉಪಸ್ಥಿತರಿದ್ದರು.

## ಮೈಸೂರು–ಚೆನ್ನೈ ಬುಲೆಟ್ ರೈಲು ಯೋಜನೆ

# ಮೈಸೂರಲ್ಲಿ ನ್ಯಾಷನಲ್ ಹೈ ಸ್ಪೀಡ್ ರೈಲ್ ಕಾರ್ಪೊರೇಷನ್ ಅಧಿಕಾರಿಗಳ ಸಭೆ

- ಪೂರ್ವಭಾವಿ ಸಭೆಯಲ್ಲಿ ರೈತರೂ ಭಾಗಿ
- ಮೈಸೂರಲ್ಲಿ 53 ಹೆಕ್ಟೇರ್ ಭೂಮಿ ಸ್ವಾಧೀನ
- ಜಿಲ್ಲಾಧಿಕಾರಿ ಅಧ್ಯಕ್ಷತೆಯಲ್ಲಿ ಶೀಘ್ರವೇ ಮತ್ತೊಂದು ಸಭೆ
- ಪರಿಸರ ಪರಿಣಾಮದ ಮೌಲ್ಯಮಾಪನ ವರದಿ ಸಿದ್ಧ

■ಬಾಪುಲಿಂಗರಾಜ್ ಅರಸ್



ಮೈಸೂರು, ಜು.20– ಸಾಂಸ್ಕೃತಿಕ ನಗರಿ ಮೈಸೂರು, ಸಿಲಿಕಾನ್ ಸಿಟಿ ಬೆಂಗಳೂರು ಹಾಗೂ ದಕ್ಷಿಣ ಭಾರತದ ಮೆಟ್ರೋ ಪಾಲಿಟನ್ ಸಿಟಿ ಚೆನ್ನೈ ನಗರಗಳ ಅಭಿವೃದ್ಧಿ ವೇಗಕ್ಕೆ ಸಂಚಾರ ಕ್ಷೇತ್ರದಲ್ಲಿ ಕ್ಷಿಪ್ರ ಕ್ರಾಂತಿ ಸ್ಪರ್ಶ ನೀಡುವ ಮೈಸೂರು–ಬೆಂಗಳೂರು–ಚೆನ್ನೈ ಬುಲೆಟ್ ರೈಲು ಕಾರಿಡಾರ್ ನಿರ್ಮಾಣ ಸಂಬಂಧ ಮೈಸೂರಲ್ಲಿ ಅಧಿಕಾರಿಗಳ ಸಭೆ ಇತ್ತೀಚೆಗೆ ನಡೆಯಿತು.

ಮೈಸೂರು ಜಿಲ್ಲಾಧಿಕಾರಿ ಕಚೇರಿಯಲ್ಲಿ ಹೆಚ್ಚುವರಿ ಜಿಲ್ಲಾಧಿಕಾರಿ ಡಾ.ಶಿವರಾಜ್ ಹಾಗೂ ದೆಹಲಿಯಿಂದ ಬಂದಿದ್ದ ನ್ಯಾಷನಲ್ ಹೈ ಸ್ಪೀಡ್ ರೈಲ್ ಕಾರ್ಪೊರೇಷನ್ ಲಿಮಿಟೆಡ್ ಅಧಿಕಾರಿಗಳು ಹೈ ಸ್ಪೀಡ್ ರೈಲು ಕಾರಿಡಾರ್ ಯೋಜನೆ ಸಂಬಂಧ ಪೂರ್ವಭಾವಿ ಸಭೆ ನಡೆಸಿದ್ದಾರೆ. ಈ ಸಭೆಯಲ್ಲಿ ಮೈಸೂರು, ಮಂಡ್ಯ, ರಾಮನಗರ ಜಿಲ್ಲೆಯ ರೈತರು ಕೂಡ ಭಾಗಿಯಾಗಿದ್ದರು. ಬುಲೆಟ್ ರೈಲು ಅಂದರೇನು, ಗರಿಷ್ಠ ವೇಗವೆಷ್ಟು, ರೈಲ್ವೆ ಹಳಿ ಹೇಗಿರುತ್ತದೆ, ಯಾವ ರೀತಿ ವಿನ್ಯಾಸ ಮಾಡಲಾಗುತ್ತದೆ, ಯೋಜನೆ ಅನುಷ್ಠಾನಕ್ಕೆ ಅವಶ್ಯವಿರುವ ಜಮೀನು ಎಷ್ಟು, ಬುಲೆಟ್ ರೈಲು ಹಳಿ ನಿರ್ಮಾಣ ಎಂಬಿವೆ ಹಲವು ವಿವರಗಳನ್ನು ದೆಹಲಿಯಿಂದ ಬಂದಿದ್ದ ಅಧಿಕಾರಿಗಳು ಸ್ಥಳೀಯ ರೈತರು ಸೇರಿದಂತೆ ಜಿಲ್ಲೆಯ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದಾರೆ ಎಂದು ಡಾ. ಶಿವರಾಜ್ ತಿಳಿಸಿದರು.

ಮೈಸೂರು ಜಿಲ್ಲೆಯಲ್ಲಿ ಸದ್ಯ 53 ಹೆಕ್ಟೇರ್ ಭೂಮಿ ಅವಶ್ಯವಿದೆ ಎಂದು ತಿಳಿಸಿದ್ದಾರೆ. ಮೆಟ್ರೋ ಮಾದರಿಯಲ್ಲಿ ಮೇಲ್ಸೇತುವೆಯಲ್ಲಿ ಬುಲೆಟ್ ರೈಲು ಹಾದು ಹೋಗಲಿದೆ. ಮೈಸೂರಿನ ಮಣಿಪಾಲ್ ಆಸ್ಪತ್ರೆ ಜಂಕ್ಷನ್ ಬಳಿಯಿಂದ ಬುಲೆಟ್ ರೈಲು ಹಾದು ಹೋಗಲಿದೆ. ಆದರೆ ಬುಲೆಟ್ ರೈಲು ನಿಲ್ದಾಣ ಸೇರಿದಂತೆ ಹಲವು ವಿಚಾರಗಳು ಇನ್ನು ಕೂಡ ಸ್ಪಷ್ಟವಾಗಿ ನಿರ್ಧಾರವಾಗಿಲ್ಲ ಎಂದು ತಿಳಿಸಿದರು. ಸದ್ಯ ಈಗ ನನ್ನ ಅಧ್ಯಕ್ಷತೆಯಲ್ಲಿ ಪೂರ್ವಭಾವಿ ಸಭೆ ನಡೆದಿದೆ. ಜಿಲ್ಲಾಧಿಕಾರಿ ಅಧ್ಯಕ್ಷತೆಯಲ್ಲಿ ಮತ್ತೊಂದು ಸುತ್ತಿನ ಸಭೆ ನಡೆಯಲಿದೆ. ನ್ಯಾಷನಲ್ ಹೈ ಸ್ಪೀಡ್ ರೈಲ್ ಕಾರ್ಪೊರೇಷನ್ ಲಿಮಿಟೆಡ್ ಅಧಿಕಾರಿಗಳು ಅಂದಿನ ಸಭೆಯಲ್ಲಿ ಭಾಗಿಯಾಗಲಿದ್ದಾರೆ. ಆ ಸಭೆಯಲ್ಲಿ ಹೈಸ್ಪೀಡ್ ರೈಲು ಕಾರಿಡಾರ್ ಸಂಬಂಧಿಸಿದಂತೆ ಬಹಳಷ್ಟು ವಿಚಾರಗಳು ಸ್ಪಷ್ಟವಾಗಲಿದೆ ಎಂದು ಡಾ. ಶಿವರಾಜ್ ತಿಳಿಸಿದರು.


ಬುಲೆಟ್ ರೈಲು ಕಾರಿಡಾರ್‌ಗೆ ಮೈಸೂರು ಜಿಲ್ಲೆಯಲ್ಲಿ 53 ಹೆಕ್ಟೇರ್ ಮಾತ್ರ ಭೂ ಅಗತ್ಯವಿದೆ. ಆದರೆ ಮಂಡ್ಯ ಜಿಲ್ಲಾ ವ್ಯಾಪ್ತಿಯಲ್ಲಿ ನೂರಾರು ಎಕರೆ ಭೂಮಿ ಸ್ವಾಧೀನವಾಗಲಿದೆ. ಬುಲೆಟ್ ರೈಲು ಅಂದ ಕೂಡಲೇ ಭಾರಿ ಪ್ರಮಾಣದ ಭೂಮಿ ಸ್ವಾಧೀನಗೊಳ್ಳಲಿದೆ ಎಂಬ ಆತಂಕ ರೈತರಲ್ಲಿತ್ತು. ಆದರೆ ಅದು ಬಹುತೇಕ ಮೇಲ್ಸೇತುವೆಯಲ್ಲಿ ಹಾದು ಹೋಗುವ ಕಾರಣ ಅಷ್ಟಾಗಿ ಭೂಮಿ ಅಗತ್ಯವಿಲ್ಲ ಅನ್ನಿಸುತ್ತದೆ. ಮೇಲ್ಸೇತುವೆ ನಿರ್ಮಾಣಕ್ಕೆ 17 ಮೀಟರ್ ಅಂದರೆ 55 ಅಡಿ ಅಗಲದ ಜಾಗದ ಅವಶ್ಯಕತೆ ಇದ್ದು, ಅಷ್ಟು ಭೂಮಿ ಮಾತ್ರ ಸ್ವಾಧೀನವಾಗಲಿದೆ.

ಮೈಸೂರಿನಿಂದ ಚೆನ್ನೈ ತನಕ ಈಗಾಗಲೇ ಸರ್ವೆ ಕಾರ್ಯ, ಡೆಸ್ಕ್ ಟಾಪ್ ಅಧ್ಯಯನ ಹಾಗೂ ಪ್ರಾಥಮಿಕ ಮಾರ್ಗದ ಅಭಿವೃದ್ಧಿ ಪೂರ್ಣಗೊಂಡಿದೆ. ಪರಿಸರ ಪರಿಣಾಮದ ಮೌಲ್ಯಮಾಪನ ವರದಿ, ರೇಜಿಂಗ್ ಸಮೀಕ್ಷೆ ಸೇರಿದಂತೆ ಇತರೆ ಸಿದ್ಧತೆಗಳನ್ನು ಕೂಡ ಈಗಾಗಲೇ ಮಾಡಿಕೊಳ್ಳಲಾಗಿದೆ.

ಭಾರತದ ಸಿಲಿಕಾನ್ ವ್ಯಾಲಿ ಎಂಬ ಪ್ರಖ್ಯಾತಿ ಪಡೆದು ಉನ್ನತ ತಂತ್ರಜ್ಞಾನ ಕ್ಷೇತ್ರದಲ್ಲಿ ಶರವೇಗದಲ್ಲಿ ಬೆಳೆಯುತ್ತಿರುವ ಸಿಲಿಕಾನ್ ಸಿಟಿ ಬೆಂಗಳೂರು, ಆಟೋ ಮೊಬೈಲ್ ಹಬ್ ಆಗುತ್ತಿರುವ ಚೆನ್ನೈ ಹಾಗೂ ವಿಶ್ವದ ಪ್ರವಾಸಿಗರನ್ನು ಸೂಜಿಗಲ್ಲಿನಂತೆ ಸೆಳೆಯುತ್ತಿರುವ ಸಾಂಸ್ಕೃತಿಕ ನಗರಿ ಮೈಸೂರು ನಗರವನ್ನು ಬೆಸೆಯಲು ಕೇಂದ್ರ ಸರ್ಕಾರ ಬುಲೆಟ್ ಟ್ರೈನ್ ಸಂಪರ್ಕ ಯೋಜನೆ ರೂಪಿಸಿದೆ. ಈ ಯೋಜನೆ ಸಾಕಾರಗೊಂಡರೆ ಕೇವಲ ಒಂದು ಗಂಟೆ ಅವಧಿಯಲ್ಲಿ ಮೈಸೂರಿನಿಂದ ಚೆನ್ನೈ ತಲುಪಬಹುದು. ಇದರಿಂದ ಅಭಿವೃದ್ಧಿ ಜೊತೆಗೆ ಮೈಸೂರಿಗೆ ಪ್ರವಾಸಿಗರ ಸಂಖ್ಯೆ ಹೆಚ್ಚಾಗಲಿವೆ. ಮೈಸೂರಲ್ಲಿ ಹಲವು ಉದ್ಯಮಗಳು ಸ್ಥಾಪನೆಯಾಗಲಿದೆ. ಮುಂಬೈ–ಅಹಮದಾಬಾದ್ ಹೈ ಸ್ಪೀಡ್ ರೈಲು ಕಾರಿಡಾರ್ ಇನ್ನೇನು ಮುಗಿಯುವ ಹಂತದಲ್ಲಿದೆ. ಈ ಯೋಜನೆ ಪೂರ್ಣಗೊಂಡ ನಂತರ ಕೇಂದ್ರ ಸರ್ಕಾರ ಮೈಸೂರು–ಬೆಂಗಳೂರು–ಚೆನ್ನೈ ಬುಲೆಟ್ ರೈಲು ಕಾರಿಡಾರ್ ಯೋಜನೆ ಕೈಗೆತ್ತಿಗೊಳ್ಳಲಿದೆ ಎಂದು ಹೇಳಲಾಗುತ್ತಿದೆ.

# ಇಂದು ಮೈಸೂರಲ್ಲಿ ಬುದ್ಧ ಪೂರ್ಣಿಮೆ ಆಚರಣೆ

## ಬುದ್ಧ ವಂದನೆ, ಧಮ್ಮ ನಡಿಗೆ, ಪ್ರವಚನ



ಮೈಸೂರು, ಜು.20(ಜಿಎ)–ವಿಶ್ವಮೈತ್ರಿ ಬುದ್ಧ ವಿಹಾರ, ಭಾರತೀಯ ವಿದ್ಯಾರ್ಥಿ ಸಂಘ ಮತ್ತು ನೆಲೆ ಹಿನ್ನೆಲೆ ಸಂಸ್ಥೆ ಸಹಯೋಗದೊಂದಿಗೆ ಜು.21ರಂದು ನಗರದಲ್ಲಿ ಬುದ್ಧ ಪೂರ್ಣಿಮೆ ಆಯೋಜಿಸಲಾಗಿದೆ ಎಂದು ವಿಶ್ವ ಮೈತ್ರಿ ಬುದ್ಧ ವಿಹಾರದ ನಿರ್ವಾಹಕ ಪುರುಷೋತ್ತಮ್ ತಿಳಿಸಿದರು. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಿಗ್ಗೆ 7.30ಕ್ಕೆ ಸಿದ್ಧಾರ್ಥ ನಗರದ ಬುದ್ಧ ವೃತ್ತದಲ್ಲಿ ಬುದ್ಧ ವಂದನೆ ನಡೆಯಲಿದ್ದು, ಬಳಿಕ ಧಮ್ಮ ನಡಿಗೆ ಪ್ರಾರಂಭವಾಗಲಿದ್ದು, ವಿನಯ ಮಾರ್ಗ, ರಾಜ್‌ಕುಮಾರ್ ರಸ್ತೆ ಮುಖಾಂತರ ಮಾನಸಿ ನಗರದ ಧ್ಯಾನ ಕೇಂದ್ರಕ್ಕೆ ತಲುಪಲಿದೆ. ಅಲ್ಲಿ 1.30ರವರೆಗೆ ಭೋದಿದತ್ತ ಬಂತೇಜಿ ಅವರಿಂದ ಧಮ್ಮ ಪ್ರವಚನ ನಡೆಯಲಿದೆ ಎಂದರು. ಸಂಜೆ 4.30ಕ್ಕೆ ಅಶೋಕಪುರಂನಲ್ಲಿಯೂ ಧಮ್ಮ ನಡಿಗೆ ಹಾಗೂ ಅಶೋಕವೃತ್ತದ ಬಳಿಯ ವಿಶ್ವಮೈತ್ರಿ ಬುದ್ಧ ವಿಹಾರದಲ್ಲಿ ಸಂಜೆ 5ಗಂಟೆಗೆ 'ಧಮ್ಮಚಕ್ಕ ಪವತ್ತನ ದಿನ ಮಹತ್ವದ ಸುತ್ತ' ಎಂಬ ವಿಚಾರ ಸಂಕಿರಣ ನಡೆಯಲಿದ್ದು ಮನೋರಕ್ಕಿತ ಬಂತೇಜಿ ಉದ್ಘಾಟಿಸುವರು.

ಒಂದನೇ ಪುಟದಿಂದ

# ಕೆರೆಗಳ ತುಂಬಿಸುವ ಕಾರ್ಯ

ಸಂಘಟನೆ ಉದ್ದೇಶದಿಂದ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರ ಸಭೆ ನಡೆಸಲಾಗುತ್ತಿದೆ.

ಕೆಲವು ಜಿಲ್ಲಾಧ್ಯಕ್ಷರು ಒಳ್ಳೆಯ ಕೆಲಸ ಮಾಡಿದ್ದಾರೆ, ಅಂತಹವರಿಗೆ ಬಡ್ತಿ ನೀಡಲಾಗುವುದು. ಸಂಘಟನೆಯಲ್ಲಿ ಹಿಂದುಳಿದವರನ್ನು ಮನೆಗೆ ಕಳುಹಿಸಲಾಗುವುದು ಎಂದರು. ಕೆಪಿಸಿಸಿಯನ್ನು ಬಲಿಷ್ಠಗೊಳಿಸುವ ಉದ್ದೇಶದಿಂದ ದೊಡ್ಡ ಪ್ರಮಾಣದಲ್ಲಿ ಪುನರ್ ರಚನೆ ಮಾಡಲಾಗುತ್ತಿದೆ, ಅಲ್ಲದೆ, ಪಕ್ಷಕ್ಕಾಗಿ ದುಡಿದಿರುವ ಕಾರ್ಯಕರ್ತರಿಗೆ ಉಳಿದಿರುವ ನಿಗಮ–ಮಂಡಳಿಗಳಲ್ಲಿ ಸ್ಥಾನಮಾನ ನೀಡಲಾಗುವುದು.

ನಿಗಮ–ಮಂಡಳಿಗಳಿಗೆ ಸದಸ್ಯರನ್ನು ನೇಮಕ ಮಾಡುವ ಪ್ರಕ್ರಿಯೆ ಆರಂಭಗೊಂಡಿದೆ, ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅಧ್ಯಕ್ಷತೆಯಲ್ಲಿ ಸಮಿತಿ ರಚನೆ ಮಾಡಲಾಗಿದೆ.

# ಲೋಕಾಯುಕ್ತಕ್ಕೆ ಬಿಜೆಪಿ ಮುಖಂಡ ದೂರು

ಬಿನ್ ಜವರ ಅವರಿಂದ ಭೂಸ್ವಾಧೀನ ಪಡಿಸಿಕೊಂಡು, ಪರಿಹಾರದ ರೂಪದಲ್ಲಿ ರೂ. 3,24,700 ಅನ್ನು ಸದರಿ ಮಾಲೀಕರಿಗೆ ಬಿಡುಗಡೆ ಮಾಡಿರುತ್ತದೆ. ಅದಾದ ನಂತರ 18/05/1998ರಂದು ನಗರಾಭಿವೃದ್ಧಿ ಇಲಾಖೆಯು ಸದರಿ ಕೆಸರೆ ಗ್ರಾಮದ ಸರ್ವೆ ನಂ: 464ರ 3.16 ಎಕರೆ ವಿಸ್ತೀರ್ಣದ ಜಾಗವನ್ನು ಭೂಸ್ವಾಧೀನ ಪ್ರಕ್ರಿಯೆಯಿಂದ ಕೈಬಿಟ್ಟಿರುವ ಆದೇಶ ಹೊರಡಿಸುತ್ತದೆ. ಈ ಅವಧಿಯಲ್ಲಿ ಸಿದ್ಧರಾಮಯ್ಯನವರು ಅಂದಿನ ಮುಖ್ಯಮಂತ್ರಿ ಜೆ ಹೆಚ್ ಪಟೇಲ್ ಅವರ ಸಚಿವ ಸಂಪುಟದಲ್ಲಿ ಉಪ ಮುಖ್ಯಮಂತ್ರಿಗಳಾಗಿದ್ದರು ಹಾಗೂ ಅವರ ಅತ್ಯಾಪ್ತರಾಗಿರುವ ಸಿ.ಬಸವೇಗೌಡ ಅವರು ಮುಡಾ ಅಧ್ಯಕ್ಷರಾಗಿದ್ದರು ಎಂದು ದೂರಿನಲ್ಲಿ ತಿಳಿಸಲಾಗಿದೆ. 25/08/2004 ರಂದು ಕೆಸರೆ ಗ್ರಾಮದ ಸರ್ವೆ ನಂ: 464 ರ 3.16 ಎಕರೆ ವಿಸ್ತೀರ್ಣದ ಸ್ವತ್ತಿನ ಮಾಲೀಕರಾದ ನಿಂಗ ಬಿನ್ ಜವರ ಎಂಬುವವರ ಮಗನಾದ ಎ. ದೇವರಾಜು ಅವರಿಂದ ಸಿದ್ಧರಾಮಯ್ಯನವರ ಭಾವಮೈದುನ (ಪತ್ನಿಯ ಸಹೋದರ) ಬಿ.ಎಂ. ಮಲ್ಲಿಕಾರ್ಜುನ ಸ್ವಾಮಿ ಬಿನ್ ಮರಿಲಿಂಗಯ್ಯನವರು ಕ್ರಯಕ್ಕೆ ಪಡೆದು ತಮ್ಮ ಹೆಸರಿಗೆ ನೊಂದಣಿ ಮಾಡಿಸಿಕೊಳ್ಳುತ್ತಾರೆ. 15/07/2005 ರಂದು ಸದರಿ ಜಮೀನನ್ನು ವ್ಯವಸಾಯ ಪ್ರದೇಶದಿಂದ ವಸತಿ ಉದ್ದೇಶಕ್ಕಾಗಿ ಭೂ ಪರಿವರ್ತನೆ ಮಾಡಿಸಿಕೊಳ್ಳಲಾಗುತ್ತದೆ. ಆದರೆ, ಸದರಿ ಜಮೀನಿನ ಮಾಲೀಕರಾದ ನಿಂಗ ಬಿನ್ ಜವರರವರು ಮರಣ ಹೊಂದಿದ್ದರೂ ಸಹ ಅವರ ಹೆಸರಿನಲ್ಲಿಯೇ ಜಿಲ್ಲಾಧಿಕಾರಿಗಳ ಕಚೇರಿಯಿಂದ ಭೂ ಪರಿವರ್ತನೆ ಮಾಡಲಾಗಿರುತ್ತದೆ. ಈ ಅವಧಿಯಲ್ಲಿ ಸಿದ್ಧರಾಮಯ್ಯನವರು ಅಂದಿನ ಮುಖ್ಯಮಂತ್ರಿ ಧರ್ಮಸಿಂಗ್ ಅವರ ಸಚಿವ ಸಂಪುಟದಲ್ಲಿ ಉಪ ಮುಖ್ಯಮಂತ್ರಿಗಳಾಗಿ ಕಾರ್ಯ ನಿರ್ವಹಿಸುತ್ತಿದ್ದರು ಎಂದು ರಮೇಶ್ ತಮ್ಮ ದೂರಿನಲ್ಲಿ ತಿಳಿಸಿದ್ದಾರೆ.

06/08/2010ರಂದು ಸಿದ್ಧರಾಮಯ್ಯನವರ ಭಾವಮೈದುನ ಬಿ.ಎಂ. ಮಲ್ಲಿಕಾರ್ಜುನ ಸ್ವಾಮಿಯವರು ಸದರಿ ಸ್ವತ್ತನ್ನು ತಮ್ಮ ಸಹೋದರಿ ಶ್ರೀಮತಿ. ಬಿ.ಎಂ. ಪಾರ್ವತಿ (ಸಿದ್ಧರಾಮಯ್ಯನವರ ಧರ್ಮಪತ್ನಿ)ಯವರ ಹೆಸರಿಗೆ ದಾನವಾಗಿ ನೀಡುತ್ತಾರೆ. ದಾನ ಪತ್ರದ ಮೂಲಕ ದೇವನೂರು 3ನೇ ಹಂತದ ಬಡಾವಣೆಯಲ್ಲಿ ಬಂದಿದ್ದ ಸ್ವತ್ತಿಗೆ ಬದಲಾಗಿ, ಈಗಾಗಲೇ ಅಭಿವೃದ್ಧಿಯಾಗಿರುವ ಮುಡಾದ ಇನ್ನೊಂದು ಬಡಾವಣೆಯಲ್ಲಿ ಬದಲಿ ನಿವೇಶನಗಳನ್ನು ಮಂಜೂರು ಮಾಡುವಂತೆ 2014ರಲ್ಲಿ ಶ್ರೀಮತಿ.ಬಿ.ಎಂ. ಪಾರ್ವತಿಯವರು ಅರ್ಜಿ ಸಲ್ಲಿಸುತ್ತಾರೆ.

ನಗರಾಭಿವೃದ್ಧಿ ಇಲಾಖೆಯ ನಿಯಮ ಪ್ರಕಾರ ಬಡಾವಣೆಯ ನಿರ್ಮಾಣಕ್ಕೆಂದು ಪ್ರಾಧಿಕಾರವು ಸ್ಥಳೀಯರ ಸ್ವತ್ತುಗಳನ್ನು ಭೂಸ್ವಾಧೀನ ಪಡಿಸಿಕೊಳ್ಳುತ್ತದೆಯೋ, ಅಂತಹ ಸ್ವತ್ತುಗಳ ಮಾಲೀಕರಿಗೆ ಅದೇ ಬಡಾವಣೆಯಲ್ಲಿ ನಿವೇಶನಗಳನ್ನು ಹಂಚಬೇಕು ಅಥವಾ ಆ ಬಡಾವಣೆಯ ನಂತರ ಪ್ರಾಧಿಕಾರವು ಅಭಿವೃದ್ಧಿಪಡಿಸುವ ಬಡಾವಣೆಯಲ್ಲಿ ಬದಲಿ ನಿವೇಶನ ಹಂಚಿಕೆ ಮಾಡಬಹುದಾಗಿರುತ್ತದೆ. ಆದರೆ, ಎಂತಹ ಸಂದರ್ಭದಲ್ಲಿಯೂ ಉದ್ದೇಶಿತ ಬಡಾವಣೆಯ ನಿವೇಶನಗಳಿಗೆ ಬದಲಾಗಿ, ಬಡಾವಣೆಗಿಂತಲೂ ಮುಂಚಿತವಾಗಿ ಅಭಿವೃದ್ಧಿಪಡಿಸಿರುವ ಬಡಾವಣೆಗಳಲ್ಲಿ ಬದಲಿ ನಿವೇಶನಗಳನ್ನು ಹಂಚಿಕೆ ಮಾಡುವುದು ಅಪರಾಧವಾಗಿದೆ.

ಆದರೆ, ಈ ಪ್ರಕರಣದಲ್ಲಿ ಬಿ.ಎಂ. ಪಾರ್ವತಿಯವರಿಗೆ ವಾಸ್ತವವಾಗಿ ದೇವನೂರು 3ನೇ ಹಂತದ ಬಡಾವಣೆಯಲ್ಲಿ ಹಂಚಿಕೆಯಾಗಿದ್ದ ನಿವೇಶನಗಳಿಗೆ ಬದಲಾಗಿ, ಅದಕ್ಕಿಂತಲೂ ಹತ್ತಾರು ವರ್ಷಗಳ ಹಿಂದೆಯೇ ಮುಡಾ ಅಭಿವೃದ್ಧಿಪಡಿಸಿರುವ ವಿಜಯನಗರ 3 ಮತ್ತು 4ನೇ ಹಂತದ ಬಡಾವಣೆಗಳಲ್ಲಿನ ಅತ್ಯಂತ ಆಯಕಟ್ಟಿನ ಸ್ಥಳಗಳಲ್ಲಿರುವ ದುಬಾರಿ ಬೆಲೆ ಬಾಳುವ ನಿವೇಶನಗಳನ್ನು ಬದಲಿ ನಿವೇಶನದ ಹೆಸರಿನಲ್ಲಿ ಹಂಚಿಕೆ ಮಾಡಲಾಗಿದೆ ಎಂದು ದೂರಿನಲ್ಲಿ ಹೇಳಲಾಗಿದೆ.

ರಾಜ್ಯದ ಪ್ರತಿಪಕ್ಷದ ನಾಯಕರಾಗಿದ್ದ ಸಿದ್ಧರಾಮಯ್ಯ ಅವರ ರಾಜಕೀಯ ಪ್ರಭಾವಗಳಿಗೆ ಒಳಗಾಗಿ ಮುಡಾದ ಅಧ್ಯಕ್ಷರಾಗಿದ್ದ ಹೆಚ್.ವಿ. ರಾಜೀವ್ ಮತ್ತು ಆಯುಕ್ತರಾಗಿದ್ದ ಡಿ.ಬಿ. ನಟೇಶ್ ಅವರು ಈ ಕಾನೂನುಬಾಹಿರ ಕೃತ್ಯವನ್ನು ಎಸಗಿದ್ದಾರೆ ಎಂದು ಎನ್.ಆರ್. ರಮೇಶ್ ಆರೋಪ ಮಾಡಿದ್ದಾರೆ.

# ಬಿವಿಬಿ ಶಾಲೆಯಲ್ಲಿ ಸಂಸ್ಕೃತೋತ್ಸವ ಸ್ಪರ್ಧೆ



ಮೈಸೂರಿನ ಭಾರತೀಯ ವಿದ್ಯಾಭವನ (ಬಿವಿಬಿ) ಶಾಲೆಯಲ್ಲಿ ಶನಿವಾರ ನಡೆದ ಸಂಸ್ಕೃತೋತ್ಸವ ಅಂತರ ಶಾಲಾ ಸಂಸ್ಕೃತ ಸ್ಪರ್ಧೆಯ ಉದ್ಘಾಟನಾ ಸಮಾರಂಭದಲ್ಲಿ ಬಿವಿಬಿ ಮೈಸೂರು ಕೇಂದ್ರದ ಅಧ್ಯಕ್ಷರೂ ಆದ 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ ಅವರು (ಎಡದಿಂದ 4ನೇಯವರು) ಸಾಂಪ್ರದಾಯಿಕವಾಗಿ ದೀಪ ಬೆಳಗಿಸಿದರು. (ಎಡದಿಂದ) ಬಿವಿಬಿ ಶಾಲೆಯ ಪ್ರಾಂಶುಪಾಲರಾದ ಎಸ್.ಲೇಖಾ ನಾಯರ್, ಬಿವಿಬಿ ಮೈಸೂರು ಕೇಂದ್ರದ ಖಜಾಂಚಿ ಡಾ.ಎ.ಟಿ.ಭಾಷ್ಯಂ, ಮಹಾಜನ ಪೌಢಶಾಲೆಯ ಸಂಸ್ಕೃತ ವಿಭಾಗದ ಮುಖ್ಯಸ್ಥೆ ಸುಕನ್ಯ ರಾಮಶೇಷಯ್ಯ (ಕಾರ್ಯಕ್ರಮದ ಮುಖ್ಯ ಅತಿಥಿ), ಬಿವಿಬಿ ಮೈಸೂರು ಕೇಂದ್ರದ ಉಪಾಧ್ಯಕ್ಷ ಡಾ.ಸಿ.ನಾಗಣ್ಣ, ಗೌರವ ಕಾರ್ಯದರ್ಶಿ ಪಿ.ಎಸ್.ಗಣಪತಿ, ಸಮಿತಿ ಸದಸ್ಯ ಟಿ.ಎಸ್.ಗಂಗಾಧರ್ ಅವರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರುಜು.20(ಪಿಎಂ)– 'ಸಂಸ್ಕೃತೋತ್ಸವ 2024–25' ಅಂತರ ಶಾಲಾ ಸಂಸ್ಕೃತ ಸ್ಪರ್ಧೆಯು ಶನಿವಾರ ಮೈಸೂರಿನ ವಿಜಯನಗರದಲ್ಲಿರುವ ಭಾರತೀಯ ವಿದ್ಯಾಭವನ (ಬಿವಿಬಿ) ಶಾಲೆಯಲ್ಲಿ ನಡೆಯಿತು.

ಮಹಾಜನ ಪೌಢಶಾಲೆಯ ಸಂಸ್ಕೃತ ವಿಭಾಗದ ಮುಖ್ಯಸ್ಥೆ ಸುಕನ್ಯ ರಾಮಶೇಷಯ್ಯ ಸ್ಪರ್ಧೆಗೆ ಚಾಲನೆ ನೀಡಿದರು. ಮೈಸೂರು ನಗರದ 29 ಶಾಲೆಗಳಿಂದ ಸುಮಾರು 135 ವಿದ್ಯಾರ್ಥಿಗಳು ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದರು.

ಸಂಸ್ಕೃತದಲ್ಲಿ ಭಗವದ್ಗೀತೆಯ ವಾಚನ, ಸಂಸ್ಮೃತಿ (ನೆನಪಿನ ಶಕ್ತಿ ಸ್ಪರ್ಧೆ), ಸಂಸ್ಕೃತ ಭಜನೆಗಳ ವಾಚನ ಹಾಗೂ ಸಂಸ್ಕೃತ ಗೀತೆಗಳಿಗೆ ನೃತ್ಯ ಪ್ರದರ್ಶನವನ್ನು ಸ್ಪರ್ಧೆಯು ಒಳಗೊಂಡಿತ್ತು ಬಿವಿಬಿ ಮೈಸೂರು ಕೇಂದ್ರದ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು ಸೇರಿದಂತೆ ಮತ್ತಿತರರು ಈ ವೇಳೆ ಹಾಜರಿದ್ದರು.

# ಸ್ವಾರ್ಥ ಸಾಧನೆ ಬಿಟ್ಟು ಜನಸೇವೆಗೆ ನಿಮ್ಮ ಶ್ರಮ ಮೀಸಲಿಡಿ

## ಕೆಎಎಸ್ ಅಧಿಕಾರಿಗಳಿಗೆ ಕಂದಾಯ ಸಚಿವ ಕೃಷ್ಣಭೈರೇಗೌಡ ಕಿವಿಮಾತು



ಬೆಂಗಳೂರು, ಜು. 20(ಕೆಎಂಶಿ)–ಕೆಎಎಸ್ ಅಧಿಕಾರಿಗಳ ಶ್ರಮ ಜನರ ಸೇವೆಗೆ ಮೀಸಲಾಗ ಬೇಕು, ಸ್ವಾರ್ಥ ಸಾಧನೆಗೆ ಅಲ್ಲ ಎಂದು ಸಚಿವ ಕೃಷ್ಣಬೈರೇಗೌಡ ಇಂದಿಲ್ಲಿ ಕಿವಿ ಮಾತು ಹೇಳಿದರು. ಕೆಎಎಸ್ ಅಧಿಕಾರಿಗಳ ತರಬೇತಿ ಶಿಬಿರದ ಸಮಾರಂಭದಲ್ಲಿ ಮಾತನಾಡಿದ ಅವರು, ರಾಜಕಾರಣಿಗಳ ಅಧಿಕಾರ ಐದು ವರ್ಷಕ್ಕೊಮ್ಮೆ ಬದಲಾ ಗುತ್ತದೆ, ಅಧಿಕಾರಿಗಳೇ ಶಾಶ್ವತ ಸರ್ಕಾರ. ಜನಪರ ಪ್ರಾಮಾಣಿಕ ಸೇವೆ ಸಲ್ಲಿಸುವುದೇ ಆದ್ಯತೆಯಾಗಬೇಕು. ನಿಮ್ಮ ಆತ್ಮಸಾಕ್ಷಿ ನಿಮಗೆ ದಾರಿ ದೀಪವಾಗಲಿ ಎಂದರು. ವ್ಯವಸ್ಥೆ ಸರಿಯಿಲ್ಲ ಎಂಬ ಮಾತು ಎಲ್ಲರ ಬಾಯಿಂದ ಕೇಳಿಬರುತ್ತದೆ. ಕೆಲವರು ಪ್ರಾಮಾಣಿಕ ಅಧಿಕಾರಿಗಳೂ ಈ ಅಸಮಾ ಧಾನ ಹೊರಹಾಕಿದ್ದನ್ನು ಕಂಡಿದ್ದೇನೆ. ವ್ಯವಸ್ಥೆ ಸರಿಯಿಲ್ಲ ಎಂಬುದು ಭಾಗಶಃ ಸತ್ಯ, ಈ ವ್ಯವಸ್ಥೆ ಬದಲಿಸುವವರು ಯಾರು ಮತ್ತು ಹೇಗೆ ಎಂಬ ದೊಡ್ಡ ಪ್ರಶ್ನೆ ನಮ್ಮೆಲ್ಲರ ಮುಂದಿದೆ. ಯುವ ಅಧಿಕಾರಿಗಳು ನಿಷ್ಠೆ, ಪ್ರಾಮಾಣಿಕತೆ ಹಾಗೂ ಬದ್ಧತೆಯಿಂದ ಜನಪರ ಸೇವೆ ಮಾಡುವ ಮೂಲಕ ಬದಲಾವಣೆಗೆ ನಾಂದಿ ಹಾಡ ಬೇಕು. ಊರೆಲ್ಲಾ ಕೆಟ್ಟಿದೆ ಎಂದು ನಾವೂ ಕೆಡುವುದಕ್ಕಿಂತ ಒಳಿತಿನ ಕಡೆ ಹೆಜ್ಜೆ ಇಡುವುದು ಲೇಸು. ಬದಲಾವಣೆ ಎಂಬುದು ನಿಮ್ಮಿಂದ ಆರಂಭವಾಗಬೇಕು. ಕೆಲವು ಅಧಿಕಾರಿಗಳು ಹಳೆ ವಿಧಾನಕ್ಕೆ ಜೋತು ಬಿದ್ದು ಜಡ್ಡು ಹಿಡಿದಿದ್ದಾರೆ, ಜನರು ಕಚೇರಿ ಗಳಿಗೆ ಅಲೆಯುವುದರಲ್ಲೇ ಸಮಯವೆಲ್ಲ ವ್ಯರ್ಥವಾಗುತ್ತಿದೆ, ಅಲೆದಲೆದು ಶಕ್ತಿಹೀನ ರಾಗುತ್ತಿದ್ದಾರೆ. ನವತಂತ್ರ ಜ್ಞಾನಗಳನ್ನು ಕೆಲಸದಲ್ಲಿ ಅಳವಡಿಸಿಕೊಳ್ಳಬೇಕು. ಯಾವುದೇ ರಾಜಕೀಯ ಪಕ್ಷ ಅಧಿಕಾರದಲ್ಲಿದ್ದರೂ ಕರ್ನಾಟಕಕ್ಕೆ ಒಳ್ಳೆಯ ಹೆಸರು ಬರುವಂತೆ ಅಧಿಕಾರಿಗಳು ಕೆಲಸ ನಿರ್ವಹಿಸಬೇಕು ಎಂದರು.

# ಕೌಶಲ್ಯತೆ ಇದ್ದಲ್ಲಿ ಇಂಜಿನಿಯರ್‌ಗಳು ನವೋದ್ಯಮಿಗಳಾಗಬಹುದು



ಉದ್ಯಮಿ ವಿಜಯಾನಂದ ಗುರುದೇವ್ ಉಪನ್ಯಾಸ ನೀಡಿದರು.

ಮೈಸೂರು, ಜು.20(ಎಂಕೆ)– ಉದ್ಯಮ ಕ್ಷೇತ್ರದಲ್ಲಿ ವಿಫುಲ ಅವಕಾಶಗಳಿದ್ದು, ಜ್ಞಾನದ ಜೊತೆಗೆ ಕೌಶಲ್ಯತೆ ಇದ್ದಲ್ಲಿ ಇಂಜಿನಿಯರ್‌ಗಳು ಸಹ ನವೋದ್ಯಮಿಗಳಾಗಬಹುದು ಎಂದು ಉದ್ಯಮಿ ಹಾಗೂ ದೇಸಿ ಕ್ಲೌಡ್ ಸಹ ಸಂಸ್ಥಾಪಕ ವಿಜಯಾನಂದ ಗುರುದೇವ್ ಸಲಹೆ ನೀಡಿದರು.

ನಗರದ ಜೆಎಲ್‌ಬಿ ರಸ್ತೆಯಲ್ಲಿರುವ ಇಂಜಿನಿಯರ್ಸ್ ಸಂಸ್ಥೆ ಸಭಾಂಗಣದಲ್ಲಿ 'ಇಂಜಿನಿಯರ್‌ಗಳಿಗೆ ಉದ್ಯಮಶೀಲತೆಯ ಅವಕಾಶಗಳು' ಕುರಿತು ಮಾತನಾಡಿದ ಅವರು, ರಕ್ಷಣೆ, ಆಧುನಿಕ ತಂತ್ರಜ್ಞಾನ, ಕೃತಕ ಬುದ್ಧಿಮತ್ತೆ ಸೇರಿದಂತೆ ಉದ್ಯಮ ಆರಂಭಿಸಲು ಸಾಕಷ್ಟು ಆಯಾಮಗಳಿವೆ. ಆದರೆ, ಉದ್ಯಮ ಕ್ಷೇತ್ರದಲ್ಲಿ ಪ್ರಸಕ್ತ ವಾತಾವರಣವನ್ನು ಅರಿತು, ಉದ್ಯಮ ಆರಂಭಿಸಬೇಕು. ಅದಕ್ಕೂ ಮುನ್ನ ಆಯ್ಕೆ ಮಾಡಿಕೊಂಡಿರುವ ಉದ್ಯಮದಲ್ಲಿನ ನ್ಯೂನತೆಗಳು ಹಾಗೂ ಮಾರುಕಟ್ಟೆಯ ಸ್ಥಿತಿ–ಗತಿ ಕುರಿತು ಸಂಶೋಧಿಸಿ ಉದ್ಯಮ ಆರಂಭಿಸಬೇಕು ಎಂದು ಕಿವಿ ಮಾತು ಹೇಳಿದರು.

ತಂತ್ರಜ್ಞಾನ ಗಣಿತ ಮತ್ತು ಭೌತಶಾಸ್ತ್ರವನ್ನು ಒಳಗೊಂಡಿದ್ದು, ಒಂದಕ್ಕೊಂದು ಸಂಬಂಧವಿರುತ್ತದೆ. ಮೊಬೈಲ್ ತಂತ್ರಜ್ಞಾನವಾದರೆ, ಅದರೊಳಗಿನ ಎಲೆಕ್ಟ್ರಾನಿಕ್ ವಸ್ತುಗಳು ಗಣಿತ ಮತ್ತು ಭೌತಶಾಸ್ತ್ರದಿಂದಾಗಿರುತ್ತವೆ. ಹಾಗೆಯೇ ಜ್ಞಾನ ಎಲ್ಲರಲ್ಲಿಯೂ ಇರಲಿದ್ದು, ಕೌಶಲ್ಯವಿದ್ದರಷ್ಟೇ ಅವಕಾಶ ಪಡೆದುಕೊಳ್ಳಲು ಸಾಧ್ಯ. ಸಂಶೋಧನೆ ಜ್ಞಾನವಾದರೆ, ನಂತರ ನಿರ್ವಹಿಸುವ ವೃತ್ತಿ ಕೌಶಲ್ಯತೆಯಿಂದ ದೊರೆಯಲಿದೆ ಎಂಬುದನ್ನು ಅರ್ಥಮಾಡಿಕೊಳ್ಳಬೇಕು ಎಂದು ತಿಳಿಸಿದರು. ಇಂಜಿನಿಯರ್ಸ್ ಸಂಸ್ಥೆ ಜಿಲ್ಲಾ ಘಟಕದ ಅಧ್ಯಕ್ಷ ಡಾ.ಆರ್.ದೀಪು, ಮಾಜಿ ಅಧ್ಯಕ್ಷ ಬಿ.ಎಸ್.ಪ್ರಭಾಕರ, ಕಾರ್ಯದರ್ಶಿ ಡಾ.ಎಸ್.ಎ.ಮೋಹನ್ ಕೃಷ್ಣ ಮತ್ತಿತರರಿದ್ದರು.

# ಆನ್‌ಲೈನ್ ದೋಖಾದಲ್ಲಿ 10.50 ಲಕ್ಷ ಕಳೆದುಕೊಂಡ ಮಹಿಳೆ

ಮೈಸೂರು, ಜು.20(ಎಸ್‌ಬಿಡಿ)– ನಕಲಿ ಟ್ರೇಡಿಂಗ್ ಜಾಲದಲ್ಲಿ ಸಿಲುಕಿ ಮಹಿಳೆಯೊಬ್ಬರು 10.50 ಲಕ್ಷ ರೂ. ಕಳೆದುಕೊಂಡಿದ್ದಾರೆ. ಮೈಸೂರಿನ ಬೋಗಾದಿಯಲ್ಲಿರುವ ಮಹಿಳೆಯೊಬ್ಬರಿಗೆ ಪಾರ್ಟ್‌ಟೈಮ್ ಕೆಲಸದ ಆಫರ್ ನೀಡಿ, ನಂತರ ಟ್ರೇಡಿಂಗ್‌ನಲ್ಲಿ ಅಧಿಕ ಲಾಭದ ಆಸೆ ಹುಟ್ಟಿಸಿ, ಹಣ ಹೂಡಿಕೆ ಮಾಡಿದ ಬಳಿಕ ಖದೀಮರು ವಂಚಿಸಿದ್ದಾರೆ.

ಮಹಿಳೆಯ ಮೊಬೈಲ್‌ಗೆ ಜು.1ರಂದು ಪಾರ್ಟ್‌ಟೈಮ್ ಕೆಲಸವಿದೆ ಎಂದು ವಾಟ್ಸಾಪ್ ಸಂದೇಶ ಬಂದಿತ್ತು. ಹೋಟೆಲ್‌ಗಳಿಗೆ ಗೂಗಲ್ ರಿವ್ಯೂ ನೀಡುವ ಮೂಲಕ ಕುಳಿತಲ್ಲೇ ಹಣ ಸಂಪಾದಿಸಬಹುದು ಎಂಬ ಆಫರ್ ನೀಡಲಾಗಿತ್ತು. ಬಳಿಕ ಟೆಲಿಗ್ರಾಂ ಐಡಿ Dexter Manter @DEEDD621 ಮೂಲಕ ಟ್ರೇಡಿಂಗ್ ಇನ್ವೆಸ್ಟ್ ಮಾಡುವುದರ ಬಗ್ಗೆ ಸಲಹೆಗಳನ್ನು ನೀಡಲಾಗಿತ್ತು. ಅದನ್ನು ನಂಬಿದ ಮಹಿಳೆ ತನ್ನ ಬ್ಯಾಂಕ್ ಖಾತೆಯಿಂದ 1.20 ಲಕ್ಷ ರೂ. ಹೂಡಿಕೆ ಮಾಡಿದ್ದಲ್ಲದೆ, ಅವರ ತಾಯಿಯ ಖಾತೆ ಮೂಲಕವೂ 9.30 ಲಕ್ಷ ರೂ. ಹೂಡಿಕೆ ಮಾಡಿದ್ದಾರೆ. ನಂತರ ತಾವು ನಕಲಿ ಟ್ರೇಡಿಂಗ್ ಜಾಲದಿಂದ ಮೋಸ ಹೋಗಿರುವುದು ಮನವರಿಕೆಯಾಗಿದೆ.

ಈ ಸಂಬಂಧ ಮಹಿಳೆ ನೀಡಿದ ದೂರಿನನ್ವಯ ಸೆನ್ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ. ಯಾವುದೇ ರೀತಿಯಲ್ಲಿ ಹಣ ಹೂಡಿಕೆ ಮಾಡುವ ಮುನ್ನ ಎಚ್ಚರಿಕೆ ವಹಿಸುವಂತೆ ಅವರು ಸಾರ್ವಜನಿಕರಲ್ಲಿ ಮನವಿ ಮಾಡಿದ್ದಾರೆ.

# ರಿಂಗ್‌ರೋಡ್ ಮಧ್ಯೆ ಹಠಾತ್ ಗುಂಡಿ!

## ಶ್ರೀರಾಂಪುರ, ಸೋಮನಾಥನಗರ, ದಟ್ಟಗಳ್ಳಿ ನಡುವೆ ವಾಹನ ಸಂಚಾರ ಸ್ಥಗಿತ



ಮೈಸೂರಿನ ಶ್ರೀರಾಂಪುರ ಜಂಕ್ಷನ್ ಮತ್ತು ದಟ್ಟಗಳ್ಳಿ ನಡುವೆ ರಿಂಗ್ ರಸ್ತೆ ಮಧ್ಯೆ ಶನಿವಾರ ಬೆಳಿಗ್ಗೆ ದಿಢೀರ್ ಪ್ರತ್ಯಕ್ಷವಾಗಿರುವ ಗುಂಡಿ ಸುತ್ತ ಬ್ಯಾರಿಕೇಡ್ ಅಳವಡಿಸಿರುವುದನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು, ಜು.20(ಆರ್‌ಕೆ)– ಮೈಸೂರಿನ ಶ್ರೀರಾಂಪುರ ರಿಂಗ್ ರೋಡ್ ಜಂಕ್ಷನ್ ಮತ್ತು ದಟ್ಟಗಳ್ಳಿ ಸಮೀಪದ ಸೋಮನಾಥನಗರ ನಡುವೆ ಹೊರವರ್ತುಲ ರಸ್ತೆಯ ಮಧ್ಯಭಾಗದಲ್ಲಿ ದಿಢೀರ್ ಗುಂಡಿಯೊಂದು ಪ್ರತ್ಯಕ್ಷವಾಗಿದೆ.

ಶುಕ್ರವಾರ ತಡರಾತ್ರಿ ಉಂಟಾದ 15 ಅಡಿ ಆಳ, 4 ಅಡಿ ಅಗಲದ ಗುಂಡಿಯಿಂದಾಗಿ ವಾಹನ ಸಂಚಾರಕ್ಕೆ ಅಡ್ಡಿಯಾದ ಕಾರಣ, ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಧಾವಿಸಿದ್ದ ಕೆಆರ್ ಸಂಚಾರ ಠಾಣೆ ಪೊಲೀಸರು ಗುಂಡಿ ಸುತ್ತ ಬ್ಯಾರಿಕೇಡ್ ಅಳವಡಿಸಿ ಮುಂಜಾಗ್ರತಾ ಕ್ರಮವಾಗಿ ಸೂಚನಾ ಫಲಕ ಅಳವಡಿಸಿದ್ದರಿಂದಾಗಿ ಯಾವುದೇ ಅಪಾಯ ಸಂಭವಿಸಲಿಲ್ಲ.

ಇಂದು ಬೆಳಿಗ್ಗೆಯಾಗುತ್ತಿದ್ದಂತೆಯೇ ಆ ಮಾರ್ಗ ಸಂಚರಿಸಿದ ವಾಹನ ಸವಾರರಿಗೆ ರಿಂಗ್ ರಸ್ತೆ ಮಧ್ಯೆ ಗುಂಡಿ ಕಾಣಿಸಿತು. ಅಪಾಯಕ್ಕೆ ಬಾಯ್ದೆರೆದು ಕೊಂಡಿದ್ದ ಗುಂಡಿಯಿಂದ ರಕ್ಷಿಸಲು ಪೊಲೀಸರು ಸುತ್ತಲೂ ಬ್ಯಾರಿಕೇಡ್ ಅಳವಡಿಸಿ ಸ್ಥಳದಲ್ಲಿ ಓರ್ವ ಗೃಹರಕ್ಷಕ ದಳದ ಸಿಬ್ಬಂದಿ ನಿಯೋಜಿಸಿ ಸಂಭವಿಸಬಹುದಾದ ಅಪಾಯ ತಪ್ಪಿಸಿದರು.

ಪರಿಸ್ಥಿತಿಯ ತೀವ್ರತೆ ಅರಿತ ಕೆಆರ್ ಸಂಚಾರ ಠಾಣೆ ಇನ್ಸ್‌ಪೆಕ್ಟರ್ ಶರತ್ ಕುಮಾರ್ ಅವರು ತಕ್ಷಣ ರಾಷ್ಟ್ರೀಯ ಹೆದ್ದಾರಿ ಇಂಜಿನಿಯರ್‌ಗಳನ್ನು ಕರೆಸಿ ಪರಿಶೀಲನೆ ನಡೆಸಿದರಲ್ಲದೆ, ತುರ್ತಾಗಿ ರಿಪೇರಿಯಾಗಬೇಕು. ಸಾರ್ವಜನಿಕರ ಪ್ರಾಣಕ್ಕೆ ಕುತ್ತು ಬರುತ್ತದೆ ಎಂದು ಹೇಳಿ ಇಂದೇ ಕಾಮಗಾರಿ ಆರಂಭಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಪರಿಸ್ಥಿತಿಯ ಗಂಭೀರತೆ ಅರಿತ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿ ಗುಂಡಿ ಬೀಳಲು ಕಾರಣವೇನು, ಈ ಮೊದಲೇ ಅಲ್ಲಿ ಭಾರಿ ಹೊಂಡವೇನಾದರೂ ಇತ್ತೇ. ರಿಂಗ್ ರಸ್ತೆ ಕಾಮಗಾರಿ ಮಾಡುವಾಗ ಈ ಹೊಂಡ ಏಕೆ ಗೋಚರಿಸಲಿಲ್ಲ ಎಂಬುದನ್ನು, ಅಧ್ಯಯನ ಮಾಡಿದರು.

ಸಂಚಾರಕ್ಕೆ ತೊಂದರೆ ಉಂಟಾಗುವುದರಿಂದ ತುರ್ತಾಗಿ ರಿಪೇರಿ ಕಾರ್ಯ ಕೈಗೆತ್ತಿಕೊಳ್ಳಬೇಕಾದ ಅನಿವಾರ್ಯತೆ ಬಗ್ಗೆ ಹಿರಿಯ ಅಧಿಕಾರಿಗಳ ಗಮನಕ್ಕೆ ತಂದು ಇಂದು ಮಧ್ಯಾಹ್ನ ಗುಂಡಿ ಮುಚ್ಚುವ ಕಾಮಗಾರಿಯನ್ನು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ಆರಂಭಿಸಿದ್ದಾರೆ.

ಈ ಮಧ್ಯೆ ಮುಂಜಾಗ್ರತಾ ಕ್ರಮವಾಗಿ ಕೆಆರ್ ಸಂಚಾರ ಠಾಣೆ ಇನ್ಸ್‌ಪೆಕ್ಟರ್ ಶರತ್‌ಕುಮಾರ್ ಗುಂಡಿ ಸುತ್ತ ಬ್ಯಾರಿಕೇಡ್ ಅಳವಡಿಸಿ ಓರ್ವ ಸಿಬ್ಬಂದಿ ನಿಯೋಜಿಸಿ ಸಮಯಪ್ರಜ್ಞೆ ಮೆರೆದಿರುವುದಲ್ಲದೆ, ಆ ಮಾರ್ಗ ವಾಹನ ಸಂಚಾರ ನಿಷೇಧಿಸಿ ಬದಲಿ ಮಾರ್ಗ ವ್ಯವಸ್ಥೆ ಮಾಡಿರುವುದರಿಂದ ಯಾವುದೇ ಅಪಾಯ ಸಂಭವಿಸಿಲ್ಲ.

ಸಂಜೆ ವೇಳೆಗೆ ಗುಂಡಿ ಮುಚ್ಚಿ ಮೇಲೆ ಡಾಂಬರೀಕರಣ ಮಾಡಿರುವುದರಿಂದ ಈಗ ರಿಂಗ್ ರಸ್ತೆಯಲ್ಲಿ ವಾಹನಗಳು ಸರಾಗವಾಗಿ ಓಡಾಡುವಂತಾಗಿವೆ. ಅಪಾಯದ ತೀವ್ರತೆ ಅರಿತ ಪೊಲೀಸರು ಹಾಗೂ ರಾಷ್ಟ್ರೀಯ ಹೆದ್ದಾರಿ ಅಧಿಕಾರಿಗಳು ಕಾರ್ಯಪ್ರವೃತ್ತರಾದ ಪರಿಣಾಮ ಯಾವ ಅಪಾಯವೂ ಸಂಭವಿಸದೇ ರಿಂಗ್ ರಸ್ತೆಯಲ್ಲೀಗ ಎಂದಿನಂತೆ ವಾಹನಗಳು ಓಡಾಡುತ್ತಿವೆ.

ಮೈಸೂರು ಮಿತ್ರ ಭಾನುವಾರ 21 ಜುಲೈ 2024

# ದೇಶ - ವಿದೇಶ

## ಬಾಂಗ್ಲಾದೇಶದಲ್ಲಿ ಮೀಸಲಾತಿ ವಿರೋಧಿ ಹಿಂಸಾಚಾರ; ಮತ್ತೆ 43 ಮಂದಿ ಸಾವು

**ಢಾಕಾ:** ಸರ್ಕಾರಿ ಉದ್ಯೋಗದಲ್ಲಿ ಮೀಸಲಾತಿ ವಿರೋಧಿಸಿ ಬಾಂಗ್ಲಾದೇಶದಲ್ಲಿ ನಡೆಯುತ್ತಿರುವ ಪ್ರತಿಭಟನೆ ಹಿಂಸಾಚಾರಕ್ಕೆ ತಿರುಗಿದ್ದು, ಈವರೆಗೂ ಸುಮಾರು 105 ಮಂದಿ ಸಾವಿಗೀಡಾಗಿದ್ದಾರೆ. ನೂರಾರು ಜನರು ಗಾಯಗೊಂಡಿದ್ದಾರೆ. ಮತ್ತಷ್ಟು ಹಿಂಸಾಚಾರ ತಡೆಯಲು ಪೊಲೀಸರು ಬಾಂಗ್ಲಾದೇಶದಾದ್ಯಂತ ಕರ್ಫ್ಯೂ ಜಾರಿಗೊಳಿಸಿದ್ದಾರೆ. ಮಿಲಿಟರಿ ಪಡೆಗಳು ಶನಿವಾರ ರಾಜಧಾನಿಯ ಕೆಲವು ಭಾಗಗಳಲ್ಲಿ ಗಸ್ತು ತಿರುಗುತ್ತಿವೆ. ಸಾರ್ವಜನಿಕ ಸಭೆಗಳ ಮೇಲೆ ನಿಷೇಧ ಹೇರಲಾಗಿದೆ. ಕಟ್ಟುನಿಟ್ಟಿನ ಕ್ರಮಗಳ ಹೊರತಾಗಿಯೂ ಹಿಂಸಾಚಾರದಲ್ಲಿ ಶುಕ್ರವಾರ 43 ಜನ ಸಾವನ್ನಪ್ಪಿದ್ದಾರೆ. ವಾರದ ಹಿಂದೆ ಆರಂಭಗೊಂಡಿರುವ ಪ್ರತಿಭಟನೆ ತೀವ್ರ ಸ್ವರೂಪ ಪಡೆದುಕೊಂಡಿದ್ದು, ಗುರುವಾರದವರೆಗೆ ದೇಶದ ವಿವಿಧೆಡೆ 75 ಮಂದಿ ಮೃತಪಟ್ಟಿದ್ದರು. ಕೆಲವೆಡೆ ಇಂಟರ್ನೆಟ್ ಹಾಗೂ ಮೊಬೈಲ್ ಸೇವೆ ಕಡಿತಗೊಳಿಸಲಾಗಿದ್ದು ಪ್ರತಿಭಟನಾಕಾರರ ಮೇಲೆ ಪೊಲೀಸರು, ಭದ್ರತಾ ಪಡೆಗಳು ಗುಂಡಿನ ದಾಳಿ, ಅಶ್ರುವಾಯು ಪ್ರಯೋಗಿಸಿದ್ದಾರೆ.



## ಅಕ್ರಮ ಗಣಿಗಾರಿಕೆ ಪ್ರಕರಣ: ಹಿರಿಯ ಕಾಂಗ್ರೆಸ್ ಶಾಸಕನನ್ನು ಬಂಧಿಸಿದ ಇಡಿ ಅಧಿಕಾರಿಗಳು



**ನವದೆಹಲಿ:** ಅಕ್ರಮ ಗಣಿಗಾರಿಕೆಗೆ ಸಂಬಂಧಿಸಿದ ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯ (ಇಡಿ), ಹರಿಯಾಣದ ಹಿರಿಯ ಕಾಂಗ್ರೆಸ್ ಶಾಸಕ ಸುರೇಂದ್ರ ಪನ್ವಾರ್ ಬಂಧಿಸಿದ್ದು, ಶನಿವಾರ ಅವರನ್ನು ಅಂಬಾಲಾದ ಪಿಎಂಎಲ್‌ಎಲ್ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದೆ.

ಇಡಿ ಜನವರಿಯಲ್ಲಿ ಸುರೇಂದ್ರ ಪನ್ವಾರ್ ಅವರ ಮನೆಯಲ್ಲಿ ಶೋಧ ನಡೆಸಿತ್ತು. ಯಮುನಾನಗರ ಪ್ರದೇಶದಲ್ಲಿ ಅಕ್ರಮ ಗಣಿಗಾರಿಕೆ ನಡೆಸಿದ ಆರೋಪ ಇವರ ಮೇಲಿದೆ. ಈ ವರ್ಷಾಂತ್ಯದಲ್ಲಿ ಹರಿಯಾಣದಲ್ಲಿ ವಿಧಾನಸಭಾ ಚುನಾವಣೆ ನಡೆಯಲಿದ್ದು, ಇಂತಹ ಸಮಯದಲ್ಲೇ ಕಾಂಗ್ರೆಸ್ ಶಾಸಕನ ಬಂಧನ ರಾಜಕೀಯ ಪರ ವಿರೋಧ ಚರ್ಚೆಗೂ ಗ್ರಾಸವಾಗಿದೆ. ಎನ್‌ಜಿಟಿ ನಿಷೇಧದ ನಂತರವೂ ಗಣಿಗಾರಿಕೆ ನಡೆಯುತ್ತಿದ್ದು, ಬಂಡೆಗಳು, ಜಲ್ಲಿಕಲ್ಲು ಮತ್ತು ಮರಳು ಅಕ್ರಮ ಗಣಿಗಾರಿಕೆ ಪ್ರಕರಣದ ತನಿಖೆಗಾಗಿ ಹರಿಯಾಣ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ. ಮನಿ ಲಾಂಡರಿಂಗ್ ಪ್ರಕರಣವೂ ಇದಕ್ಕೆ ಸಂಬಂಧಿಸಿದೆ.

## ಅಚ್ಚುಕಟ್ಟಾದ 32 ಹಲ್ಲಿನೊಂದಿಗೆ ಹುಟ್ಟಿದ ಹೆಣ್ಣು ಮಗು!



**ಟೆಕ್ಸಾಸ್:** ಮಗು ಹುಟ್ಟುವಾಗ ಹಲ್ಲು ಇರುವುದಿಲ್ಲ. 6 ರಿಂದ 12 ತಿಂಗಳಲ್ಲಿ ಮಕ್ಕಳಿಗೆ ಹಲ್ಲು ಬರಲು ಆರಂಭಿಸುತ್ತದೆ. ಇನ್ನು ಬುದ್ಧಿವಂತಿಕೆಯ ಹಲ್ಲು ಸೇರಿದಂತೆ 32 ಹಲ್ಲು ಬರಲು ಸರಿಸುಮಾರು 21 ವರ್ಷವಾಗಬೇಕು. ಒಂದೆರಡು ವರ್ಷ ಹೆಚ್ಚು ಕಡಿಮೆ ಆದರೂ ಅಚ್ಚರಿ ಇಲ್ಲ. ಆದರೆ ಇಲ್ಲೊಂದು ಮಗು ಹುಟ್ಟುವಾಗಲೇ 32 ಹಲ್ಲಿನೊಂದಿಗೆ ಜನಿಸಿದೆ. ಇದು ಅಚ್ಚರಿಯಾದರೂ ಸತ್ಯ. ಅಮೆರಿಕದ ಟೆಕ್ಸಾಸ್‌ನ ಮಹಿಳೆ ತನ್ನ ಮಗುವಿನ ವಿಡಿಯೋ ಹಂಚಿಕೊಂಡು ಅಚ್ಚರಿ ಮಾಹಿತಿ ಬಹಿರಂಗಪಡಿಸಿದ್ದಾರೆ. ಈ ಹೆಣ್ಣು ಮಗು ಹುಟ್ಟುವಾಗಲೇ ಸಂಪೂರ್ಣ 32 ಹಲ್ಲನ್ನು ಹೊಂದಿದೆ. ಅದೂ ಕೂಡ ಅಚ್ಚುಕಟ್ಟಾದ ಹಲ್ಲು. ಪುಟಾಣಿ ಮಗುವಿನ ಮುಖದಲ್ಲಿ ಹಲ್ಲುಗಳನ್ನು ನೋಡುವುದೇ ಚೆಂದ. ಅದರಲ್ಲೂ 32 ಹಲ್ಲು ಎಂದರೆ ಅಚ್ಚರಿ ಜೊತೆಗೆ ಆತಂಕವಾಗದೇ ಇರದು. ಹೌದು, ಇದು ಅಚ್ಚರಿಯಲ್ಲ. ಅಪರೂಪದ ಕಾಯಿಲೆ. ಈ ಕುರಿತು ಜಾಗೃತಿ ಮೂಡಿಸಲು ಈ ಮಗುವಿನ ತಾಯಿ ವಿಡಿಯೋ ಹಂಚಿಕೊಂಡಿದ್ದಾರೆ.

## ವಲಸಿಗರ ಬೋಟ್‌ಗೆ ಬೆಂಕಿ; 40 ಮಂದಿ ಸಾವು

**ಪೋರ್ಟ್ ಔ ಪ್ರಿನ್ಸ್:** ಕೆರಿಬಿಯನ್ ರಾಷ್ಟ್ರ ಹೈಟಿಯಲ್ಲಿ ವಲಸಿಗರು ತುಂಬಿದ್ದ ದೋಣಿಗೆ ಬೆಂಕಿ ಹೊತ್ತಿಕೊಂಡಿದೆ. ಇದರಿಂದಾಗಿ ಕನಿಷ್ಠ 40 ವಲಸಿಗರು ಸಾವನ್ನಪ್ಪಿದ್ದಾರೆ. ಈ ಮಾಹಿತಿಯನ್ನು ಇಂಟರ್‌ನ್ಯಾಷನಲ್ ಆರ್ಗನೈಸೇಶನ್ ಫಾರ್ ಮೈಗ್ರೇಷನ್ (ಐಒಎಂ) ಸ್ಥಳೀಯ ಅಧಿಕಾರಿಗಳಿಗೆ ನೀಡಿದೆ.



ದೋಣಿಗೆ ಬೆಂಕಿ ತಗುಲಿ 40ಕ್ಕೂ ಹೆಚ್ಚು ವಲಸಿಗರು ಸಾವನ್ನಪ್ಪಿದ್ದಾರೆ. ಆದರೂ ಹೈಟಿಯ ಕೋಸ್ಟ್ ಗಾರ್ಡ್ 40 ಜನರ ಪ್ರಾಣವನ್ನು ಉಳಿಸಿದೆ. ಹೈಟಿಯಲ್ಲಿ ಹೆಚ್ಚುತ್ತಿರುವ ಭದ್ರತಾ ಬಿಕ್ಕಟ್ಟು ಮತ್ತು ದುರಂತಕ್ಕೆ "ವಲಸೆಗಾಗಿ ಸುರಕ್ಷಿತ ಮತ್ತು ಕಾನೂನು ಮಾರ್ಗಗಳ ಕೊರತೆಯನ್ನು ಮಿಷನ್ ಮುಖ್ಯಸ್ಥ ಗ್ರೆಗೊಯಿರ್ ಗುಡ್‌ಸ್ಟೈನ್ ದೂಷಿಸಿದ್ದಾರೆ.

ಹೈಟಿಯ ಸಾಮಾಜಿಕ-ಆರ್ಥಿಕ ಪರಿಸ್ಥಿತಿಯು ಚಿಂತಾಜನಕವಾಗಿದೆ. ಕಳೆದ ತಿಂಗಳುಗಳಲ್ಲಿ ಸಂಭವಿಸಿದ ತೀವ್ರ ಹಿಂಸಾಚಾರವು ಹೈಟಿಯನ್ನರು ಇನ್ನಷ್ಟು ಹತಾಶ ಕ್ರಮಗಳನ್ನು ತೆಗೆದುಕೊಳ್ಳುವಂತೆ ಮಾಡಿದೆ. ಹೈಟಿಯು ಗುಂಪು ಹಿಂಸಾಚಾರ, ಕುಸಿಯುತ್ತಿರುವ ಆರೋಗ್ಯ ವ್ಯವಸ್ಥೆ ಮತ್ತು ಅಗತ್ಯ ಸಾಮಗ್ರಿಗಳ ಪ್ರವೇಶದ ಕೊರತೆಯಿಂದ ಹೆಣಗಾಡುತ್ತಿದೆ. ಇದರ ಪರಿಣಾಮವಾಗಿ ಅನೇಕ ಹೈಟಿಯನ್ನರು ದೇಶದಿಂದ ಅಪಾಯಕಾರಿ ಪ್ರಯಾಣವನ್ನು ಮಾಡುತ್ತಿದ್ದಾರೆ ಎಂದು ಗುಡ್‌ಸ್ಟೈನ್ ಹೇಳಿದರು.

## ಸೈಬರ್ ಗುಲಾಮಗಿರಿಯಿಂದ ಪಾರಾದ 14 ಭಾರತೀಯರು

**ನವದೆಹಲಿ:** ಮೋಸದಿಂದ ಕಾಂಬೋಡಿಯಾಕ್ಕೆ ಕರೆದೊಯ್ದು ಸೈಬರ್ ವಂಚನೆಗೆ ಒಳಗಾಗಿ ಬಲವಂತವಾಗಿ ಕಳ್ಳಸಾಗಣೆ ದಂಧೆಯಲ್ಲಿ ತೊಡಗಿದ್ದ 14 ಮಂದಿ ಭಾರತೀಯರನ್ನು ಕಾಂಬೋಡಿಯಾ ಪೊಲೀಸರು ರಕ್ಷಿಸಿದ್ದಾರೆ. ಇದೀಗ ತಮ್ಮನ್ನು ಶೀಘ್ರವೇ ಭಾರತಕ್ಕೆ ಮರಳಲು ಅನುಕೂಲ ಮಾಡಿಕೊಡುವಂತೆ ಭಾರತೀಯ ರಾಯಭಾರ ಕಚೇರಿಗೆ ಸಂತ್ರಸ್ತರು ಮನವಿ ಮಾಡಿದ್ದಾರೆ. ಕಾಂಬೋಡಿಯಾದಲ್ಲಿ ವಂಚನೆಗೊಳಗಾಗಿರುವವರಲ್ಲಿ ಉತ್ತರ ಪ್ರದೇಶ ಹಾಗೂ ಬಿಹಾರದ ಮೂಲದವರೇ ಹೆಚ್ಚಾಗಿದ್ದಾರೆ. ಸದ್ಯ ಅವರು ಕಾಂಬೋಡಿಯಾದ ಎನ್‌ಜಿಒದಲ್ಲಿ ರಕ್ಷಣೆ ಪಡೆದಿರುವುದಾಗಿ ಹೇಳಿಕೊಂಡಿದ್ದಾರೆ. ಇತ್ತೀಚಿನ ದಿನಗಳಲ್ಲಿ ಉದ್ಯೋಗ ನೀಡುವ ನೆಪದಲ್ಲಿ ಹಲವರನ್ನು ವಂಚಿಸಿ ಕಾಂಬೋಡಿಯಾಗೆ ಕರೆದೊಯ್ದು ಅವರಿಂದ ಕಾನೂನುಬಾಹಿರ ಸೈಬರ್ ಚಟುವಟಿಕೆಗಳನ್ನು ಮಾಡಿಸಲಾಗುತ್ತಿದೆ ಎಂಬ ಅಂಶ ಬೆಳಕಿಗೆ ಬಂದಿದೆ. ಇತ್ತೀಚಿಗೆ ಈ ರೀತಿಯ ವಂಚನೆಗೆ ಒಳಗಾಗಿದ್ದ ಸುಮಾರು 250 ಭಾರತೀಯರನ್ನು ರಕ್ಷಿಸಿ ಅವರನ್ನು ಮರಳಿ ಸ್ವದೇಶಕ್ಕೆ ಕಳುಹಿಸಲಾಗಿದೆ ಎಂದು ವರ್ಷಾರಂಭದಲ್ಲೇ ಕಾಂಬೋಡಿಯಾ ಸರ್ಕಾರ ಮಾಹಿತಿ ನೀಡಿದೆ. ಈ ನಡುವೆ ಇದೀಗ ಕಾಂಬೋಡಿಯಾದ ಸ್ಥಳೀಯ ಪೊಲೀಸರು 14 ಜನರನ್ನು ರಕ್ಷಿಸಿರುವ ಸಂಗತಿ ಬೆಳಕಿಗೆ ಬಂದಿದೆ.



## 10 ವರ್ಷದ ಬಾಲಕನ ಉಸಿರುಗಟ್ಟಿಸಿ ಕೊಂದ ತಾಯಿ!

**ನ್ಯೂಯಾರ್ಕ್:** ಮಹಾ ತಾಯಿಯೊಬ್ಬಳು ತನ್ನ ಮಗನ ಮೇಲೆ ಕುಳಿತು, ಉಸಿರುಗಟ್ಟಿಸಿ ಕೊಂದಿದ್ದಾಳೆ. ಈ ಘಟನೆ ಅಮೆರಿಕದಲ್ಲಿ ನಡೆದಿದೆ. ಆರೋಪಿ ಮಹಿಳೆಯನ್ನು ಜೆನಿಫರ್ ವಿಲ್ಸನ್(48) ಎಂದು ಗುರುತಿಸಲಾಗಿದ್ದು, ಈಕೆ ಮೃತ ಬಾಲಕನ ಮಲತಾಯಿ ಎಂದು ತಿಳಿದುಬಂದಿದೆ. ಡಕೋಟಾ ಸ್ಟೀವನ್ಸ್ (10) ಕೊಲೆಯಾದ ಬಾಲಕ. ಮಗ ಪಕ್ಕದ ಮನೆಗೆ ಹೋಗುವುದನ್ನು ತಪ್ಪಿಸಲು ಹೋಗಿ ಉಸಿರುಗಟ್ಟಿಸಿ ಕೊಂದಿರುವುದು ಪೊಲೀಸ್ ತನಿಖೆಯ ವೇಳೆ ತಿಳಿದುಬಂದಿದೆ. ಸ್ಟೀವನ್ ನೆರೆಯ ಮನೆಗೆ ಆಟವಾಡಲು ಹೋಗುತ್ತಿರುವ ವೇಳೆ ಅದನ್ನು ತಪ್ಪಿಸಲು ಜೆನಿಫರ್ ಮುಂದಾಗಿದ್ದಾಳೆ. ಇದಕ್ಕಾಗಿ ಬಾಲಕನನ್ನು ನೆಲಕ್ಕೆ ಒತ್ತಿ ಹಿಡಿದಿಟ್ಟು ಆತನ ಮೇಲೆ ಕುಳಿತಿದ್ದಾಳೆ. ಬಾಲಕ ಉಸಿರಾಡಲು ಕಷ್ಟವಾಗುತ್ತಿದೆ ಎಂದು ಗೋಳಾಡಿದರೂ 150 ಕೆಜಿ ತೂಕದ ಈ ಮಹಿಳೆ ಎದ್ದೇಳಲಿಲ್ಲ. ಸುಮಾರು 5 ನಿಮಿಷಗಳ ಕಾಲ ಕುಳಿತ ನಂತರ ಬಾಲಕ ಚಲನೆಯನ್ನು ನಿಲ್ಲಿಸಿರುವುದನ್ನು ಗಮನಿಸಿದ್ದಾಳೆ. ಕೂಡಲೆ ಮಗುವನ್ನು ಸೌತ್ ಬೆಂಡ್ ಆಸ್ಪತ್ರೆಗೆ ದಾಖಲಿಸಿದ್ದಾಳೆ. ಆದರೆ ಚಿಕಿತ್ಸೆ ಫಲಕಾರಿಯಾಗದೆ ಬಾಲಕ ಸಾವನ್ನಪ್ಪಿದ್ದಾನೆ.

### ಮುಖ್ಯಮಂತ್ರಿ ಸಿದ್ದರಾಮಯ್ಯರ ಪತ್ನಿ ಪಾರ್ವತಿ ಅವರಿಗೆ ಮುಡಾ ನಿವೇಶನ ಮಂಜೂರಾತಿ ಹಗರಣಕ್ಕೆ ಹೊಸ ತಿರುವು

# ಜಮೀನಿನ ಮೂಲ ಮಾಲೀಕರ ಮೊಮ್ಮಗನಿಂದ ಹಕ್ಕು ಪ್ರತಿಪಾದನೆ

- ಮೂಲ ಆಸ್ತಿ ಮಾಲೀಕರ ಮನೆಗೆ ಬಿಜೆಪಿ ನಿಯೋಗ ಭೇಟಿ
- ಕುಟುಂಬದ ಸಹಿ ಪಡೆಯದೆ ಆಸ್ತಿ ಪರಭಾರೆ ಮಾಡಲಾಗಿದೆ
- ಪಾರ್ವತಿ ದಾನವಾಗಿ ಪಡೆದ ಜಮೀನಲ್ಲಿ ನಮ್ಮ ಹಕ್ಕಿದೆ
- ನಮ್ಮ ಭಾಗದ ಜಮೀನು ನಮಗೆ ಕೊಡಿಸಲು ನೆರವಾಗಿ

ಮೈಸೂರು, ಜು.20(ಬಿಎಲ್‌ಯು)- ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಮೈಸೂರಿನ ವಿಜಯನಗರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ನಿ ಪಾರ್ವತಿ ಅವರಿಗೆ ನಿವೇಶನ ಮಂಜೂರು ಪ್ರಕರಣ ಈಗ ಹೊಸ ತಿರುವು ಪಡೆದಿದೆ. ಮೈಸೂರಿನ ಕೆಸರೆಯಲ್ಲಿ ಪಾರ್ವತಿಯವರಿಗೆ ಅವರ ಸಹೋದರ ಮಲ್ಲಿಕಾರ್ಜುನ ಸ್ವಾಮಿ ಅವರು ದಾನವಾಗಿ ನೀಡಿದ್ದ ಜಮೀನಿನ ಸಂಬಂಧವೂ ವಿವಾದ ಏರ್ಪಟ್ಟಿದೆ. ಈಗ ಮೂಲ ಮಾಲೀಕರ ಮೊಮ್ಮಗ ಆ ಭೂಮಿ ಮೇಲೆ ಹಕ್ಕು ಪ್ರತಿಪಾದಿಸುತ್ತಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಕುಟುಂಬಕ್ಕೆ ಮತ್ತೊಂದು ಸವಾಲು ಎದುರಾಗಿದೆ.

ಮೈಸೂರಿನ ಕೆಸರೆಯ ಸರ್ವೆ ನಂಬರ್ 464ರ 3.16 ಎಕರೆ ಜಮೀನನ್ನು ಗಾಂಧಿನಗರದ ನಿವಾಸಿ, ಪರಿಶಿಷ್ಟ ಜಾತಿಗೆ ಸೇರಿದ ನಿಂಗ ಅವರು ಸರ್ಕಾರದಿಂದ ಹರಾಜು ಮೂಲಕ ಖರೀದಿ ಮಾಡಿದ್ದರು. ಈ ಆಸ್ತಿ ಮೇಲೆ ನಿಂಗ ಅವರ ಮಕ್ಕಳಾದ ಮಲ್ಲಯ್ಯ, ಮೈಲಾರಯ್ಯ ಹಾಗೂ ದೇವರಾಜು ಹಕ್ಕು ಹೊಂದಿದ್ದರು.

ಆದರೆ ನಿಂಗ ಅವರ ಕಿರಿಯ ಪುತ್ರ ದೇವರಾಜು, ಅಣ್ಣಂದಿರಾದ ಮಲ್ಲಯ್ಯ ಹಾಗೂ ಮೈಲಾರಯ್ಯ ಅವರ ಸಹಿ ಪಡೆಯದೆ, ಅವರ ಗಮನಕ್ಕೂ ತಾರದೆ ಪಾರ್ವತಿ ಅವರ ಅಣ್ಣ ಮಲ್ಲಿಕಾರ್ಜುನ ಸ್ವಾಮಿಗೆ ಮಾರಾಟ ಮಾಡಿದ್ದಾರೆ ಎಂದು ಮಲ್ಲಯ್ಯ ಅವರ ಮಗ ಜವರಯ್ಯ ಈಗ ಆರೋಪಿಸಿದ್ದಾರೆ.

ಬಿಜೆಪಿ ರಾಜ್ಯ ಉಪಾಧ್ಯಕ್ಷ ಎನ್.ಮಹೇಶ್ ನೇತೃತ್ವದ ನಿಯೋಗ ಇಂದು ಗಾಂಧಿನಗರ 8ನೇ ಕ್ರಾಸ್‌ನಲ್ಲಿರುವ ಜವರಯ್ಯ ಮನೆಗೆ ಭೇಟಿ ನೀಡಿ ಆಸ್ತಿ ವಂಚಿತರಿಂದ ಮಾಹಿತಿ ಪಡೆದರು.

ನಮ್ಮ ತಂದೆ ಮಲ್ಲಯ್ಯ ಹಾಗೂ ಚಿಕ್ಕಪ್ಪ ಮೈಲಾರಯ್ಯ ಅವರಿಗೆ ತಿಳಿಸದೆ ನಮ್ಮ ಮತ್ತೊಬ್ಬ ಚಿಕ್ಕಪ್ಪ ದೇವರಾಜು ಕೆಸರೆಯಲ್ಲಿರುವ ನಮ್ಮ ಜಮೀನು ಮಾರಾಟ ಮಾಡಿದ್ದಾರೆ. ಆಗ ನಮ್ಮ ತಂದೆ ಹಾಗೂ ಚಿಕ್ಕಪ್ಪ ಮೈಲಾರಯ್ಯ ಅವರ ಸಹಿ ಕೂಡ ಪಡೆದಿಲ್ಲ. ನಮ್ಮ ಪಾಲಿಗೆ ಬರಬೇಕಾದ ಆಸ್ತಿಯನ್ನು ನಮ್ಮ ಗಮನಕ್ಕೆ ತಾರದೆ ಸಿದ್ದರಾಮಯ್ಯ ಬಾವಮೈದ ಮಲ್ಲಿಕಾರ್ಜುನ ಸ್ವಾಮಿಗೆ ದೇವರಾಜು ಮಾರಾಟ ಮಾಡಿದ್ದಾರೆ ಎಂದು ಜವರಯ್ಯ ಆಪಾದಿಸಿದರು.

ಕೆಸರೆಯಲ್ಲಿ ನಮಗೆ ಸೇರಬೇಕಾದ ಜಮೀನು ಇದೆ ಎಂಬ ವಿಚಾರ ಗೊತ್ತಿತ್ತು. ಆದರೆ ಮಾರಾಟ ಮಾಡಿರುವ ವಿಷಯ ನಮ್ಮ ಗಮನಕ್ಕೆ ಬಂದಿರಲಿಲ್ಲ. ಇತ್ತೀಚಿಗೆ ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಿ ಅವರಿಗೆ ದಾನವಾಗಿ ಬಂದ ಈ ಭೂಮಿ ನಮ್ಮದು ಎಂಬುದು ಮನವರಿಕೆ ಆಯ್ತು. ಈ ಭೂಮಿಗೆ ಬದಲು ವಿಜಯನಗರದಲ್ಲಿ 14 ನಿವೇಶನಗಳನ್ನು ಪಾರ್ವತಿ ಅವರು ಪಡೆದಿರುವುದು ಪತ್ರಿಕೆ ಹಾಗೂ ಟಿವಿ ಮಾಧ್ಯಮಗಳಲ್ಲಿ ಬಂದ ವರದಿಯಿಂದ ನಮಗೆ ತಿಳಿಯಿತು ಎಂದರು.

ನಮ್ಮ ತಂದೆ ಹಾಗೂ ಚಿಕ್ಕಪ್ಪ ಮೈಲಾರಯ್ಯ ಅವರ ಸಹಿ ಪಡೆಯದೆ ಮಲ್ಲಿಕಾರ್ಜುನಸ್ವಾಮಿ ಹೇಗೆ ನಮ್ಮ ಜಮೀನು ಖರೀದಿ ಮಾಡಿದರು. ವಂಶವೃಕ್ಷ ಪರಿಶೀಲನೆ ಮಾಡದೆ, ನಮ್ಮ ಸಹಿ ಇಲ್ಲದೆ ಇರುವಾಗ ಪಾರ್ವತಿ ಅವರ ಸಹೋದರ ಇದನ್ನು ಹೇಗೆ ಖರೀದಿಸಿದರು? ನಂತರ ಅದನ್ನು ದಾನ ಮಾಡಿದರು. ದಾನವಾಗಿ ಪಡೆದ ನಂತರ ಇದೇ ಜಮೀನು ಆಧರಿಸಿ ವಿಜಯನಗರದಲ್ಲಿ ಪಾರ್ವತಿ ಅವರು ಹೇಗೆ ನಿವೇಶನ ಪಡೆದರು ಎಂದು ಜವರಯ್ಯ ಪ್ರಶ್ನಿಸಿದ್ದಾರೆ.

ಈಗ ನಮಗೆ ಸೇರಬೇಕಾದ ಜಮೀನು ಅಕ್ರಮವಾಗಿ ಮಲ್ಲಿಕಾರ್ಜುನಸ್ವಾಮಿಗೆ ಪರಭಾರೆಯಾಗಿದೆ. ಜೊತೆಗೆ ಪಾರ್ವತಿ ಅವರಿಗೂ ಕೂಡ ಅಕ್ರಮವಾಗಿ ದಾನಪತ್ರ ನೋಂದಣಿಯಾಗಿದೆ ಎಂದು ದೂರಿದರು.

ಕೆಸರೆಯಲ್ಲಿ ಪಾರ್ವತಿ ಅವರು ದಾನವಾಗಿ ಪಡೆದಿರುವ ಜಮೀನಿನ ಮೇಲೆ ನಮಗೂ ಕಾನೂನಿನ ಪ್ರಕಾರ ಹಕ್ಕು ಇದೆ. ಆದ ಕಾರಣ ಆ ಜಮೀನಿನಲ್ಲಿ ನಮಗೂ ಭಾಗ ಬೇಕಿದೆ. ಈ ಸಂಬಂಧ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸುತ್ತೇವೆ ಎಂದು ಜವರಯ್ಯ ತಿಳಿಸಿದರು.

ನಮ್ಮ ಈ ಹೋರಾಟಕ್ಕೆ ನಿಮ್ಮ ಬೆಂಬಲ ಅಗತ್ಯ ಎಂದು ಇದೇ ವೇಳೆ ಬಿಜೆಪಿ ನಿಯೋಗಕ್ಕೆ ಜವರಯ್ಯ ಹಾಗೂ ಅವರ ಪತ್ನಿ ಪುಷ್ಪಾ ಮನವಿ ಮಾಡಿದರು.

ಈ ವೇಳೆ ಮಹೇಶ್ ಹಾಗೂ ಬಿಜೆಪಿ ನಾಯಕರು, ನಿಮ್ಮ ಹೋರಾಟಕ್ಕೆ ನಮ್ಮ ಸಂಪೂರ್ಣ ಬೆಂಬಲವಿದೆ. ಸರ್ಕಾರದ ಮಟ್ಟದಲ್ಲಿ ನಾವು ಕೂಡ ನಿಮ್ಮ ಪರವಾಗಿ ಹೋರಾಟ ಮಾಡುತ್ತೇವೆ ಎಂದು ಭರವಸೆ ನೀಡಿದರು. ತರುವಾಯ ಈ ಬಗ್ಗೆ ಪತ್ರಕರ್ತರೊಂದಿಗೆ ಮಾತನಾಡಿದ ಮಹೇಶ್, ಸಿದ್ದರಾಮಯ್ಯರ ಪತ್ನಿ ಪಾರ್ವತಿ ಅವರು ವಿಜಯನಗರದಲ್ಲಿ ಕಾನೂನು ಉಲ್ಲಂಘಿಸಿ ನಿವೇಶನ ಪಡೆದಿರುವುದು ಒಂದು ಕಡೆಯಾದರೆ, ಜಮೀನಿನ ಮೂಲ ಮಾಲೀಕರಿಗೆ ಮೋಸ ಮಾಡಿ ಅವರ ಆಸ್ತಿ ಕಬಳಿಸಿದ್ದಾರೆ ಎಂದು ಆರೋಪಿಸಿದರು.

ಈ ಸಂಬಂಧ ಜವರಯ್ಯ ಪರವಾಗಿ ನಾವು ಹೋರಾಟ ಮಾಡುತ್ತೇವೆ. ಅವರಿಗೆ ದಕ್ಕಬೇಕಾದ ಆಸ್ತಿಯನ್ನು ಅವರಿಗೆ ಕೊಡಿಸಲು ಪ್ರಯತ್ನಿಸುತ್ತೇವೆ ಎಂದು ತಿಳಿಸಿದರು.

ಬಿಜೆಪಿ ನಿಯೋಗದಲ್ಲಿ ಹಿಂದುಳಿದ ಮೋರ್ಚಾ ರಾಜ್ಯಾಧ್ಯಕ್ಷ ಕೌಟಿಲ್ಯ ರಘು, ನಗರಾಧ್ಯಕ್ಷ ಎಲ್.ನಾಗೇಂದ್ರ ಮಾಜಿ ಮೇಯರ್ ಸಂದೇಶ್ ಸ್ವಾಮಿ, ಮುಖಂಡರಾದ ಮಹದೇವಯ್ಯ, ಬಿ.ಎಂ.ರಘು ಇತರರು ಇದ್ದರು.



ಮೈಸೂರಿನ ಗಾಂಧಿನಗರದ ಜವರಯ್ಯ ಮನೆಗೆ ಎನ್.ಮಹೇಶ್ ನೇತೃತ್ವದ ಬಿಜೆಪಿ ನಿಯೋಗ ಶನಿವಾರ ಭೇಟಿ ನೀಡಿ, ಮಾಹಿತಿ ಪಡೆಯಿತು.

# ವಾಲ್ಮೀಕಿ ನಿಗಮ ಹಗರಣ ಅಧಿಕಾರಿಗಳ ಮೇಲೆ ಹಾಕಲು ಸಿಎಂ ಸಿದ್ದರಾಮಯ್ಯ ಯತ್ನ

- ವಿಪಕ್ಷ ನಾಯಕ ಆರ್.ಅಶೋಕ್ ಆರೋಪ
- ಈ ಹಗರಣದಲ್ಲಿ ತಮಗೆ ತಾವೇ ಕ್ಲೀನ್‌ಚಿಟ್ ಪಡೆಯುತ್ತಿದ್ದಾರೆ
- 40 ವರ್ಷದ ಅವರ ಶುದ್ಧ ಹಸ್ತದ ಮುಖವಾಡ ಕಳಚಿದೆ

ಬೆಂಗಳೂರು, ಜು.20(ಕೆಎಂಶಿ)- ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಹಣ ಅಕ್ರಮ ವರ್ಗಾವಣೆ ಹಗರಣವನ್ನು ಅಧಿಕಾರಿಗಳ ಮೇಲೆ ಎತ್ತಿ ಹಾಕುವ ಕೆಲಸವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಮಾಡುತ್ತಿದ್ದಾರೆ ಎಂದು ವಿಧಾನಸಭೆಯ ಪ್ರತಿಪಕ್ಷ ನಾಯಕ ಆರ್.ಅಶೋಕ್ ಇಂದಿಲ್ಲಿ ಟೀಕಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇಂತಹ ಕೃತ್ಯಗಳಿಂದ ಸಿದ್ದರಾಮಯ್ಯ ಅವರ 40 ವರ್ಷಗಳ ಶುದ್ಧ ಹಸ್ತದ ರಾಜಕೀಯ ಮುಖವಾಡ ಕಳಚಿಬಿದ್ದಿದೆ ಎಂದು ಹೇಳಿದರು.

ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣ ಮುಚ್ಚಿಹಾಕುವ ತೀರ್ಮಾನ ಕಾಂಗ್ರೆಸ್ ಮಾಡಿದೆ. ಸ್ವಯಂ ಕ್ಲೀನ್‌ಚಿಟ್ ಕೊಟ್ಟುಕೊಂಡಿರುವ ಸಿದ್ದರಾಮಯ್ಯ, ಎಲ್ಲ ತಪ್ಪನ್ನು ಅಧಿಕಾರಿಗಳ ಮೇಲೆ ಹಾಕಿದ್ದಾರೆ. ತಪ್ಪು ಅಧಿಕಾರಿಗಳಿಂದ ಆಗುವಾಗ ಮುಖ್ಯಮಂತ್ರಿ ಏನು ಮಾಡುತ್ತಿದ್ದರು. ತಪ್ಪೆಸಗಿದ ಅಧಿಕಾರಿ ಹಿಂದೆಯೂ ತಪ್ಪು ಮಾಡಿದ್ದರು ಎಂದಿರುವ ಸಿದ್ದರಾಮಯ್ಯ, ಅಂತಹ ಅಧಿಕಾರಿಯನ್ನು ಪ್ರಮುಖ ಹುದ್ದೆಯಲ್ಲಿ ಇರಲು ಏಕೆ ಬಿಟ್ಟಿದ್ದರು ಎಂದು ಪ್ರಶ್ನಿಸಿದರು.

ಜನರ ಹಣ ಕಳ್ಳ ಖಾತೆಗೆ ವರ್ಗಾಯಿಸಿದ್ದು ರಾಜ್ಯ ಸರ್ಕಾರ. ಇದರಲ್ಲಿ ಕೇಂದ್ರ ಆರ್ಥಿಕ ಸಚಿವೆ ನಿರ್ಮಲಾ ಸೀತಾರಾಮನ್ ಪಾತ್ರ ಹೇಗೆ ಬರುತ್ತದೆ. ಬ್ಯಾಂಕ್ ಅಧಿಕಾರಿಗಳು ಹಗರಣದ ತನಿಖೆಯನ್ನು ಸಿಬಿಐಗೆ ವಹಿಸಿದರು. ರಾಜ್ಯ ಸರ್ಕಾರ ಹ'ಗ'ರ'ಣ ಮುಚ್ಚಿಹಾಕಲು ತನಿಖೆಯನ್ನು ಎಸ್‌ಐಟಿಗೆ ವಹಿಸಿದೆ.



ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ರಿಕೆಗಳಿಗೆ ಪುಟಗಟ್ಟಲೆ ಜಾಹೀರಾತು ನೀಡಿ ಸ್ಪಷ್ಟನೆ ಕೊಟ್ಟಿದ್ದಾರೆ, ಜೊತೆಗೆ, ಜಾತಿ ಬಗ್ಗೆ ಹೇಳಿದ್ದಾರೆ, ನಿರ್ದಿಷ್ಟ ಜಾತಿಯ ವಿರುದ್ಧ ಯಾವುದೇ ಆಪಾದನೆ ಮಾಡಬಾರದು ಎಂದು ಸಂವಿಧಾನದಲ್ಲೇ ತಿದ್ದುಪಡಿ ಮಾಡಲಿ, ಹಗರಣದಿಂದ ಬೆಚ್ಚಿ ಬಿದ್ದು ಹೀಗೆ ಮಾತಾಡುತ್ತಿದ್ದಾರೆ. 40ಕ್ಕೂ ಅಧಿಕ ದಾಖಲೆಗಳನ್ನು ನಾವು ಕೊಟ್ಟಿದ್ದು, ಈ ಬಗ್ಗೆ ಸ್ಪಷ್ಟೀಕರಣ ಕೊಡದೆ ಎಲ್ಲಕ್ಕೂ ಪದ್ಮನಾಭ ಕಾರಣ ಎಂದು ಮುಖ್ಯಮಂತ್ರಿ ಹೇಳುತ್ತಿದ್ದಾರೆ ಎಂದರು.

ಸಚಿವರ ತಪ್ಪಿಲ್ಲ ಎಂದ ಮೇಲೆ ಬಿ.ನಾಗೇಂದ್ರ ರಾಜೀನಾಮೆ ಏಕೆ ಕೊಟ್ಟರು. ಸಚಿವರನ್ನು ಅರ್ಧ ದಾರಿಯಲ್ಲೇ ಕೈ ಬಿಟ್ಟಿದ್ದಾರೆ ಎಂದರ್ಥ. ಲೋಕಸಭೆ ಚುನಾವಣೆಗಾಗಿ ನಾಗೇಂದ್ರ ಹಾಗೂ ಬಸವನಗೌಡ ದದ್ದಲ್ ಶ್ರಮ ವಹಿಸಿ, ಕಾಂಗ್ರೆಸ್ ಪಕ್ಷಕ್ಕಾಗಿ ಹಣ ಸಂಗ್ರಹ ಮಾಡಿ ತೆಲಂಗಾಣಕ್ಕೆ ಕಳುಹಿಸಿದ್ದಾರೆ ಎಂದು ಆರೋಪಿಸಿದರು.

ಬಿಜೆಪಿ ಸರ್ಕಾರದಲ್ಲಿ ಹಗರಣಗಳ ಸರಮಾಲೆಯೇ ನಡೆದಿದೆ ಎನ್ನುವವರು ಅಧಿಕಾರಕ್ಕೆ ಬಂದು 15 ತಿಂಗಳಾದರೂ 40 ಪರ್ಸೆಂಟ್ ಆರೋಪದ ತನಿಖೆ ಇನ್ನೂ ಏಕೆ ಮಾಡಿಸಿಲ್ಲ. ಹಿಂದಿನ ಸರ್ಕಾರ ಹಗರಣ ಮಾಡಿದ್ದರೆ ತನಿಖೆ ನಡೆಸಲು ಇಷ್ಟು ಸಮಯ ಬೇಕೆ.

ರಾಜ್ಯದ ಜನರಿಗಾಗಿ ಹಾಗೂ ದಲಿತರಿಗಾಗಿ ಬಿಜೆಪಿ ಹೋರಾಟ ಮಾಡುತ್ತಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆ ನೀಡಲೇಬೇಕು. ದಲಿತರ ಹಣ ವಾಪಸ್ ತರಲೇಬೇಕು. ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ಆಗಲೇಬೇಕು ಎನ್ನುವುದು ನಮ್ಮ ಪಕ್ಷದ ಸ್ಪಷ್ಟ ಉದ್ದೇಶ.

ಬಿಜೆಪಿ ವಿರುದ್ಧ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾಡಿರುವ 21 ಹಗರಣಗಳ ಆರೋಪ ತನಿಖೆಯನ್ನು ನಾವೇ ಮಾಡಿಸುತ್ತೇವೆ. ಇದಕ್ಕೆ ಮೊದಲು ಅವರು ಅಧಿಕಾರ ದಿಂದ ಕೆಳಗಿಳಿಯಲಿ ಎಂದು ವಿಪಕ್ಷ ನಾಯಕ ಆರ್.ಅಶೋಕ್ ಸವಾಲು ಹಾಕಿದರು.

ಬ್ರ್ಯಾಂಡ್ ಬೆಂಗಳೂರು ಆಗಬೇಕೆಂದರೆ ಎಲ್ಲ ಕ್ಷೇತ್ರಗಳು ಅಭಿವೃದ್ಧಿಯಾಗಬೇಕು, ಬೆಂಗಳೂರಿನಲ್ಲಿ ಬಿಜೆಪಿ ಶಾಸಕರೇ ಹೆಚ್ಚಿದ್ದು, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಎಲ್ಲರ ಬಳಿ ಚರ್ಚೆ ಮಾಡಿ ಅನುದಾನ ನೀಡಲಿ. ಕಾಂಗ್ರೆಸ್ ಶಾಸಕರಿಗೆ ಬಿಜೆಪಿ ಸರ್ಕಾರ ಅನುದಾನ ನೀಡಿತ್ತು. ಅದೇ ರೀತಿ ಕಾಂಗ್ರೆಸ್ ಸಹ ನಡೆದುಕೊಳ್ಳಲಿ, ನಗರದಲ್ಲಿ ಕಸದ ರಾಶಿ ಹೆಚ್ಚಿದ್ದು, ವಿಲೇವಾರಿ ಮಾಡಲು ಕೂಡಲೇ ಕ್ರಮ ವಹಿಸಲಿ ಎಂದು ಆಗ್ರಹಿಸಿದರು.

## ಡೆಂಗ್ಯೂ ಬಗ್ಗೆ ರೀಲ್ಸ್ ಮಾಡಿ ಲಕ್ಷ ಬಹುಮಾನ ಗೆಲ್ಲಿ



ಬೆಂಗಳೂರು, ಜು.20- ಸಿಲಿಕಾನ್ ಸಿಟಿ ಬೆಂಗಳೂರು ಸೇರಿ ರಾಜ್ಯದಲ್ಲಿ ಡೆಂಗ್ಯೂ ದಿನದಿಂದ ದಿನಕ್ಕೆ ಏರಿಕೆ ಕಾಣುತ್ತಿದೆ. ಇದಕ್ಕೆ ಕಡಿವಾಣ ಹಾಕಲು ಮನೆ ಮನೆ ಸರ್ವೆ ಮಾಡುತ್ತೇವೆ ಎಂದು ಹೊರಟಿದ್ದ ಬಿಬಿಎಂಪಿ, ಇದೀಗ ಇದರ ಜೊತೆಗೆ ಅರಿವು ಮೂಡಿಸುವ ಕಾರ್ಯಕ್ರಮ ಮಾಡಲು ಮುಂದಾಗಿದೆ. ರೀಲ್ಸ್ ಪ್ರಿಯರಿಗೆ ಬಿಬಿಎಂಪಿ ಭರ್ಜರಿ ಆಫರ್ ನೀಡಿದ್ದು, 'ರೀಲ್ಸ್ ಮಾಡಿ ಒಂದು ಲಕ್ಷ ಗೆಲ್ಲಿ' ಎಂದು ಬಿಬಿಎಂಪಿ ಆರೋಗ್ಯ ಇಲಾಖೆಯಿಂದ ಆಹ್ವಾನಿಸಲಾಗಿದೆ.

ಡೆಂಗ್ಯೂ ಹೆಚ್ಚಳ ಹಿನ್ನೆಲೆ ರೀಲ್ಸ್ ಮೂಲಕ ಡೆಂಗ್ಯೂ ವಾರಿಯರ್ ಆಗಲು ಬಿಬಿಎಂಪಿ ಅವಕಾಶ ಕಲ್ಪಿಸಿದೆ. ಸೋಷಿಯಲ್ ಮೀಡಿಯಾದಲ್ಲಿ ಡೆಂಗ್ಯೂ ಕುರಿತ ರೀಲ್ಸ್‌ಗಳನ್ನು ಆಹ್ವಾನಿಸಿರುವ ಪಾಲಿಕೆ, ಮೊದಲ ಐದು ಉತ್ತಮ ರೀಲ್ಸ್‌ಗಳಿಗೆ ತಲಾ 25 ಸಾವಿರ ರೂ. ಬಹುಮಾನ ಘೋಷಿಸಿದೆ. ಇನ್ನು ದ್ವಿತೀಯ ಬಹುಮಾನದಲ್ಲಿ ಐವರಿಗೆ ತಲಾ 10 ಸಾವಿರ ರೂ. ನಿಗದಿ ಮಾಡಿದೆ. ವಿಶೇಷವಾಗಿ ಶಾಲಾ ಮಕ್ಕಳಿಗೂ ಬಿಬಿಎಂಪಿ ಬಂಪರ್ ಆಫರ್ ಕೊಟ್ಟಿದ್ದು, ಯಾವ ಶಾಲೆ ಹೆಚ್ಚು ವಿದ್ಯಾರ್ಥಿಗಳ ಬಳಿ ರೀಲ್ಸ್ ಮಾಡಿಸುತ್ತದೆಯೋ ಆ ಶಾಲೆಗೆ 1 ಲಕ್ಷ ರೂ. ಬಹುಮಾನ ಘೋಷಿಸಿದೆ. ಅಲ್ಲದೇ ಮಕ್ಕಳಿಗೆ ಜಾಗೃತಿ ಮೂಡಿಸುವ ವಿಡಿಯೋ ಮಾಡಲು ಉತ್ತೇಜಿಸುವ ಶಿಕ್ಷಕಿಯರಿಗೂ 35 ಸಾವಿರ ರೂಪಾಯಿ ಬಹುಮಾನದ ಆಫರ್ ಕೊಟ್ಟಿದೆ. ಡೆಂಗ್ಯೂ ಜಾಗೃತಿ ಸಂಬಂಧ ರೀಲ್ಸ್ ಮಾಡಿದ ನಂತರ ಅದನ್ನು ಬಿಬಿಎಂಪಿ ಆರೋಗ್ಯ ಇಲಾಖೆ ಫೇಸ್‌ಬುಕ್, ಟ್ವಿಟರ್ ಖಾತೆಗೆ ಟ್ಯಾಗ್ ಮಾಡಬೇಕು. ಯಾವ ರೀಲ್ಸ್ ಹೆಚ್ಚು ವೀಕ್ಷಣೆ ಪಡೆಯುತ್ತದೆ. ಹೆಚ್ಚು ಮಾಹಿತಿಗಳನ್ನು ಒಳಗೊಂಡಿದೆಯೋ ಅದನ್ನು ಆಧರಿಸಿ ಬಹುಮಾನ ಬಿಬಿಎಂಪಿ ಬಹುಮಾನ ನೀಡಲಿದೆ.

## ನೂತನ ಜಿಲ್ಲಾಧಿಕಾರಿ ಲಕ್ಷ್ಮೀಕಾಂತ್ ರೆಡ್ಡಿ ಅವರಿಗೆ ಶುಭ ಕೋರಿಕೆ



ನೂತನ ಜಿಲ್ಲಾಧಿಕಾರಿ ಲಕ್ಷ್ಮೀಕಾಂತ್ ರೆಡ್ಡಿ ಅವರಿಗೆ ಕೆ.ಆರ್.ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಪುಸ್ತಕ ನೀಡಿ, ಶುಭ ಕೋರಿದರು. ಈ ಸಂದರ್ಭದಲ್ಲಿ ರಘು ಕೌಟಿಲ್ಯ, ಎಸ್ಸಿ ಮೋರ್ಚಾ ನಗರಾಧ್ಯಕ್ಷ ಶೈಲೇಂದ್ರ, ಬಿಜೆಪಿ ಮುಖಂಡರಾದ ಎನ್.ಪ್ರದೀಪ್‌ಕುಮಾರ್ ಕಿಶೋರ್, ಮುರಳಿ, ಸಂತೋಷ್ ಉಪಸ್ಥಿತರಿದ್ದರು.

# ಸಿಎಂ ಪತ್ನಿಗೆ ದಾನವಾಗಿ ಬಂದ ಭೂಮಿ ಮಾರಾಟದಲ್ಲಿ ಮೋಸ


### ನ್ಯಾಯ ದೊರಕಿಸಿಕೊಡುವಂತೆ ಮೂಲ ಮಾಲೀಕರ ಮೊಮ್ಮಕ್ಕಳಿಂದ ಡಿಸಿಗೆ ಮನವಿ

ಮೈಸೂರು, ಜು.20(ಎಂಕೆ)- ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಿಯವರಿಗೆ ಅವರ ಸಹೋದರ ಮಲ್ಲಿಕಾರ್ಜುನ ಸ್ವಾಮಿ ದಾನವಾಗಿ ನೀಡಿದ್ದ ಕೆಸರೆ ಗ್ರಾಮದ ಸರ್ವೆ ನಂಬರ್ 464ರ 3 ಎಕರೆ 16 ಗುಂಟೆ ಜಮೀನು ಮಾರಾಟದಲ್ಲಿ ಮೋಸ ನಡೆದಿದ್ದು, ನ್ಯಾಯ ದೊರಕಿಸಿಕೊಡುವಂತೆ ಬಿಜೆಪಿ ರಾಜ್ಯ ಉಪಾಧ್ಯಕ್ಷ ಎನ್.ಮಹೇಶ್ ನೇತೃತ್ವದ ನಿಯೋಗದ ಮೂಲಕ ಮೂಲ ಮಾಲೀಕರ ಮೊಮ್ಮಕ್ಕಳಾದ ಗಾಂಧಿನಗರ ನಿವಾಸಿ ಜವರಯ್ಯ ಹಾಗೂ ಶ್ರೀರಾಂಪುರ 2ನೇ ಹಂತದ ನಿವಾಸಿ ಎಂ.ಮಂಜುನಾಥಸ್ವಾಮಿ ಜಿಲ್ಲಾಧಿಕಾರಿಗಳಿಗೆ ಶನಿವಾರ ಮನವಿ ಸಲ್ಲಿಸಿದರು.

ಪರಿಶಿಷ್ಟ ಜಾತಿಗೆ ಸೇರಿದ ನಿಂಗ ಅವರು 1935ರಲ್ಲಿ ಸರ್ಕಾರದಿಂದ ಹರಾಜು ಮೂಲಕ ಖರೀದಿ ಮಾಡಿದ್ದರು. ಈ ಆಸ್ತಿ ಮೇಲೆ ನಿಂಗ ಅವರ ಮಕ್ಕಳಾದ ಮಲ್ಲಯ್ಯ, ಮೈಲಾರಯ್ಯ ಹಾಗೂ ದೇವರಾಜು ಹಕ್ಕು ಹೊಂದಿದ್ದರು. ಆದರೆ ಈ ಜಮೀನನ್ನು ನಿಂಗ ಅವರ ಮೂರನೇ ಮಗ ದೇವರಾಜು, ತನ್ನ ಹಿರಿಯ ಸಹೋದರರಾದ ಮಲ್ಲಯ್ಯ, ಮೈಲಾರಯ್ಯ ಹಾಗೂ ಅವರ ಮಕ್ಕಳಾದ ನಮ್ಮ ಗಮನಕ್ಕೆ ಬಾರದಂತೆ ಮಾರಾಟ ಮಾಡಿ ಮೋಸ ಮಾಡಿದ್ದಾರೆ ಎಂದು ಮಲ್ಲಯ್ಯ ಅವರ ಪುತ್ರ ಜವರಯ್ಯ ಹಾಗೂ ಮೈಲಾರಯ್ಯ ಅವರ ಪುತ್ರ ಎಂ.ಮಂಜುನಾಥಸ್ವಾಮಿ ದೂರಿದ್ದಾರೆ.

ಸದರಿ ಜಮೀನು ಮಾರಾಟದ ವೇಳೆ ನಮ್ಮಿಂದ ಸಹಿ ಮಾಡಿಸಿಕೊಳ್ಳುವಾಗ ನಮ್ಮ ಚಿಕ್ಕಪ್ಪ ದೇವರಾಜು, ಪರಿಹಾರ ನೀಡುವುದಾಗಿ ಹೇಳಿ, ಇದುವರೆಗೆ ಯಾವುದೇ ಪರಿಹಾರ ನೀಡಿಲ್ಲ. ಅಲ್ಲದೆ ಜಮೀನು ಮಾರಾಟಕ್ಕೆ ಸಂಬಂಧಿಸಿದ ನಡಾವಳಿಗಳನ್ನು ನಮ್ಮ ಗಮನಕ್ಕೆ ತರದೆ ಮಾರಾಟ ಮಾಡಿದ್ದಾರೆ. ಹಾಗಾಗಿ ನಾವು ಮೋಸದಿಂದ ಕಳೆದುಕೊಂಡಿರುವ ಭೂಮಿಯನ್ನು ಕೊಡಿಸಿಕೊಡುವಂತೆ ಜಿಲ್ಲಾಧಿಕಾರಿಗಳಲ್ಲಿ ಮನವಿ ಮಾಡಿದರು.

ಅಪರ ಜಿಲ್ಲಾಧಿಕಾರಿ ಪಿ.ನಾಗರಾಜು ಮನವಿ ಸ್ವೀಕರಿಸಿದರು. ಶಾಸಕ ಟಿ.ಎಸ್.ಶ್ರೀವತ್ಸ ಮಾಜಿ ಶಾಸಕ ಎಲ್.ನಾಗೇಂದ್ರ, ಹಿಂದುಳಿದ ಮೋರ್ಚಾ ರಾಜ್ಯಾಧ್ಯಕ್ಷ ಕೌಟಿಲ್ಯ ರಘು, ಮುಖಂಡರಾದ ಅನಿಲ್ ಥಾಮಸ್, ಶೈಲೇಂದ್ರ, ಕೇಬಲ್ ಮಹೇಶ್, ನಗರಪಾಲಿಕೆ ಮಾಜಿ ಸದಸ್ಯೆ ಅಶ್ವಿನಿ ಶರತ್ ಮತ್ತಿತರಿದ್ದರು.



ಸಿದ್ಧರಾಮಯ್ಯನವರ ಪತ್ನಿಗೆ ದಾನವಾಗಿ ನೀಡಿದ್ದ ಕೆಸರೆ ಜಮೀನು ಮಾರಾಟದಲ್ಲಿ ಮೋಸ ನಡೆದಿದ್ದು, ನ್ಯಾಯ ದೊರಕಿಸಿಕೊಡುವಂತೆ ಮೂಲ ಮಾಲೀಕರ ಮೊಮ್ಮಕ್ಕಳು ಅಪರ ಜಿಲ್ಲಾಧಿಕಾರಿ ಪಿ.ಶಿವರಾಜು ಅವರಿಗೆ ಮನವಿ ಸಲ್ಲಿಸಿದರು. ಬಿಜೆಪಿ ರಾಜ್ಯ ಉಪಾಧ್ಯಕ್ಷ ಎನ್.ಮಹೇಶ್, ಶಾಸಕ ಟಿ.ಎಸ್.ಶ್ರೀವತ್ಸ ಮತ್ತಿತರರಿದ್ದರು.

## ಪ್ರವಾಹದಲ್ಲಿ ಕೊಚ್ಚಿ ಹೋದ ಯುವಕ

### ಮುತ್ತತ್ತಿ ಬಳಿ ಕಾವೇರಿ ನದಿಯಲ್ಲಿ ದುರಂತ

ಮಳವಳ್ಳಿ,ಜು.20-ಪ್ರವಾಹದಲ್ಲಿ ಅಪರಿಚಿತ ಯುವಕನೋರ್ವ ಕೊಚ್ಚಿ ಹೋದ ಘಟನೆ ಹಲಗೂರು ಸಮೀಪದ ಮುತ್ತತ್ತಿ ಕಾವೇರಿ ನದಿಯಲ್ಲಿ ಇಂದು ಸಂಭವಿಸಿದೆ.

ಕೊಚ್ಚಿ ಹೋದ ಯುವಕ ಯಾರೆಂಬುದು ಪತ್ತೆಯಾಗಿಲ್ಲ. ಆದರೆ ಈತ ಪ್ರವಾಹದಲ್ಲಿ ಕೊಚ್ಚಿ ಹೋಗುತ್ತಿರುವ ದೃಷ್ಯವನ್ನು ಪ್ರವಾಸಿಗರು ಮೊಬೈಲ್‌ನಲ್ಲಿ ಸೆರೆಹಿಡಿದಿದ್ದು, ಈ ವೀಡಿಯೋ ವೈರಲ್ ಆಗಿದೆ. ಕೆಆರ್‌ಎಸ್‌ನಿಂದ 17797 ಕ್ಯೂಸೆಕ್ ಮತ್ತು ಕಬಿನಿಯಿಂದ 33 ಸಾವಿರ ಕ್ಯೂಸೆಕ್ ನೀರನ್ನು ನದಿಗೆ ಹರಿಬಿಟ್ಟ ಪರಿಣಾಮ ಕಾವೇರಿಯಲ್ಲಿ ಪ್ರವಾಹ ಉಂಟಾಗಿದೆ. ನದಿಯಲ್ಲಿ ಯುವಕ ಸ್ನಾನ ಮಾಡುತ್ತಿದ್ದ ವೇಳೆ ಏಕಾಏಕಿ ನೀರಿನ ಹರಿವು ಹೆಚ್ಚಾಗಿದ್ದರಿಂದ ಆತ ಕೊಚ್ಚಿ ಹೋದ ಎಂದು ಹೇಳಲಾಗಿದೆ. ನೀರಿನ ರಭಸಕ್ಕೆ ಕೊಚ್ಚಿ ಹೋಗುತ್ತಿದ್ದ ಯುವಕ ಮರವೊಂದನ್ನು ತಬ್ಬಿ ಹಿಡಿದು ಬದುಕುಳಿಯಬಹುದು ಎಂದು ನದಿ ದಡದಲ್ಲಿದ್ದ ಪ್ರವಾಸಿಗರು ನಿರೀಕ್ಷಿಸಿದ್ದರಾದರೂ ನೀರಿನ ಸೆಳೆತ ಮರದಿಂದ ಸ್ವಲ್ಪ ದೂರಕ್ಕೆ ಆತನನ್ನು ಎಳೆದೊಯ್ದು ಕಾರಣ ಯುವಕನಿಗೆ ಬದುಕುಳಿಯುವ ಅವಕಾಶ ಕೈತಪ್ಪಿತ್ತು.

ಮೈಸೂರು ಮಿತ್ರ ಭಾನುವಾರ 21 ಜುಲೈ 2024

# ಪತ್ನಿಗೆ ಗುಂಡಿಕ್ಕಿ ಕೊಂದು ಕೋವಿ ಸಮೇತ ಠಾಣೆಗೆ ಬಂದು ಶರಣಾದ ಪತಿ

**ವಿರಾಜಪೇಟೆ ಬಳಿ ಅಮಾನುಷ ಘಟನೆ**


ನಾಯಕಂಡ ಬೋಪಣ್ಣ


ಶಿಲ್ಪ(ಸೀತಮ್ಮ)

ವಿರಾಜಪೇಟೆ, ಜು.20– ದಂಪತಿಗಳ ಜಗಳ ಕೊಲೆಯಲ್ಲಿ ಅಂತ್ಯವಾಗಿದೆ ಗಂಡನೇ ಪತ್ನಿಯನ್ನು ಗುಂಡಿಕ್ಕಿ ಕೊಂದು ತಾನೇ ಪೊಲೀಸ್ ಠಾಣೆಗೆ ತೆರಳಿ ಶರಣಾಗಿರುವ ಅಮಾನುಷ ಘಟನೆ ವರದಿಯಾಗಿದೆ.

ವಿರಾಜಪೇಟೆ ಸಮೀಪದ ಬೇಟೋಳಿ ಗ್ರಾಮದ ನಿವಾಸಿ ಮಾಜಿ ತಾಪಂ ಸದಸ್ಯೆ ಶಿಲ್ಪ (ಸೀತಮ್ಮ) ಎಂಬುವರೇ ಗಂಡನಿಂದ ಕೊಲೆಯಾದವರು. ಅವರಿಗೆ 36 ವರ್ಷ ವಯಸ್ಸಾಗಿತ್ತು.

ಕಾಫಿ ಬೆಳೆಗಾರ ನಾಯಕಂಡ ಬೋಪಣ್ಣ ತಮ್ಮ ಪತ್ನಿ ಶಿಲ್ಪ (ಸೀತಮ್ಮ) ಅವರನ್ನು ಮನೆಯ ಅಡುಗೆ ಕೋಣೆಯಲ್ಲಿಯೇ ಎದೆಯ ಭಾಗಕ್ಕೆ ಗುಂಡಿಕ್ಕಿ ಹತ್ಯೆ ಮಾಡಿದ್ದಾರೆ. ನಂತರ ಬೋಪಣ್ಣ (43) ವಿರಾಜಪೇಟೆ ನಗರ ಠಾಣೆ ಪೊಲೀಸರಿಗೆ ಕೋವಿ ಸಮೇತ ಹೋಗಿ ಶರಣಾಗಿದ್ದಾರೆ. ಪ್ರೀತಿಸಿ ಮದುವೆಯಾಗಿದ್ದ ಬೋಪಣ್ಣ ಮತ್ತು ಶಿಲ್ಪ ನಡುವೆ ಇತ್ತೀಚೆಗೆ ಭಿನ್ನಾಭಿಪ್ರಾಯ ತಲೆದೋರಿತ್ತು. ಪದೆ ಪದೆ ಕಲಹ ನಡೆಯುತ್ತಿತ್ತು ಎಂದು ಹೇಳಲಾಗಿದೆ. ಕೌಟುಂಬಿಕ ಕಲಹದಿಂದ ವಿಚ್ಛೇದನಕ್ಕೂ ಮುಂದಾಗಿದ್ದರು ಎನ್ನಲಾಗಿದೆ. ಈ ಹಿನ್ನೆಲೆಯಲ್ಲಿ ಕಲಹ ತಾರಕಕ್ಕೆ ಏರಿದ್ದು ಕೊಲೆಯಲ್ಲಿ ಅಂತ್ಯ ಕಂಡಿದೆ. ಸೀತಮ್ಮ ತಾಲೂಕು ಪಂಚಾಯಿತಿ ಮಾಜಿ ಸದಸ್ಯೆಯಾಗಿದ್ದು, ಹಿಂದೆ ರಾಜಕೀಯದಲ್ಲಿ ತೊಡಗಿಸಿಕೊಂಡಿದ್ದರು. ಈ ದಂಪತಿಗಳಿಗೆ ಇಬ್ಬರು ಹೆಣ್ಣು ಮಕ್ಕಳಿದ್ದು, ಒಬ್ಬಳು ಪಿಯುಸಿಯಲ್ಲಿ, ಮತ್ತೊಬ್ಬಳು 7ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ.

ವಿರಾಜಪೇಟೆ ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ಇಂದು ಘಟನಾ ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಭೇಟಿ ನೀಡಿದ್ದರು.

## ಇಂದು ಶ್ರೀ ಹಡಪದ ಅಪ್ಪಣ್ಣ ಜಯಂತ್ಯುತ್ಸವ

ಮಡಿಕೇರಿ ಜು.20– ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದೊಂದಿಗೆ ಶಿವಶರಣ ಶ್ರೀ ಹಡಪದ ಅಪ್ಪಣ್ಣ ಜಯಂತ್ಯುತ್ಸವ ಕಾರ್ಯಕ್ರಮವು ಜುಲೈ 21 ರಂದು ಬೆಳಿಗ್ಗೆ 10.30 ಗಂಟೆಗೆ ಗಾಳಿಬೀಡು ಜವಾಹರ್ ನವೋದಯ ವಿದ್ಯಾಲಯದಲ್ಲಿ ನಡೆಯಲಿದೆ. ಗಣ್ಯರು ಪಾಲ್ಗೊಳ್ಳಲಿದ್ದು, ಸಾರ್ವಜನಿಕರು ಸಹ ಭಾಗವಹಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

# ಪ್ರವಾಹ ಸಂತ್ರಸ್ತರಿಗೆ ಶೀಘ್ರ ನಿವೇಶನ ನೀಡಿ ಸ್ಥಳಾಂತರ

**ಕಾಳಜಿ ಕೇಂದ್ರದಲ್ಲಿ ಸಂತ್ರಸ್ತರ ಅಹವಾಲು ಸ್ವೀಕರಿಸಿ ಭರವಸೆ ನೀಡಿದ ಜಿಲ್ಲಾ ಉಸ್ತುವಾರಿ ಸಚಿವರು**

ಮಡಿಕೇರಿ, ಜು.20– ಪ್ರವಾಹದಿಂದ ಸಂಕಷ್ಟಕ್ಕೆ ಸಿಲುಕಿರುವ ಸಂತ್ರಸ್ತರಿಗೆ ಶೀಘ್ರ ನಿವೇಶನ ನೀಡಿ ಸ್ಥಳಾಂತರಿಸಲಾಗುವುದು ಎಂದು ಕೊಡಗು ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್.ಭೋಸರಾಜು ತಿಳಿಸಿದ್ದಾರೆ.

ಸಿದ್ದಾಪುರದಲ್ಲಿ ಸ್ಥಾಪಿಸಲಾಗಿರುವ ಕಾಳಜಿ ಕೇಂದ್ರಕ್ಕೆ ಭೇಟಿ ನೀಡಿ ಸಂತ್ರಸ್ತರ ಅಹವಾಲು ಸ್ವೀಕರಿಸಿದ ಸಚಿವರು ಊಟೋಪಚಾರ, ಆರೋಗ್ಯ ಸೇವೆ ಇತರ ಮೂಲ ಸೌಲಭ್ಯಗಳನ್ನು ಕಲ್ಪಿಸಲಾಗಿದೆಯೇ ಎಂದು ಮಾಹಿತಿ ಪಡೆದರು. ಪ್ರವಾಹ ಪೀಡಿತ ಪ್ರದೇಶದಿಂದ ಸ್ಥಳಾಂತರವಾಗುತ್ತೀರ ಎಂದು ಸಂತ್ರಸ್ತರನ್ನು ಕೇಳಿದರು. ಇದಕ್ಕೆ ಪ್ರತಿಕ್ರಿಯಿಸಿದ ಸಂತ್ರಸ್ತರು ಪ್ರತೀ ವರ್ಷ ಮಳೆಗಾಲ ಸಂದರ್ಭದಲ್ಲಿ ಪ್ರವಾಹ ಪರಿಸ್ಥಿತಿಯನ್ನು ಎದುರಿಸುತ್ತಿದ್ದು, ಜೀವನ ನಡೆಸುವುದು ದುಸ್ತರವಾಗಿದೆ. ಬದುಕು ಕಟ್ಟಿಕೊಳ್ಳಲು ತುಂಬಾ ತೊಂದರೆಯಾಗಿದೆ. ಆದ್ದರಿಂದ ನಿವೇಶನ ಒದಗಿಸಿ ಸ್ಥಳಾಂತರಿಸುವಂತೆ ಕೋರಿದರು.


ಸಿದ್ದಾಪುರದ ಕಾಳಜಿ ಕೇಂದ್ರಕ್ಕೆ ಉಸ್ತುವಾರಿ ಸಚಿವ ಬೋಸರಾಜು ಭೇಟಿ ನೀಡಿದ್ದರು.

ಈ ಸಂದರ್ಭದಲ್ಲಿ ಮನೋರಂಜನೆಗಾಗಿ ಟಿ.ವಿ., ಆರೋಗ್ಯ ಸೇವೆ ಇತರೆ ಸೌಲಭ್ಯಗಳನ್ನು ಕಲ್ಪಿಸುವಂತೆ ಅಧಿಕಾರಿಗಳಿಗೆ ಸಚಿವರು ಸೂಚಿಸಿದರು. ಯಾವುದೇ ರೀತಿಯ ತೊಂದರೆಯಾಗದಂತೆ ಗಮನಹರಿಸುವಂತೆ ತಹಶೀಲ್ದಾರರಿಗೆ ಸೂಚಿಸಿದರು. ಬಳಿಕ ಕರಡಿಗೋಡು ಪ್ರವಾಹ ಪೀಡಿತ ಪ್ರದೇಶಕ್ಕೆ ತೆರಳಿ ಅಲ್ಲಿನ ಸಂತ್ರಸ್ತರ ಅಹವಾಲು ಆಲಿಸಿದರು.

ನಂತರ ಸುದ್ದಿಗಾರರ ಜೊತೆ ಮಾತನಾಡಿದ ಸಚಿವರು ಸಂತ್ರಸ್ತರಿಗೆ ನಿವೇಶನ ಒದಗಿಸುವ ಸಂಬಂಧ ಆದಷ್ಟು ಶೀಘ್ರ ಸೂಕ್ತ ನಿರ್ಧಾರ ಕೈಗೊಳ್ಳಲಾಗುವುದು ಎಂದು ತಿಳಿಸಿದರು. ವಿರಾಜಪೇಟೆ ಶಾಸಕ ಎ.ಎಸ್.ಪೊನ್ನಣ್ಣ ಮಾತನಾಡಿ, ಸಂತ್ರಸ್ತರಿಗೆ ವಸತಿ ಸೇರಿದಂತೆ ಎಲ್ಲಾ ರೀತಿಯ ನೆರವು ನೀಡಲಾಗುವುದು ಎಂದು ಹೇಳಿದರು.

ಎ.ಎಸ್.ಪೊನ್ನಣ್ಣ ಅವರು ಗೋಣಿಕೊಪ್ಪಲು ಕೀರೆಹೊಳೆ, ಬಾಳೆಲೆ, ಹುದಿಕೇರಿ, ಟಿ.ಶೆಟ್ಟಿಗೇರಿ, ಶ್ರೀಮಂಗಲ ಕಾಳಜಿ ಕೇಂದ್ರಕ್ಕೆ ಭೇಟಿ ನೀಡಿ, ವೀಕ್ಷಣೆ ಮಾಡಿದರು.

ಕಾವೇರಿ ನದಿ ಪಾತ್ರದ ಪ್ರವಾಹ ಪೀಡಿತ ಪ್ರದೇಶ ಕರಡಿಗೋಡು ಗ್ರಾಮಕ್ಕೆ ಕೊಡಗು ಜಿಲ್ಲಾ ಉಸ್ತುವಾರಿ ಸಚಿವರಾದ ಎನ್.ಎಸ್.ಭೋಸರಾಜು, ಎ.ಎಸ್.ಪೊನ್ನಣ್ಣ ಅವರು ಭೇಟಿ ನೀಡಿ ಸಂತ್ರಸ್ತರ ಅಹವಾಲು ಆಲಿಸಿದರು. ಕರಡಿಗೋಡು ನದಿ ದಡದಲ್ಲಿ ಸುಮಾರು 70ಕ್ಕೂ ಹೆಚ್ಚು ಕುಟುಂಬಗಳು ಇದ್ದು, ಜೀವನ ನಡೆಸುವುದು ಕಷ್ಟವಾಗಿದೆ ಎಂದು ಅಳಲು ತೋಡಿಕೊಂಡರು. ಕಾಳಜಿ ಕೇಂದ್ರದಲ್ಲಿರುವ ಸಂತ್ರಸ್ತರಿಗೆ ಧೈರ್ಯ ತುಂಬಿದ ಸಚಿವರು ಸದ್ಯದಲ್ಲೇ ಶಾಶ್ವತ ಪರಿಹಾರ ಒದಗಿಸಲಾಗುವುದು ಎಂದು ಸಚಿವರು ತಿಳಿಸಿದರು.

ಮಾಲ್ದಾರೆ ವ್ಯಾಪ್ತಿಯಲ್ಲಿ ಸಂತ್ರಸ್ತರಿಗಾಗಿ 10 ಎಕರೆ ಜಾಗ ಗುರುತು ಮಾಡಲಾಗಿದ್ದು, ಈ ಸಂಬಂಧ ಆದಷ್ಟು ಶೀಘ್ರ ಸೂಕ್ತ ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವರು ಹೇಳಿದರು.

ಜಿಲ್ಲಾಧಿಕಾರಿ ವೆಂಕಟ್ ರಾಜಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್, ಜಿ.ಪಂ.ಸಿಇಓ ಆನಂದ್ ಪ್ರಕಾಶ್ ಮೀನಾ, ತಹಶೀಲ್ದಾರ್ ರಾಮಚಂದ್ರ ಗ್ಯಾರಂಟಿ ಯೋಜನೆಗಳ ಜಿಲ್ಲಾ ಅನುಷ್ಠಾನ ಸಮಿತಿ ಅಧ್ಯಕ್ಷರಾದ ಧರ್ಮಜ ಉತ್ತಪ್ಪ ಇತರರು ಇದ್ದರು.

# ಜಿಲ್ಲೆಯಲ್ಲಿ ತಗ್ಗಿದ ಮಳೆ, ಸಹಜ ಸ್ಥಿತಿಗೆ ಜನ ಜೀವನ

**ಇಳಿಯದ ನೀರಿನ ಮಟ್ಟ, ಮುಳುಗಿದ ಸಂಪರ್ಕ ರಸ್ತೆಗಳು**

ಮಡಿಕೇರಿ,ಜು.20– ಕೊಡಗು ಜಿಲ್ಲೆಯಲ್ಲಿ ಮಳೆಯ ಪ್ರಮಾಣ ಇಳಿಮುಖವಾಗಿದ್ದು, ಜನ ಜೀವನ ಸಹಜ ಸ್ಥಿತಿಗೆ ಮರಳುತ್ತಿದೆ. ಭಾರಿ ಮಳೆಯಿಂದ ನದಿ ತೊರೆಗಳು ಉಕ್ಕಿ ಹರಿದ ಪರಿಣಾಮ ಹಲವು ಕಡೆಗಳಲ್ಲಿ ಪ್ರವಾಹ ಏರ್ಪಟ್ಟಿದ್ದು, ನೀರಿನ ಮಟ್ಟದಲ್ಲಿ ಇಳಿಕೆಯಾಗಿಲ್ಲ.

ನದಿ ತಟದ ತೋಟಗಳು, ಭತ್ತದ ಗದ್ದೆಗಳು ಜಲಾವೃತವಾದ ಸ್ಥಿತಿಯಲ್ಲಿದ್ದು, ಕೃಷಿ ಫಸಲು ಕೊಳೆಯುವ ಆತಂಕ ಎದುರಾಗಿದೆ. ಇನ್ನು ಚೇರಂಬಾಣೆ ಸಮೀಪ ದೋಣಿ ಕಡುವು, ಚೆರಿಯಪರಂಬು, ಬೊಳಿಬಾಣೆ, ಕರಡಿಗೋಡು ಮತ್ತಿತರ ಕಡೆಗಳಲ್ಲಿ ಪ್ರವಾಹದ ನೀರಿನಲ್ಲಿ ಇಳಿಕೆಯಾಗಿಲ್ಲ. ಈ ಗ್ರಾಮಗಳಲ್ಲಿ ಸಂಪರ್ಕ ರಸ್ತೆಗಳು ಮುಳುಗಿದ ಸ್ಥಿಯಲ್ಲಿದ್ದು, ಮಳೆ ಮತ್ತಷ್ಟು ಬಿಡುವು ನೀಡಿದಲ್ಲಿ ಪೂರ್ಣ ಪ್ರಮಾಣದಲ್ಲಿ ಪ್ರವಾಹ ಇಳಿಕೆ ಕಾಣಲಿದೆ.

ಜಿಲ್ಲೆಯಲ್ಲಿ ಮಳೆ ಇಳಿಕೆಯಾದರು ಕೂಡ ವಿವಿಧೆಡೆ ಮಳೆ ಹಾನಿ ಪ್ರಕರಣಗಳು ವರದಿಯಾಗಿದೆ. ಕಳೆದ 24 ಗಂಟೆಗಳ ಅವಧಿಯಲ್ಲಿ ಗಾಳಿ ಮಳೆಗೆ 5 ಮನೆಗಳಿಗೆ ಭಾಗಶಃ ಮತ್ತು 8 ಮನೆಗಳಿಗೆ ಅಲ್ಪ ಪ್ರಮಾಣದ ಹಾನಿಯಾಗಿದೆ. ಶೀತ ವಾತಾವರಣ ಮತ್ತಿತರ ಕಾರಣಗಳಿಂದ 2 ಜಾನುವಾರುಗಳು ಜೀವ ಕಳೆದುಕೊಂಡಿವೆ. ಇನ್ನು ಜಿಲ್ಲೆಯ ವಿವಿಧ ಕಡೆಗಳಲ್ಲಿ ಒಟ್ಟು 84 ವಿದ್ಯುತ್ ಕಂಬಗಳು ಮುರಿದು ಬಿದ್ದಿದ್ದು, ಚೆಸ್ಕಾಂಗೆ 8.40 ಲಕ್ಷ ರೂ. ನಷ್ಟ ಉಂಟಾಗಿದೆ ಎಂದು ಜಿಲ್ಲಾ ವಿಪತ್ತು ನಿರ್ವಹಣಾ ಘಟಕ ಮಾಹಿತಿ ನೀಡಿದೆ.

**ಹಾರಂಗಿ ಜಲಾಶಯ ಮಟ್ಟ:** ಹಾರಂಗಿ ಜಲಾಶಯಕ್ಕೆ 16,560 ಕ್ಯುಸೆಕ್ ಪ್ರಮಾಣದ ನೀರಿನ ಒಳಹರಿವು ದಾಖಲಾಗಿದ್ದು, ನದಿಗೆ 17,291 ಕ್ಯುಸೆಕ್‌ನಷ್ಟು ನೀರನ್ನು ಹರಿಸಲಾಗುತ್ತಿದೆ ಜಲಾಶಯದ ಒಟ್ಟು ನೀರಿನ ಸಂಗ್ರಹ ಸಾಮರ್ಥ್ಯ 2859 ಅಡಿಗಳಾಗಿದ್ದು, ಶನಿವಾರ ಜಲಾಶಯದಲ್ಲಿ 2853.75 ಅಡಿಗಳಷ್ಟು ನೀರಿನ ಸಂಗ್ರಹವಿದೆ. ಇದೀಗ ಮಳೆ ಕಡಿಮೆಯಾಗಿರುವ ಹಿನ್ನೆಲೆಯಲ್ಲಿ ಜಲಾಶಯಕ್ಕೆ ಹರಿದು ಬರುತ್ತಿರುವ ನೀರಿನ ಒಳ ಹರಿವಿನಲ್ಲಿಯೂ ಕುಂಠಿತವಾಗುವ ಎಲ್ಲಾ ಲಕ್ಷಣಗಳು ಕಂಡು ಬರುತ್ತಿದೆ.

## ದ್ವೀಪವಾದ ಪಾಲೂರು ಶ್ರೀ ಹರಿಶ್ಚಂದ್ರ ದೇವಾಲಯ

ನಾಪೋಕ್ಲು ಜು.20– ಸಮೀಪದ ಇತಿಹಾಸ ಪ್ರಸಿದ್ಧ ಪಾಲೂರು ಶ್ರೀ ಹರಿಶ್ಚಂದ್ರ ದೇವಾಲಯ ಕಾವೇರಿ ನದಿ ಪ್ರವಾಹದಿಂದಾಗಿ ಸಂಪರ್ಕ ಕಡಿತಗೊಂಡು ದ್ವೀಪವಾಗಿದೆ.

ಕಳೆದ ಹಲವು ದಿನಗಳಿಂದ ಕಾವೇರಿ ಪ್ರವಾಹ ದೇವಾಲಯದ ಸುತ್ತಲೂ ಆವರಿಸಿಕೊಂಡಿದ್ದು, ಸಂಪರ್ಕ ಇಲ್ಲವಾಗಿ ಜಲದಿಗ್ಬಂಧನವಾಗಿದೆ ಇದೀಗ ಸುಮಾರು ಒಂದು ಫರ್ಲಾಂಗ್ ದೂರದವರೆಗೆ ಕಾವೇರಿ ಪ್ರವಾಹದ ನೀರು ನಿಂತಿದ್ದು ದಿನನಿತ್ಯದ ಪೂಜೆ ಮಾಡಲು ಅರ್ಚಕರಿಗೆ ದೇವಾಲಯಕ್ಕೆ ತೆರಳಲು ಸಾಧ್ಯವಾಗದೆ ಅನಿವಾರ್ಯ ಪರಿಸ್ಥಿತಿಯಿಂದಾಗಿ ದಿನ ನಿತ್ಯದ ಪೂಜೆ ಸ್ಥಗಿತಗೊಂಡಿದೆ.

# ಶ್ರೀ ಚಾಮರಾಜೇಶ್ವರಸ್ವಾಮಿಯ ವೈಭವದ ರಥೋತ್ಸವ

**ಸಾವಿರಾರು ಭಕ್ತರು ಭಾಗಿ, ತೇರಿಗೆ ಹಣ್ಣು-ಜವನ, ನಾಣ್ಯ ಎಸೆದು ಹರ್ಷೋದ್ಗಾರ**

ಚಾಮರಾಜನಗರ, ಜು.20– ನಗರದಲ್ಲಿ ಶನಿವಾರ ಶ್ರೀ ಚಾಮರಾಜೇಶ್ವರಸ್ವಾಮಿ ರಥೋತ್ಸವವು ಸಾವಿರಾರು ಭಕ್ತರ ಹರ್ಷೋದ್ಗಾರಗಳೊಂದಿಗೆ ನಡೆಯಿತು.

ಮಧ್ಯಾಹ್ನ 12.07 ಗಂಟೆಯ ಶುಭ ಲಗ್ನದಲ್ಲಿ ಶ್ರೀ ಚಾಮರಾಜೇಶ್ವರ ಸ್ವಾಮಿಯ ಉತ್ಸವ ಮೂರ್ತಿಯನ್ನು ತಂದು ರಥ ಸುತ್ತಲು ಪ್ರದಕ್ಷಿಣೆ ಹಾಕಿ ನಂತರ 12.15ರ ಸುಮಾರಿನಲ್ಲಿ ರಥದಲ್ಲಿ ಕೆಂಪನಂಜಮ್ಮನವರ ಸಮೇತ ಶ್ರೀ ಚಾಮರಾಜೇಶ್ವರಸ್ವಾಮಿ ಉತ್ಸವ ಮೂರ್ತಿಯನ್ನು ಕೂರಿಸಲಾಯಿತು. ಈ ವೇಳೆ ರಥದ ಸುತ್ತ ನೆರೆದಿದ್ದ ಭಕ್ತರು ಹಣ್ಣು–ಜವನ ಎಸೆದರು.

ನಂತರ ಸ್ವಾಮಿ ಪೂಜೆ ಸಲ್ಲಿಸಿ, 12.30ರ ಸುಮಾರಿನಲ್ಲಿ ರಥ ಎಳೆಯುವುದಕ್ಕೆ ಚಾಲನೆ ನೀಡಲಾಯಿತು. ಈ ವೇಳೆ ಸಂಸದ ಸುನೀಲ್ ಬೋಸ್, ಶಾಸಕ ಸಿ.ಪುಟ್ಟರಂಗಶೆಟ್ಟಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕವಿತಾ, ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ ಸೇರಿದಂತೆ ರಾಜಕೀಯ ಮುಖಂಡರು ಹಾಗೂ ಎಲ್ಲಾ ಕೋಮುಗಳ ಮುಖಂಡರು ರಥದಲ್ಲಿ ಪ್ರತಿಷ್ಠಾಪಿಸಲಾಗಿದ್ದ ಚಾಮರಾಜೇಶ್ವರ ಸ್ವಾಮಿಗೆ ಪೂಜೆ ಸಲ್ಲಿಸಿ, ಪ್ರಾರ್ಥಿಸಿದರು.

ಬಳಿಕ ರಥ ಮುಂದೆ ಸಾಗಲು ಆರಂಭವಾಗುತ್ತಿದ್ದಂತೆಯೇ ದೇವಸ್ಥಾನದ ಆವರಣದಲ್ಲಿ ಕಿಕ್ಕಿರಿದು ಸೇರಿದ್ದ ಭಕ್ತರು ಹಣ್ಣು ಜವನ, ನಾಣ್ಯವನ್ನು ತೇರಿಗೆ ಎಸೆದು ಹರ್ಷೋದ್ಗಾರ ಮಾಡಿದರು. ನೂರಾರು ಸಂಖ್ಯೆಯ ನವ ದಂಪತಿಗಳು ಉತ್ಸವದಲ್ಲಿ ಪಾಲ್ಗೊಂಡು, ರಥೋತ್ಸವವನ್ನು ಕಣ್ತುಂಬಿಕೊಂಡರು.

ಚಾಮರಾಜೇಶ್ವರ ಸ್ವಾಮಿಯ ರಥದ ಮುಂಭಾಗದಲ್ಲಿ ಮಹಾರಾಜರ ಉತ್ಸವ ಮೂರ್ತಿ, ಗಣಪತಿ ದೇವರು ಚಿಕ್ಕ ರಥಗಳಲ್ಲಿ ಸಾಗಿದರೆ ಹಿಂಭಾಗದಲ್ಲಿ ಕೆಂಪನಂಜಾಂಬ ಪಾರ್ವತಿ ದೇವರ ರಥ ಸಾಗಿತು.


ಚಾಮರಾಜನಗರದಲ್ಲಿ ಶ್ರೀ ಚಾಮರಾಜೇಶ್ವರಸ್ವಾಮಿ ರಥೋತ್ಸವವು ಸಾವಿರಾರು ಭಕ್ತರ ಹರ್ಷೋದ್ಗಾರಗಳೊಂದಿಗೆ ನಡೆಯಿತು.

ರಥವು ದೇವಸ್ಥಾನದ ಮುಂಭಾಗದಿಂದ ದಕ್ಷಿಣಾಭಿಮುಖವಾಗಿ ರಥದ ಬೀದಿ, ಎಸ್‌ಬಿಎಂ ರಸ್ತೆ ವೀರಭದ್ರೇಶ್ವರಸ್ವಾಮಿ ದೇವಾಲಯದ ವೃತ್ತ, ಮಾರಮ್ಮ ದೇವಸ್ಥಾನದ ರಸ್ತೆ, ಹಳೆ ತರಕಾರಿ ಮಾರುಕಟ್ಟೆ ರಸ್ತೆಯಲ್ಲಿ ಸಾಗಿ ಮತ್ತೆ ದೇವಸ್ಥಾನದ ಮುಂಭಾಗ ಮಧ್ಯಾಹ್ನ 3.45ರ ಸುಮಾರಿಗೆ ಮೂಲ ಸ್ಥಾನ ತಲುಪಿತು.

ರಥೋತ್ಸವಕ್ಕೂ ಮೊದಲು ದೇವಾಲಯದ ಒಳಾಂಗಣದಲ್ಲಿ ಚಾಮರಾಜೇಶ್ವರ ಸ್ವಾಮಿ ಉತ್ಸವ ಮೂರ್ತಿ, ಕೆಂಪನಂಜಾಂಬ–ಪಾರ್ವತಿ ದೇವರು ಹಾಗೂ ಮಹಾರಾಜರ ಉತ್ಸವ ಮೂರ್ತಿಗಳ ಉತ್ಸವ ನಡೆಯಿತು. ಭಕ್ತರು ಉತ್ಸವ ಮೂರ್ತಿಗಳನ್ನು ಹೊತ್ತುಕೊಂಡು ದೇವಾಲಯದ ಸುತ್ತ ಪ್ರದಕ್ಷಿಣೆ ಹಾಕಿದರು. ರಥೋತ್ಸವದಲ್ಲಿ ವೀರಗಾಸೆ, ಮಂಗಳವಾದ್ಯ, ಬ್ಯಾಂಡ್‌ಸೆಟ್ ಕಲಾವಿದರು ಪಾಲ್ಗೊಂಡಿದ್ದರು.

**ಆಟಿಕೆಗಳ ಭರ್ಜರಿ ವ್ಯಾಪಾರ:** ಜಾತ್ರೆಯ ಆವರಣದಲ್ಲಿ ಮಕ್ಕಳ ವಿವಿಧ ಆಟಿಕೆಗಳ ಮಾರಾಟ ಜೋರಾಗಿ ನಡೆಯಿತು. ಅಲ್ಲದೇ ಗೃಹಪಯೋಗಿ ವಸ್ತುಗಳು, ಮಹಿಳೆಯರ ಬ್ಯಾಂಗಲ್ಸ್ ಸೇರಿದಂತೆ ವಿವಿಧ ರೀತಿ ವಸ್ತುಗಳ ಮಾರಾಟ ಭರ್ಜರಿಯಾಗಿ ನಡೆಯಿತು. ಹಣ್ಣು–ಹೂ, ಪುರಿ–ಕಾರ, ಸಿಹಿ ತಿಂಡಿಗಳು, ತಂಪು ಪಾನೀಯ, ಐಸ್‌ಕ್ರೀಮ್‌ಗಳಿಗೂ ಹೆಚ್ಚಿನ ಬೇಡಿಕೆ ಕಂಡುಬಂದಿತು.

**ನವ ಜೋಡಿಗಳ ಕಲರವ:** ಶ್ರೀಚಾಮರಾಜೇಶ್ವರಸ್ವಾಮಿಯ ಜಾತ್ರೆಯಲ್ಲಿ ವಿಶೇಷ ಎಂದರೆ ಆಷಾಢ ಮಾಸದಲ್ಲಿ ಬೇರೆಯಾಗುವ ನೂತನ ದಂಪತಿಗಳು ಇಂದು ನಡೆಯುವ ರಥೋತ್ಸವಕ್ಕೆ ಆಗಮಿಸಿ ಹಣ್ಣು–ಜವನ ಎಸೆದು ತಮ್ಮ ಇಷ್ಟಾರ್ಥ ಸಿದ್ಧಿ ಪ್ರಾರ್ಥಿಸಿಕೊಳ್ಳುವುದು ವಾಡಿಕೆ. ಹೀಗಾಗಿ ರಥೋತ್ಸವದಲ್ಲಿ ನೂತನ ದಂಪತಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗಿಯಾಗಿದ್ದು, ರಥೋತ್ಸವ ಹೆಚ್ಚಿನ ಮೆರಗು ತಂದಿತು.

**ಬಿಗಿ ಬಂದೋಬಸ್ತ್:** ರಥೋತ್ಸವದ ಪ್ರಯುಕ್ತದ ಬೆಳಗ್ಗೆ 7 ಗಂಟೆಯಿಂದಲ್ಲೇ ಪೊಲೀಸರು ಕಾರ್ಯಾಚರಣೆ ನಡೆಸಿ, ರಥ ಸಾಗುವ ಮಾರ್ಗದಲ್ಲಿ ವಾಹನಗಳನ್ನು ತೆರವುಗೊಳಿಸಿ ದೇವಸ್ಥಾನಕ್ಕೆ ಬರುವ ಮಾರ್ಗವನ್ನು ಬ್ಯಾರಿಕೇಡ್ ಹಾಕಿ ಬಂದ್ ಮಾಡಿ ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಲಾಗಿತ್ತು. ಆಗಾಗ ಕಳ್ಳತನ, ಪಿಕ್‌ಪಾಕೆಟ್ ಬಗ್ಗೆ ಧ್ವನಿವರ್ಧಕಗಳ ಮೂಲಕ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಿದರು.

**ಅನ್ನ ಸಂತರ್ಪಣೆ:** ರಥ ಸಾಗುವ ಹಾದಿಯ ಹಲವೆಡೆ ವಿವಿಧ ಸಂಘ–ಸಂಸ್ಥೆ ಹಾಗೂ ಭಕ್ತರಿಂದ ಅನ್ನ ಸಂತರ್ಪಣೆ ನಡೆಯಿತು. ಬಾತ್, ಬಿಸಿಬೇಳೆ ಬಾತ್, ಚಿತ್ರಾನ್ನ, ಪಾನಕಗಳನ್ನು ವಿತರಿಸಲಾಯಿತು.

## ಮಹದೇಶ್ವರಬೆಟ್ಟದಲ್ಲಿ ಸೋಮಣ್ಣ ಹುಟ್ಟುಹಬ್ಬ ಆಚರಣೆ


ಶ್ರೀ ಮಲೆ ಮಹದೇಶ್ವರಬೆಟ್ಟದಲ್ಲಿ ಶನಿವಾರ ವಿಶೇಷ ಪೂಜೆ ಸಲ್ಲಿಸುವ ಮೂಲಕ ತಮ್ಮ ಹುಟ್ಟುಹಬ್ಬವನ್ನು ಆಚರಿಸಿಕೊಂಡ ಕೇಂದ್ರ ರೈಲ್ವೆ ಮತ್ತು ಜಲಶಕ್ತಿ ರಾಜ್ಯ ಸಚಿವರಾದ ವಿ.ಸೋಮಣ್ಣರಿಗೆ ಶುಭ ಕೋರಿ, ಅಭಿನಂದನೆ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಮಧು.ಎಸ್.ಪಿ, ಆಲನಹಳ್ಳಿ ಮಹದೇವಸ್ವಾಮಿ, ಜೀಮಾರಳ್ಳಿ ಜೈಶಂಕರ್, ಕೆ.ಎನ್.ರವಿಶಂಕರ್, ಬಿಲ್ವ ಮಹೇಶ್, ದೇವನೂರು ಪ್ರತಾಪ್, ವಿಶ್ವನಾಥ್ ಮುಡಗೂರು ಸುನಿಲ್, ಶರತ್ ಪುಟ್ಟಬುದ್ಧಿ, ಖಂಡೇಶ್ ಹಾಗೂ ಇತರರಿದ್ದರು.

## ಗುಂಡ್ಲುಪೇಟೆ ಬಳಿ ಭೀಕರ ಅಪಘಾತ: ಇಬ್ಬರ ಸಾವು

ಗುಂಡ್ಲುಪೇಟೆ, ಜು.20– ಕೆಎಸ್‌ಆರ್‌ಟಿಸಿ ಬಸ್ ಮತ್ತು ಕಾರು ನಡುವೆ ಸಂಭವಿಸಿದ ಮುಖಾಮುಖಿ ಡಿಕ್ಕಿಯಿಂದ ಇಬ್ಬರು ಸಾವನ್ನಪ್ಪಿ ಮತ್ತಿಬ್ಬರು ತೀವ್ರವಾಗಿ ಗಾಯಗೊಂಡಿರುವ ಘಟನೆ ಪಟ್ಟಣದ ಹೊರವಲಯದ ಮಿಸ್ಟಿರಾಕ್ ಹೋಟೆಲ್ ಸಮೀಪ ಶನಿವಾರ ರಾತ್ರಿ ನಡೆದಿದೆ.

ಚಾಮರಾಜನಗರ ಅಂಬೇಡ್ಕರ್ ಬಡಾವಣೆಯ ವಾಸಿಗಳಾದ ಪಿ.ಮಹೇಶ್(28) ಮತ್ತು ದರ್ಶನ್(32) ಸಾವನ್ನಪ್ಪಿದವರಾಗಿದ್ದು, ಸಚಿನ್(30) ಮತ್ತು ಕಿಟ್ಟಿ(28) ಅವರುಗಳಿಗೆ ಗಂಭೀರ ಗಾಯಗಳಾಗಿದೆ.

**ಘಟನೆ ವಿವರ:** ಪಟ್ಟಣದ ಹೊರವಲಯದಲ್ಲಿರುವ ಮಿಸ್ಟಿರಾಕ್ ಹೋಟೆಲ್ ಸಮೀಪ ಮೈಸೂರಿನಿಂದ ಬರುತ್ತಿದ್ದ ಬಸ್ (ಕೆಎ 10 ಎಫ್ 0237) ಮತ್ತು ಮೈಸೂರು ಕಡೆಗೆ ಹೋಗುತ್ತಿದ್ದ ಮಾರುತಿ ಎರ್ಟಿಕಾ ಕಾರ್ (ಕೆಎ 55, ಎನ್ 1179) ನಡುವೆ ಮುಖಾಮುಖಿ ಡಿಕ್ಕಿಯಾಗಿದೆ. ಡಿಕ್ಕಿಯ ರಭಸಕ್ಕೆ ಕಾರಿನಲ್ಲಿದ್ದ ನಾಲ್ವರು ಯುವಕರು ತೀವ್ರವಾಗಿ ಗಾಯಗೊಂಡರು.

ಪಿ.ಮಹೇಶ್‌ಮತ್ತು ದರ್ಶನ್ ಇಬ್ಬರು ತೀವ್ರಗಾಯಗೊಂಡು ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದರು. ಕಾರಿನಲ್ಲಿದ್ದ ಸಚಿನ್ ಮತ್ತು ಕಿಟ್ಟಿ ತೀವ್ರವಾಗಿ ಗಾಯಗೊಂಡಿದ್ದಾರೆ.

ವಿಷಯ ತಿಳಿದು ಸ್ಥಳಕ್ಕೆ ಎಸ್‌ಪಿ ಕವಿತಾ ಮತ್ತು ಸರ್ಕಲ್ ಇನ್ಸ್‌ಪೆಕ್ಟರ್ ಪರಶಿವಮೂರ್ತಿ ಸಬ್ ಇನ್ಸ್‌ಪೆಕ್ಟರ್ ಸಾಹೇಬಗೌಡ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಅಪಘಾತದ ಸಂಬಂಧ ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು ಬಸ್‌ಚಾಲಕ ಶಿವರಾಜುನನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಅಪಘಾತವಾದ ಸ್ಥಳಕ್ಕೆ ಆಂಬ್ಯುಲೆನ್ಸ್ ಬರುವುದು ತಡವಾಗ ಬಹುದೆಂದು ತಿಳಿಸಿದ ಪೊಲೀಸರು ತಮ್ಮ ಹೊಯ್ಸಳ ವಾಹನದಲ್ಲಿಯೇ ಗಾಯಾಳುಗಳನ್ನು ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ಸಾಗಿಸಿದರು.

# ಕೆಆರ್‌ಎಸ್‌ಗೆ ಜಿಲ್ಲಾಧಿಕಾರಿ ಡಾ.ಕುಮಾರ್ ಭೇಟಿ

**ಸಿದ್ದತೆಗಳ ಪರಿಶೀಲನೆ, ಅಧಿಕಾರಿಗಳಿಗೆ ಸೂಕ್ತ ಸಲಹೆ ನೀಡಿದ ಡಿಸಿ**

- ಆ.8ರಂದು ಸಿಎಂ ಕೆಆರ್‌ಎಸ್‌ಗೆ ಬಾಗಿನ ಸಮರ್ಪಣೆ ಸಾಧ್ಯತೆ
- ಬಲಮುರಿ, ಎಡಮುರಿ, ಪಶ್ಚಿಮ ವಾಹಿನಿಗೆ ಪ್ರವಾಸಿಗರ ಪ್ರವೇಶ ನಿಷೇಧ
- 92 ಹಳ್ಳಿಗಳಲ್ಲಿ ನೆರೆ ಪರಿಸ್ಥಿತಿ

ಶ್ರೀರಂಗಪಟ್ಟಣ, ಜು.20– ಕೆಆರ್‌ಎಸ್ ಜಲಾಶಯ ಬಹುತೇಕ ಭರ್ತಿಯಾಗಿರುವ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿ ಡಾ.ಕುಮಾರ್ ಶನಿವಾರ ಜಲಾಶಯಕ್ಕೆ ಭೇಟಿ ನೀಡಿ ಅಣೆಕಟ್ಟೆ ವೀಕ್ಷಿಸಿ ಅಧಿಕಾರಿಗಳಿಂದ ಮಾಹಿತಿ ಪಡೆದರು.

ಒಳಹರಿವು ಹಾಗೂ ಹೊರಹರಿವಿನ ಬಗ್ಗೆ ಕಾವೇರಿ ನೀರಾವರಿ ನಿಗಮ ಅಧಿಕಾರಿಗಳಿಂದ ಮಾಹಿತಿ ಪಡೆದ ಅವರು, ಯಾವುದೇ ಕ್ಷಣದಲ್ಲಾದರೂ ಹೊರಹರಿವಿನ ಪ್ರಮಾಣ ಹೆಚ್ಚಳವಾಗುವ ಸಾಧ್ಯತೆ ಇದೆ. ಹಾಗಾಗಿ ಕೆಆರ್‌ಎಸ್ ಸೇರಿದಂತೆ ನೆರೆ ಆತಂಕ ಸ್ಥಳಗಳಿಗೆ ಭೇಟಿ ನೀಡಿ ಮುಂಜಾಗ್ರತಾ ಕ್ರಮಗಳ ಬಗ್ಗೆ ಅಧಿಕಾರಿಗಳಿಗೆ ಸೂಚನೆ ನೀಡಿ ಪ್ರವಾಹ ಪರಿಸ್ಥಿತಿ ಎದುರಿಸಲು ಜಿಲ್ಲಾಡಳಿತದಿಂದ ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಿದರು.

ಜಿಲ್ಲಾಧಿಕಾರಿಗಳೊಡನೆ ಜಿಪಂ ಸಿಇಒ ಶೇಖ್ ತನ್ವೀರ್ ಆಸಿಫ್, ಜಿಲ್ಲಾ ಪೊಲೀಸ್ ಅಧೀಕ್ಷಕ ಮಲ್ಲಿಕಾರ್ಜುನ ಬಾಲದಂಡಿ, ಅಪರ ಪೊಲೀಸ್ ಅಧೀಕ್ಷಕ ಸಿ.ಇ.ತಿಮ್ಮಯ್ಯ, ಕಾವೇರಿ ನೀರಾವರಿ ನಿಗಮದ ಮುಖ್ಯ ಇಂಜಿನಿಯರ್ ಜಯಂತ್, ಎಇಇ ಕಿಶೋರ್, ತಹಸಿಲ್ದಾರ್ ಪರಶುರಾಮ್ ಸತ್ತಿಗೇರಿ, ತಾ.ಪಂ ಇಒ ವೇಣು ಸಾಥ್ ನೀಡಿದರು.

ಶ್ರೀರಂಗಪಟ್ಟಣ ತಾಲೂಕಿನ ಬೆಳಗೊಳ, ಪಶ್ಚಿಮವಾಹಿನಿ, ಬಲಮುರಿ, ಎಡಮುರಿ, ಕಾರೇಕುರಕ್ಕೆ ಭೇಟಿ ನೀಡಿ ಅಧಿಕಾರಿಗಳು ಕೈಗೊಂಡಿರುವ ಸಿದ್ಧತೆಗಳ ಬಗ್ಗೆ ಪರಿಶೀಲಿಸಿದರು.


ಕೆಆರ್‌ಎಸ್‌ಗೆ ಭೇಟಿ ನೀಡಿ ಪರಿಶೀಲಿಸುತ್ತಿರುವ ಜಿಲ್ಲಾಧಿಕಾರಿ ಡಾ.ಕುಮಾರ್.

ಶ್ರೀರಂಗಪಟ್ಟಣ ತಾಲೂಕಿನ ಬೆಳಗೊಳದ ಬಳಿಯಿರುವ ಬಲಮುರಿ ಮತ್ತು ಎಡಮುರಿಯಲ್ಲಿ ಹೆಚ್ಚು ನೀರು ಹರಿಯುತ್ತಿರುವುದರಿಂದ ಪ್ರವಾಸಿಗರು ನೀರಿಗೆ ಇಳಿಯದಂತೆ ಮತ್ತು ಅದರ ಹತ್ತಿರ ತೆರಳದಂತೆ ಬ್ಯಾರಿಕೇಡ್ ಹಾಕಿ ಸೂಚನಾ ಫಲಕಗಳನ್ನು ಜಿಲ್ಲಾಧಿಕಾರಿ ಡಾ.ಕುಮಾರ್ ಹಾಗೂ ಜಿಪಂ ಸಿಇಒ ಶೇಖ್ ತನ್ವೀರ್ ಆಸಿಫ್ ಅವರು ಹಾಕಿಸಿದರು. ಅಲ್ಲದೆ, ಪಶ್ಚಿಮವಾಹಿನಿಗೆ ಆಗಮಿಸಿ ಸಾರ್ವಜನಿಕರು ನದಿಗೆ ಇಳಿಯದಂತೆ ಎಚ್ಚರಿಕೆ ನೀಡಿದರು.

ನಂತರ ಜಿಲ್ಲಾಧಿಕಾರಿ ಡಾ.ಕುಮಾರ್ ಮಾತನಾಡಿ, ಮುಂದಿನ 5 ರಿಂದ 7 ದಿನಗಳಲ್ಲಿ ಹೆಚ್ಚು ಮಳೆಯಾಗುವ ಸಂಭವವಿದ್ದು, ಕೆಆರ್‌ಎಸ್ ಅಣೆಕಟ್ಟೆ ಗರಿಷ್ಠ 124 ಅಡಿ ತುಂಬುವ ಭರವಸೆ ಇದೆ. ಈ ಹಿನ್ನೆಲೆಯಲ್ಲಿ ಕಾವೇರಿ ಮಾತೆಗೆ ಬಾಗಿನ ಅರ್ಪಿಸುವ ಬಗ್ಗೆ ಸರ್ಕಾರ ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಗಮನಕ್ಕೆ ತರಲಾಗಿದ್ದು, ಮುಂದಿನ ದಿನಗಳಲ್ಲಿ ದಿನಾಂಕ ನಿಗದಿಪಡಿಸಲಾಗುವುದು ಎಂದರಲ್ಲದೆ ಆ.8ರಂದು ಬಾಗಿನ ಅರ್ಪಿಸುವ ಸಾಧ್ಯತೆ ಇದೆ ಎಂದರು.

ಕಳೆದ 10 ದಿನಗಳಿಂದ ಕೆಆರ್‌ಎಸ್‌ಗೆ ಒಳಹರಿವು ಹೆಚ್ಚಾಗಿದೆ. 60224 ಕ್ಯೂಸೆಕ್ ನೀರು ಬರುತ್ತಿದೆ. ಶನಿವಾರ ಅಣೆಕಟ್ಟೆ 121 ಅಡಿ ದಾಟಿದ್ದು, 124 ಅಡಿ ದಾಟಿದ ನಂತರ ಹೆಚ್ಚು ನೀರನ್ನು ಬಿಟ್ಟರೆ ನದಿ ಪಾತ್ರದಲ್ಲಿರುವ ಜನ–ಜಾನುವಾರುಗಳನ್ನು ತೆರವು ಮಾಡಲಾಗುತ್ತದೆ. ಅಣೆಕಟ್ಟೆಯಿಂದ ಒಂದು ಲಕ್ಷಕ್ಕೂ ಹೆಚ್ಚು ನೀರನ್ನು ಬಿಟ್ಟರೆ ಕೆಲವು ಗ್ರಾಮಗಳು ಮತ್ತು ಕೆಲ ಕೃಷಿ ಪ್ರದೇಶಗಳಿಗೆ ಹಾನಿಯಾಗಲಿದೆ. ಒಟ್ಟಾರೆ 92 ಹಳ್ಳಿಗಳಿಗೆ ನೆರೆ ಪರಿಸ್ಥಿತಿ ಉಂಟಾಗಬಹುದು. ಈ ಹಿನ್ನೆಲೆಯಲ್ಲಿ ಗ್ರಾಪಂ ಸೇರಿದಂತೆ ಎಲ್ಲ ಅಧಿಕಾರಿಗಳೊಂದಿಗೆ ಸಭೆ ನಡೆಸಿದ್ದು, ಟಾಸ್ಕ್ ಫೋರ್ಸ್ ರಚಿಸಲಾಗಿದೆ ಎಂದು ಹೇಳಿದರು.

ಕೊಡಗು ಹಾಗೂ ಹಾಸನ ಜಿಲ್ಲೆಗಳಲ್ಲಿ ಹೆಚ್ಚು ಮಳೆಯಾಗುತ್ತಿರುವುದರಿಂದ ಹಾರಂಗಿ ಮತ್ತು ಹೇಮಾವತಿ ಅಣೆಕಟ್ಟೆಗೆ ಹೆಚ್ಚು ನೀರು ಹರಿದುಬರುತ್ತಿದ್ದು, ಎರಡೂ ಅಣೆಕಟ್ಟೆಗಳಿಂದ ನದಿಗೆ ನೀರು ಹರಿಯಬಿಟ್ಟಿರುವುದರಿಂದ ಕೆಆರ್‌ಎಸ್ ಅಣೆಕಟ್ಟೆಗೆ ಹೆಚ್ಚು ನೀರು ಹರಿದುಬರುತ್ತಿದೆ. ಇದರಿಂದಾಗಿ ಶನಿವಾರ 121 ಅಡಿ ತಲುಪಿದ ಹಿನ್ನೆಲೆಯಲ್ಲಿ ಅಣೆಕಟ್ಟು ದೃಷ್ಟಿಯಿಂದ 15 ಸಾವಿರ ಕ್ಯೂಸೆಕ್ ನೀರನ್ನು ನದಿಗೆ ಬಿಡಲಾಗಿದೆ.

## ಪಾತಮ್ಮ ನಿಧನ



**ಚಾಮರಾಜನಗರ:** ನಗರದ ರಾಮಸಮುದ್ರ ಬಡಾವಣೆಯ ಹಳ್ಳದ ಬೀದಿಯ ನಿವಾಸಿ ಪಾತಮ್ಮ (75) ಶನಿವಾರ ಸಂಜೆ ನಿಧನರಾದರು. ಮೃತರು ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು ವರ್ಗವನ್ನು ಅಗಲಿದ್ದಾರೆ. ಭಾನುವಾರ ಬೆಳಿಗ್ಗೆ ರಾಮ ಸಮುದ್ರದ ವೀರಶೈವ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

# ಇಂದು ಕೆ.ಆರ್.ಪೇಟೆಯಲ್ಲಿ ಕೇಂದ್ರ ಸಚಿವ ಕುಮಾರಸ್ವಾಮಿಗೆ ಅಭಿನಂದನೆ

**40 ರಿಂದ 50 ಸಾವಿರ ಜನರು ಸೇರುವ ನಿರೀಕ್ಷೆ**



ಕೆ.ಆರ್.ಪೇಟೆ,ಜು.20–ಮಂಡ್ಯ ಲೋಕಸಭಾ ಸದಸ್ಯರು ಹಾಗೂ ಕೇಂದ್ರದ ಉಕ್ಕು ಹಾಗೂ ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರಿಗೆ ನಾಳೆ (ಜು.21) ಕೆ.ಆರ್.ಪೇಟೆಯಲ್ಲಿ ಅಭಿನಂದನಾ ಸಮಾರಂಭ ಏರ್ಪಡಿಸಲಾಗಿದ್ದು, ಶಾಸಕ ಹೆಚ್.ಟಿ.ಮಂಜು ವೇದಿಕೆಯನ್ನು ವೀಕ್ಷಿಸಿದರು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಹೆಚ್.ಟಿ.ಮಂಜು ನಾಳೆ (ಭಾನುವಾರ) ಬೆಳಿಗ್ಗೆ 11 ಗಂಟೆಗೆ ಪಟ್ಟಣದ ಪುರಸಭಾ ಮೈದಾನದಲ್ಲಿ ಜೆಡಿಎಸ್ ಮತ್ತು ಬಿಜೆಪಿ ಪಕ್ಷದ ವತಿಯಿಂದ ಆಯೋಜಿಸಲಾಗಿರುವ ಬೃಹತ್ ಅಭಿನಂದನಾ ಸಮಾರಂಭದಲ್ಲಿ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರನ್ನು ಅದ್ಧೂರಿಯಾಗಿ ಸ್ವಾಗತಿಸಲು ವೇದಿಕೆ ಸಿದ್ಧಪಡಿಸಲಾಗಿದೆ.

ಕಾರ್ಯಕ್ರಮಕ್ಕೆ 40 ರಿಂದ ಸುಮಾರು 50 ಸಾವಿರ ಜನರು ಸೇರುವ ನಿರೀಕ್ಷೆ ಇದೆ. ಕುಮಾರಣ್ಣ ಸಂಸದರಾದ ನಂತರ ಹಾಗೂ ಪ್ರಧಾನಿ ನರೇಂದ್ರ ಮೋದಿಜಿ ಅವರ ಸಂಪುಟದಲ್ಲಿ ಸಚಿವರಾದ ನಂತರ ನಮ್ಮ ತಾಲೂಕಿಗೆ ಆಗಮಿಸುತ್ತಿದ್ದಾರೆ. ಕುಮಾರಣ್ಣ ಅವರನ್ನು ಪಟ್ಟಣದ ಹೊರವಲಯದಲ್ಲಿರುವ ಹೆಮ್ಮನಹಳ್ಳಿ, ಹೊನ್ನೇನಹಳ್ಳಿ ಗ್ರಾಮದ ಗೇಟ್ ಬಳಿ ಅದ್ದೂರಿಯಾಗಿ ಬರಮಾಡಿಕೊಂಡು ತೆರೆದ ವಾಹನದಲ್ಲಿ ಮೆರವಣಿಗೆ ಮೂಲಕ ಕಾರ್ಯಕ್ರಮ ಆಯೋಜಿಸಲಾಗಿರುವ ಪುರಸಭಾ ಮೈದಾನಕ್ಕೆ ಕರೆದುಕೊಂಡು ಬರಲಾಗುವುದು. ಸಮಾರಂಭಕ್ಕೆ ಆಗಮಿಸುವ ಎಲ್ಲರಿಗೂ ಮಾಂಸಾಹಾರಿ ಹಾಗೂ ಸಸ್ಯಹಾರಿ ಊಟದ ವ್ಯವಸ್ಥೆಯನ್ನು ಮಾಡಲಾಗಿದೆ. ಮಳೆಯ ಕಾರಣ ಇಡೀ ಸ್ಟೇಜ್ ಜರ್ಮನ್ ಟೆಂಟ್‌ನಲ್ಲಿ ನಿರ್ಮಿಸಲಾಗಿದೆ. ಎಲ್ಲರಿಗೂ ಕುಳಿತುಕೊಂಡು ಊಟ ಮಾಡಲು ವಿಶಾಲ ವ್ಯವಸ್ಥೆ ಮಾಡಲಾಗಿದೆ.

ಜೆಡಿಎಸ್ ಮತ್ತು ಬಿಜೆಪಿ ಮೈತ್ರಿ ಪಕ್ಷದ ಮುಖಂಡರು, ಅಕಾರ್ಯಕರ್ತರು, ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸುವಂತೆ ಶಾಸಕರು ಮನವಿ ಮಾಡಿದ್ದಾರೆ.

## ಹೇಮಾವತಿಯಿಂದ ನೀರು ಬಿಡುಗಡೆ..


ಗೊರೂರಿನ ಹೇಮಾವತಿ ಜಲಾಶಯದಿಂದ 30 ಸಾವಿರ ಕ್ಯೂಸೆಕ್ ನೀರು ಬಿಡುಗಡೆ ಮಾಡಿರುವ ಹಿನ್ನೆಲೆಯಲ್ಲಿ ತಾಲೂಕಿನ ನದಿ ಪಾತ್ರದಲ್ಲಿ ನೀರು ಅಪಾಯ ಮಟ್ಟ ಮೀರಿ ಹರಿಯುತ್ತಿದ್ದು, ನದಿಗೆ ಇಳಿಯದಂತೆ ರೈತರು, ಪ್ರವಾಸಿಗರಿಗೆ ಮನವಿ ಮಾಡಲಾಗಿದೆ.

# ವಾರದ ಮಿತ್ರ
## ಸಾಪ್ತಾಹಿಕ ಪುರವಣಿ

ಮೈಸೂರು ಮಿತ್ರ

ಭಾನುವಾರ 21–7–2024




ಜುಲೈ 21, ಗುರುಪೂರ್ಣಿಮೆ ತನ್ನಿಮಿತ್ತ ಈ ಲೇಖನ






ಬನ್ನೂರು ಕೆ. ರಾಜು
ಸಾಹಿತಿ, ಪತ್ರಕರ್ತ
ಮೊ: 94815 33167


# ಗುರುವೇ ನಮಃ

“‘ಗುರುದೇವೋಭವ’ ಎಂದು ಗುರುವನ್ನು ಗುರುದೇವರಾಗಿ ದೈವಸ್ವರೂಪದಲ್ಲಿಟ್ಟು ನಮ್ಮ ಸಂಸ್ಕೃತಿಯಲ್ಲಿ ಕರೆಯಲಾಗುತ್ತದೆ. ಭಗವಂತ ಅಂಥ ನಾವು ಹೆಸರಿಸಿ ಪೂಜಿಸುವ ವಿಶ್ವಚೈತನ್ಯ ಸಾಮಾನ್ಯ ಮನಸ್ಸಿಗೆ ಗೂಢ, ಅಗೋಚರ. ಆದರೆ ಗುರುದೇವ ಕಣ್ಣಿಗೆ ಕಾಣುವ ಸಾಕ್ಷಾತ್ ಪರಬ್ರಹ್ಮದೇವ. ಆದ್ದರಿಂದಲೇ ಆಚಾರ್ಯ ಓಶೋ ಗುರುವನ್ನು ‘ಭಗವಂತನ ವಿಳಾಸ’ ಎಂದಿದ್ದಾರೆ.

ಮಹರ್ಷಿ ವ್ಯಾಸರು ಅಥವಾ ವೇದವ್ಯಾಸರು ಅರ್ಥಾತ್ ಕೃಷ್ಣ ದ್ವೈಪಾಯನರು ಇಡೀ ಭರತ ಖಂಡದ ಸಂತ ಪರಂಪರೆ ಪ್ರಜ್ಞೆಯ ಪ್ರತಿನಿಧಿಗಳು. ನಮ್ಮ ನೆಲದ ಪ್ರಾಚೀನ ಸಾಹಿತ್ಯದಲ್ಲಿನ ಪ್ರಮುಖರು. ಬ್ರಹ್ಮನ ಜ್ಞಾನೋನ್ನತೆಯ ಸಾರ್ಥಕತೆಯನ್ನು ಅರಿತ ಬ್ರಹ್ಮ ಜ್ಞಾನಿಯಾದ ಇವರನ್ನು ಬ್ರಹ್ಮರ್ಷಿ ಎಂದೂ, ಇವರು ದ್ವೀಪವೊಂದರಲ್ಲಿ ಜನಿಸಿದ್ದರಿಂದ ದ್ವೈಪಾಯನ ಎಂಬುದಾಗಿಯೂ ಹೆಸರುಂಟು. ಪುರಾಣ, ಪ್ರಾಚೀನ, ಚಾರಿತ್ರಿಕ ಅನಿರ್ವಾಚೀನದಿಂದಲೂ ಆಯಾಯ ಕಾಲಘಟ್ಟಗಳಲ್ಲಿ ವರ್ಗಾಯಿಸಿಕೊಂಡು ಬಂದ ಜ್ಞಾನ ಕೋಶ ನಮ್ಮದು. ಇಂಥ ಜ್ಞಾನ ಪರಂಪರೆಯ ತಾಯಿ ಬೇರುಗಳೆಂದರೆ ವೇದಗಳು. ವೇದಗಳೆಂದರೆ ಬ್ರಹ್ಮಜ್ಞಾನ, ಮಹಾಜ್ಞಾನ. ಇಂತಹ ವೇದ ಜ್ಞಾನ ಪರಂಪರೆಯ ಸಂಪತ್ತನ್ನು ನಾಲ್ಕು ವೇದಗಳಾಗಿ ವಿಂಗಡಿಸಿ ಇದಕ್ಕೊಂದು ಸ್ಪಷ್ಟತೆ ಕೊಟ್ಟ ಕೃಷ್ಣ ದ್ವೈಪಾಯನರು ಭರತ ಭೂಮಿಯಲ್ಲಿ ಮಹರ್ಷಿ ವೇದ ವ್ಯಾಸರೆಂದೇ ಹೆಸರಾದರು. ಭವ್ಯ ಭಾರತದ ದಿವ್ಯ ವೇದ ಜ್ಞಾನಿಯಾಗಿ ಶಾಶ್ವತವಾದರು. ಜ್ಞಾನದ ಸಂಕೇತವಾದ ವೇದವ್ಯಾಸರ ಪರಂಪರೆಯ ಜೀವಂತಿಕೆಯಾಗಿ ಇಂದಿಗೂ ಆಷಾಢ ಮಾಸದ ಪೌರ್ಣಮಿಯನ್ನು ವ್ಯಾಸಪೂರ್ಣಮಿಯಾಗಿ, ಗುರುಪೂರ್ಣಮಿಯಾಗಿ ಆಚರಿಸುತ್ತಿದ್ದೇವೆ. ಸಕಲ ಗುರು ಪರಂಪರೆಗೆ ಗೌರವ ಸಲ್ಲಿಸುತ್ತಿದ್ದೇವೆ.

ಪ್ರಾಚೀನ ಕಾಲದಿಂದಲೂ ನಮ್ಮಲ್ಲಿ ಗುರುಪೂರ್ಣಿಮೆಯ ಆಚರಣೆ ಭಾರತದ ಸತ್ಸಂಪ್ರದಾಯದಂತೆ ಸನ್ಮಾರ್ಗದಲ್ಲಿ ಪರಂಪರಾನುಗತವಾಗಿ ನಡೆದು ಬರುತ್ತಿದೆ. ಗುರುಪೂಜೆಯ ಹಬ್ಬವೇ ‘ಗುರುಪೂರ್ಣಿಮೆ’. ಮನುಷ್ಯನ ಮನಸ್ಸಿನಲ್ಲಿರುವ ಎಲ್ಲಾ ರೀತಿಯ ಕೆಟ್ಟತನಗಳ ಕತ್ತಲೆಯನ್ನು ಕಳೆದು ಬೆಳಕನ್ನು ನೀಡುವ ಸದ್ಗುರು ಮಹಾತ್ಮರನ್ನು ಸ್ಮರಿಸಿ ಗೌರವಿಸುವ ಪೂಜ್ಯ ಪುಣ್ಯದಿನವಿದು. ಇದು ಆಷಾಢ ಮಾಸದಲ್ಲಿ ವ್ಯಾಸ ಮಹರ್ಷಿಗಳ ಜನ್ಮೋತ್ಸವದ ಹೆಸರಿನಲ್ಲಿ ನಡೆಯುವುದರಿಂದ ಇದನ್ನು ‘ವ್ಯಾಸ ಪೂರ್ಣಿಮೆ’ ಎಂದೂ ಕರೆಯಲಾಗುವುದು. ಗುರು ಇಲ್ಲದೆ ಗುರಿ ಸಾಧನೆ ಅಷ್ಟು ಸುಲಭವಲ್ಲ. ಪ್ರತಿಯೊಂದಕ್ಕೂ ಗುರು ಇರಲೇಬೇಕು. ಹಾಗಾಗಿ ‘ಗುರು ಏನ್ ಮಹಾ’ ಎನ್ನದೆ ‘ಗುರುವೇ ನಮಃ’ ಎಂದು ಗುರುವಿನ ಮಹತ್ವ ಅರಿತು ಗುರು ಪರಂಪರೆಗಿಂದು ನಮಿಸುವುದು ಶಿಷ್ಯಪರಂಪರೆಯ ಕರ್ತವ್ಯ ಇದೇ ಗುರುಪೂಜೆಯ ಆಶಯ.

ಭಾರತೀಯ ಸಂಸ್ಕೃತಿಯಲ್ಲಿ ಗುರು–ಶಿಷ್ಯರ ಸಂಬಂಧ ಮಹೋನ್ನತವಾದುದು. ಅದರ ಗಾಢತೆ ಊಹಾತೀತ! ಗುರು–ಶಿಷ್ಯ ಪ್ರೀತಿಯ ಔನ್ನತ್ಯವನ್ನು, ಸಾಧನೆಯ ಉತ್ತುಂಗವನ್ನು, ಸಾರ್ಥಕತೆಯ ಬೆಳಕನ್ನು ಜಗತ್ತಿಗೆ ಚೆಲ್ಲಿ ಹೋಗಿರುವ ಅನೇಕ ಶ್ರೇಷ್ಠಾತಿಶ್ರೇಷ್ಠ ಗುರು–ಶಿಷ್ಯ ಪರಂಪರೆಯೇ ನಮ್ಮ ಸಂಸ್ಕೃತಿಯ ಬೇರಿನಲ್ಲಿದೆ. ಪರಮಹಂಸ–ವಿವೇಕರ ಪವಿತ್ರ ಗುರು–ಶಿಷ್ಯ ಬಾಂಧವ್ಯದ ಬೆಳಕೊಂದೇ ಸಾಕು ಇವತ್ತಿಗೂ ಭಾರತವನ್ನು ಜ್ಞಾನ ಮಾರ್ಗದಲ್ಲಿ ಬೆಳಗುತ್ತಿದೆ. ತಂದೆ–ತಾಯಿಗಿಂತಲೂ ಗುರುವಿನ ಸ್ಥಾನ ಹಿರಿದು. ಅದನ್ನೇ ಸರ್ವಜ್ಞ– ‘ತಂದೆಗೂ– ಗುರುವಿಗೂ ಒಂದು ಅಂತರ ಉಂಟು, ತಂದೆ ತೋರುವನು ಸದ್ಗುರುವ, ಗುರುರಾಯ ಬಂಧನವ ಕಳೆವ ಸರ್ವಜ್ಞ’ ಎಂದು ಹೇಳಿರುವ.ತಂದೆ– ತಾಯಿ, ಬಂಧು–ಬಳಗ ... ಹೀಗೆ ಎಲ್ಲ ಸಂಬಂಧಕ್ಕಿಂತಲೂ ಮಿಗಿಲಾದ ಗುರು–ಶಿಷ್ಯ ಸಂಬಂಧಕ್ಕೆ ಸಮ ಜಗದಲ್ಲಿ ಮತ್ತೊಂದಿಲ್ಲ. ಗುರು ಇದ್ದರೇನೇ ಸುಂದರ ಬಾಳು– ಭವಿಷ್ಯ. ಹಿಂದೆ ಗುರು, ಮುಂದೆ ಗುರಿ ಇದ್ದಾಗ ಮಾತ್ರ ಸಾಧನೆ ಸಾಧ್ಯ. ಇಲ್ಲದಿರೆ ಬರೀ ಶೂನ್ಯ. ದೇವರಿಗಿಂತ ಗುರು, ಗುರುವಿಗಿಂತ ಗುರುಕೃಪೆ ದೊಡ್ಡದು. ಶ್ರೀರಾಮ, ಶ್ರೀ ಕೃಷ್ಣರೂ ಕೂಡ ವಶಿಷ್ಟ, ವಿಶ್ವಾಮಿತ್ರ, ಸಾಂದೀಪನಿಗಳಂಥ ಗುರುಗಳ ಸೇವೆ ಮಾಡಿ ಫಲ ಪಡೆದವರು.

‘ಗುರುದೇವೋಭವ’ ಎಂದು ಗುರುವನ್ನು ಗುರುದೇವರಾಗಿ ದೈವಸ್ವರೂಪದಲ್ಲಿಟ್ಟು ನಮ್ಮ ಸಂಸ್ಕೃತಿಯಲ್ಲಿ ಕರೆಯಲಾಗುತ್ತದೆ. ಭಗವಂತ ಅಂಥ ನಾವು ಹೆಸರಿಸಿ ಪೂಜಿಸುವ ವಿಶ್ವಚೈತನ್ಯ ಸಾಮಾನ್ಯ ಮನಸ್ಸಿಗೆ ಗೂಢ, ಅಗೋಚರ. ಆದರೆ ಗುರುದೇವ ಕಣ್ಣಿಗೆ ಕಾಣುವ ಸಾಕ್ಷಾತ್ ಪರಬ್ರಹ್ಮದೇವ. ಆದ್ದರಿಂದಲೇ ಆಚಾರ್ಯ ಓಶೋ ಗುರುವನ್ನು ‘ಭಗವಂತನ ವಿಳಾಸ’ ಎಂದಿದ್ದಾರೆ.

"ಗುರು ಬ್ರಹ್ಮ ಗುರುವಿಷ್ಣು
ಗುರುದೇವೋ ಮಹೇಶ್ವರ
ಗುರುಸಾಕ್ಷಾತ್ ಪರಬ್ರಹ್ಮಾ
ತಸ್ಮೈಶ್ರೀ ಗುರುವೇ ನಮಃ"

ಗುರುವಿನ ಮಹತ್ವವೇ ಅಂಥಾದ್ದು! ಓರ್ವ ಶ್ರೇಷ್ಠಗುರು ಸಹಸ್ರಾರು ಶ್ರೇಷ್ಠ ಶಿಷ್ಯರನ್ನು ಸೃಷ್ಟಿಸಬಲ್ಲ. ಬ್ರಹ್ಮಜ್ಞಾನವನ್ನೇ ನೀಡಬಲ್ಲ. ಗುರುದೇವ ಮನಸ್ಸು ಮಾಡಿದಲ್ಲಿ ಏನು ಬೇಕಾದರೂ ಮಾಡಬಲ್ಲ. ಅಗಾಧ ಅರಿವಿನ ಹಣತೆಯನ್ನು ಪ್ರಜ್ವಲವಾಗಿ ಬೆಳಗಬಲ್ಲ. ಅದಕ್ಕೇನೇ ಗುರುವನ್ನು ಸೃಷ್ಟಿಕರ್ತನಾದ ಬ್ರಹ್ಮನಿಗೆ ಹೋಲಿಸಿ ‘ಗುರುಬ್ರಹ್ಮಾ’ ಎಂದು ನಮಿಸುವುದು.

‘ಸಾಮೃತೈಃ ಪಾಣಿಘ್ನಂತೆ
ಗುರುವೋನ ವಿಷೋಕ್ಷಿತೈಃ।
ಲಾಲನಾಶ್ರಯಿಣೋ
ದೋಷಾಸ್ತಾಡನಾಶ್ರಯಿಣೋ ಗುಣಾ॥’

ಅಂದರೆ ಗುರುಗಳು ಕೈಗೆ ಅಮೃತವನ್ನು ಹಚ್ಚಿಕೊಂಡು ಶಿಷ್ಯರನ್ನು ಹೊಡೆಯುತ್ತಾರೆ. ವಿಷವನ್ನು ಹಚ್ಚಿಕೊಂಡಲ್ಲ. ಮಕ್ಕಳನ್ನು ಮುದ್ದಿಸುವುದರಿಂದ ದೋಷಗಳು ಚಿಗುರಿಕೊಳ್ಳುತ್ತವೆ. ದಂಡಿಸುವುದರಿಂದ ಗುಣಗಳು ಕಾಣಿಸಿಕೊಳ್ಳುತ್ತವೆ. ದುರ್ಗುಣಗಳಿಂದ ದೂರವಿರಿಸಿ ಸದ್ಗುಣ ಸಂಪನ್ನರಾಗುವತ್ತ ಶಿಷ್ಯೋತ್ತಮರನ್ನು ತಮ್ಮ ಅಮೃತಕರಗಳಿಂದ ಗುರು ಸಂರಕ್ಷಿಸುವ. ಹಾಗಾಗಿ ಗುರುವನ್ನು ಸಂರಕ್ಷಕನಾದ ವಿಷ್ಣುವಿಗೆ ಹೋಲಿಸಿ ‘ಗುರುವಿಷ್ಣು’ ಎಂದು ಪೂಜಿಸುತ್ತೇವೆ.

ಗುರು ರುದ್ರನಂತೆ ಪ್ರಳಯ ಕಾರಿಯೂ ಹೌದು. ಲಯಕಾರಿಯೂ ನಿಜ. ‘ಶಿವೇತರಕ್ಷತಯೇ’ ಎಂಬಂತೆ, ಯಾವುದು ಮಂಗಳಕರವಲ್ಲದ್ದೋ ಅದನ್ನು ಗುರುವಾದವನು ನಾಶಗೊಳಿಸುತ್ತಾನೆ. ತನ್ಮೂಲಕ ಶಿಷ್ಯರ ಬದುಕನ್ನು ಮಂಗಳಮಯ ಮಾಡುತ್ತಾನೆ. ಮಾನವನಲ್ಲಿರುವ ಕೆಡಕನ್ನು ದಹಿಸಿ ಒಳಿತನ್ನು ಧಾರೆಯೆರೆದು ಉತ್ತಮೋತ್ತಮ ಶಿಷ್ಯ ಪರಂಪರೆಯನ್ನು ಬೆಳೆಸುವಲ್ಲಿ ಗುರುವೇ ದೀಪಧಾರಿ. ಆದ್ದರಿಂದಲೇ ಇಂಥ ಗುರುದೇವನನ್ನು ಲಯಕರ್ತನಾದ ರುದ್ರನಿಗೆ ಹೋಲಿಸಿ ‘ಗುರುದೇವೋ ಮಹೇಶ್ವರ’ ಎಂದು ಆರಾಧಿಸುವುದು.

ಮಾನವನೆಂಬುವ ದೇವನೂ ಹೌದು, ದಾನವನೂ ಹೌದು. ದೇವದಾನವರಿಬ್ಬರೂ ಅವನೊಳಗೇ ಇರುತ್ತಾರೆ. ಮಾನವ ಒಳಿತು ಕೆಡುಕುಗಳೆರಡರ ಸಮ್ಮಿಶ್ರಣ. ಅವನ ಹೃದಯ ತೋಟದಲ್ಲಿ ದೈವೀಗುಣಗಳೆಂಬ ಒಳಿತಿನ ಸುಂದರ ಗಿಡಗಳೂ ಮತ್ತು ರಾಕ್ಷಸೀ ಗುಣಗಳೆಂಬ ವಿಷಕಾರಿ ಮುಳ್ಳಿನ ಗಿಡಗಳೂ ಇರುತ್ತವೆ. ಗುರುಗಳಾದವರು ಮುಳ್ಳಿನ ಗಿಡಗಳನ್ನು ಕಿತ್ತು ಬಿಸಾಕಿ ಅಲ್ಲಿ ಸದ್ಗುಣಗಳೆಂಬ ಸಸಿಗಳನ್ನು ನೆಟ್ಟು ಬೆಳೆಸುತ್ತಾರೆ. ಮಾನವನನ್ನು ಕತ್ತಲಿನಿಂದ ಬೆಳಕಿನತ್ತ ಕರೆದೊಯ್ಯುವ ಜ್ಞಾನದರ್ಶಕ, ಮಾರ್ಗದರ್ಶಕ ಗುರುವಾಗಿದ್ದು, ಸಾಮಾನ್ಯ ಮನುಷ್ಯನನ್ನು ಮಹಾತ್ಮನನ್ನಾಗಿ ಮಾಡುವ ಪವಾಡ ಪುರುಷರಾಗಿರುತ್ತಾರೆ. ಗುರುವಿನ ಗುಣದ ಬೃಹತ್ತು ಮತ್ತು ಮಹತ್ತು ಹಾಗೂ ಮಹಾಶಕ್ತಿ ಎಷ್ಟೆಂಬುದನ್ನು, ಹಾಗೆಯೇ ನಿಜವಾದ ಗುರು ಎಂಬುವ ಹೇಗಿರುವ ಎಂಬ ತತ್ವವನ್ನು ಸಾರುವ ಸುಭಾಷಿತವೊಂದು ಹೀಗಿದೆ –

‘ಅಜ್ಞಾನ ತಿಮಿರಾಂಧಸ್ಯ
ಜ್ಞಾನಾಂಜನ ಶಲಾಕಯಾ
ಚಕ್ಷುರುನ್ಮೀರಿತಂ ದೇವ ತಸ್ಮೈಶ್ರೀ
ಗುರುವೇ ನಮಃ’


ಅಂದರೆ, ಶಿಷ್ಯನ ಅಜ್ಞಾನವೆಂಬ ಕಣ್ಣು ಬೇನೆಯನ್ನು ಜ್ಞಾನವೆಂಬ ಅಂಜನದ ಕಡ್ಡಿಯಿಂದ ಗುಣಪಡಿಸಿ ಅವನ ಕೀರ್ತಿ ಎಲ್ಲೆಡೆ ಹರಡುವಂತೆ ಮಾಡಿದ ಶ್ರೀ ಗುರುವಿಗೆ ನಮನಗಳು ಎಂದರ್ಥ. ಆದರೆ ಇವತ್ತಿನ ದಿನಗಳಲ್ಲಿ ಅಧಃಪತನಕ್ಕಿಳಿಯುತ್ತಿರುವ ನಮ್ಮ ಸಮಾಜದ ಅರ್ಥಾತ್ ದೇಶದ ಪರಿಸ್ಥಿತಿ ನೋಡಿದಾಗ ‘ಗುರು’ ಆದವನು ನಿಜಕ್ಕೂ ತನ್ನ ಜವಾಬ್ದಾರಿಯನ್ನು ಪ್ರಾಮಾಣಿಕವಾಗಿ ನಿಭಾಯಿಸುತ್ತಿದ್ದಾನೆಯೇ? ಹಾಗೆಯೇ ಆಧ್ಯಾತ್ಮಿಕ ಗುರು ಎನಿಸಿಕೊಂಡವರು ಕಾಯಾ ವಾಚಾ ಮನಸಾ ತಮ್ಮ ಕರ್ತವ್ಯದ ಕಾಯಕವನ್ನು ಮಾಡುತ್ತಿದ್ದಾರೆಯೇ ಎಂಬ ಪ್ರಶ್ನೆಗಳು ಶ್ರೀ ಸಾಮಾನ್ಯನಲ್ಲಿ ಮೂಡದಿರದು!

## ಮಕ್ಕಳ ಚಿತ್ರಕಥೆ
# ‘ತಾಯಿ, ಈಗೇಕೆ ಅಳುತ್ತಿರುವೇ...!!’

■ ಹೆಚ್.ಜಿ.ಎನ್.ಪ್ರಸಾದ್
ಮೊ. 98453 76199




ಆ ತಾಯಿಗೆ ನಾಲ್ವರು ಬಲಾಢ್ಯ ಮಕ್ಕಳು. ನಾಲ್ವರೂ ತಮ್ಮ ರಾಷ್ಟ್ರ ರಕ್ಷಣೆಯಲ್ಲಿ ಘನ ಘೋರವಾದ ಯುದ್ಧದಲ್ಲಿ ಮುನ್ನುಗ್ಗುತ್ತಿದ್ದಾರೆ.




ಯುದ್ದ ಭೂಮಿಯಿಂದ ಮೊದಲ ಸುದ್ದಿ ಬಂತು. ಓಡುತ್ತಾ ಬಂದವ ಆ ತಾಯಿಗೆ ಹೇಳಿದ " ತಾಯೇ ಕ್ಷಮಿಸು, ಯುದ್ಧರಂಗದಲ್ಲಿ ನಿನ್ನ ಹಿರಿಯ ಮಗ ಸತ್ತು ಹೋದ...!". ಸೈನಿಕರಿಗಾಗಿ ಬಟ್ಟೆ ಹೊಲೆಯುತ್ತಿದ್ದ ಆ ತಾಯಿ, ಈ ವಿಷಯ ಕೇಳಿ ಕಣ್ಣೀರು ಹಾಕಲಿಲ್ಲ. ಏನೂ ಆಗದಂತೆ ತನ್ನ ಕಾಯಕವನ್ನ ಮುಂದುವರೆಸಿದಳು.





ಮರುದಿನ ಮತ್ತೊಬ್ಬ ಓಡೋಡುತ್ತಾ ಬಂದು, ಆ ತಾಯಿಗೆ ಇನ್ನೊಂದು ಸುದ್ದಿ ಮುಟ್ಟಿಸಿದ "ಅವ್ವಾ..ತಾಯಿ ಇಂದಿನ ಯುದ್ಧದಲ್ಲಿ ನಿನ್ನ ಎರಡನೇ ಮಗ ಸತ್ತು ಹೋದ..!" ಮತ್ತೆ ಆ ತಾಯಿ ವಿಚಲಿತಳಾಗಲಿಲ್ಲ......ಮೌನವಾದಳು. ನೋಡುತ್ತಿದ್ದವರು ತಬ್ಬಿಬ್ಬಾಗಿ " ಈಕೆಗೆ ತಾಯಿ ಕರುಳು ಇಲ್ಲವೇ...? ಇವಳೇನು ರಾಕ್ಷಸಿಯೇ..?" ಎಂದುಕೊಂಡರು.




ಮೂರನೇ ದಿನ ಮತ್ತೊಬ್ಬ ಓಡೋಡಿ ಬಂದು "ಇಂದಿನ ಭಯಂಕರ ಯುದ್ಧದಲ್ಲಿ ನಿನ್ನ ಮೂರನೇ ಮಗನೂ ಸತ್ತು ಹೋದ...!" ಎಂದು ಹೇಳಿದ. ಮತ್ತೆ ಆ ತಾಯಿ ನಿರ್ಲಿಪ್ತಳಾಗಿಯೇ ದಿನಚರಿಯಲ್ಲಿ ಮುಳುಗಿದಳು. ನೋಡಿದವರು ಮತ್ತಷ್ಟು ದಂಗಾದರು. "ಇವಳೇನು ತಾಯಿಯೋ ಅಥವಾ ತಾಯಿ ರೂಪದ ರಾಕ್ಷಸಿಯೋ...?" ಎಂದು ಮಾತನಾಡಿಕೊಂಡರು





ನಾಲ್ಕನೇ ದಿನ ಮತ್ತೊಬ್ಬ ಓಡಿಬಂದು ಆ ತಾಯಿಗೆ ಸುದ್ದಿ ಮುಟ್ಟಿಸಿದ," ಇಂದಿನ ಪ್ರಚಂಡ ಯುದ್ಧಲ್ಲಿ ನಿನ್ನ ನಾಲ್ಕನೇ ಮಗನೂ ಸತ್ತು ಹೋದ...". ಈಗ ತಾಯಿ ಬಿಕ್ಕಿ ಬಿಕ್ಕಿ ಅಳತೊಡಗಿದಳು. ಸುತ್ತುವರೆದಿದ್ದ ಜನರಲ್ಲಿ ಒಬ್ಬ ಕೇಳಿಯೇ ಬಿಟ್ಟ "ನಿನ್ನ ಮೂರೂ ಮಕ್ಕಳು ಸತ್ತಾಗ ಅಳಲಿಲ್ಲ...ನಾಲ್ಕನೇ ಮಗ ಸತ್ತಾಗ ಅಳುತ್ತಿರುವೆಯಲ್ಲಾ...? ಏಕೆ..?".




ಆ ತಾಯಿ ನುಡಿದಳು..."ಅಣ್ಣಾ....ನಾನು ಇವರೆಲ್ಲಾ ಸತ್ತರೆಂದು ಅಳುತ್ತಿಲ್ಲಾ....ಆದರೆ ನಾಳೆ ಯುದ್ಧಕ್ಕೆ ಕಳುಹಿಸಲು ಐದನೇ ಮಗ ಇಲ್ಲವಲ್ಲ ಅಂತ ಅಳುತ್ತಿದ್ದೇನೆ...!!!"

ನೀತಿ: "ತ್ಯಾಗಕ್ಕೆ ಆರಂಭವಿದೆ.... ಆದರೆ ಅಂತ್ಯವಿಲ್ಲ..!!!"

# ವಾರಭವಿಷ್ಯ



21.7.2024 ರಿಂದ 27.7.2024

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ :–ರವಿ–ಕಟಕ, ಸಿಂಹ, ಚಂದ್ರ, ಕುಂಭ, ಮೀನ, ಮೇಷ, ವೃಷಭ, ಕುಜ–ವೃಷಭ, ಮಿಥುನ, ಬುಧ, ಕಟಕ, ಗುರು–ವೃಷಭ, ಶುಕ್ರ–ಕಟಕ, ಶನಿ–ಕುಂಭ, ರಾಹು–ಮೀನ ಮತ್ತು ಕೇತು–ಕನ್ಯಾ.


ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, ‘ಭಾವಸಾರ ರತ್ನ’
‘ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು’
ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ,
ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ.9740973224, 9739548720




### ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)
ಭಾಗ್ಯವಿದ್ದಂತೆ ಫಲ, ವಿದ್ಯೆ, ಪೌರುಷ ಯಾವುದೂ ಪ್ರಯೋಜನಕ್ಕೆ ಬರದು. ವಾರದ ಪೂರ್ವಾರ್ಧದಲ್ಲಿ ಚಂದ್ರ ಬಲದಿಂದ ಹಿಂದೆ ಮಾಡಿದ್ದ ಪ್ರಯತ್ನಗಳಿಗೆ ಸೂಕ್ತ ಪ್ರತಿಫಲ ದೊರೆಯುವುದು. ನಿಮ್ಮ ಆಪ್ತೇಷ್ಟರ ಸಹಾಯ, ಸಹಕಾರಗಳು ಒದಗಿ ಬರುವುದು. ಲಾಭ ಸ್ಥಾನ ಸ್ಥಿತ ಶನಿದೇವನ ಕೃಪೆಯಿಂದ, ಕಂಟ್ರಾಕ್ಟರುಗಳಿಗೆ, ಕಬ್ಬಿಣ, ಸಿಮೆಂಟ್ ವ್ಯಾಪಾರಿಗಳಿಗೆ ಉತ್ತಮ ಯೋಜನೆಗಳು ದೊರಕುವುದು.
ಶ್ರೀ ಗಣಪತಿಗೆ ಗರಿಕೆ ಸಮರ್ಪಣೆ. ಶುಭ ಸಂಖ್ಯೆ–8

### ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)
‘ಧೈರ್ಯಂ ಸರ್ವತ್ರ ಸಾಧನಂ’ ಗಾದೆ ಮಾತಿನಂತೆ ಸಮಸ್ಯೆಯನ್ನು ಪರಿಹರಿಸುವ ಉತ್ತಮ ಮಾರ್ಗವೆಂದರೆ ಅದನ್ನು ಎದುರಿಸುವುದು. ಫೈನಾನ್ಸ್ ವ್ಯವಹಾರಗಳಲ್ಲಿ ಕೈ ಸುಟ್ಟುಕೊಳ್ಳುವಿರಿ. ರಫ್ತು ಉದ್ದಿಮೆದಾರರಿಗೆ ದೊಡ್ಡ ಆರ್ಡರ್ ದೊರೆಯುವ ಸಂಭವವಿದೆ. ವಿದ್ಯಾರ್ಥಿಗಳಿಗೆ ಓದಿನಲ್ಲಿ ನಿರಾಸಕ್ತಿ ಕಾಡುವುದು. ವಾರದ ಕಡೆಗೆ ಸರ್ಕಾರಿ ಅಧಿಕಾರಿಗಳ ಸಹಾಯದಿಂದ ಆಸ್ತಿ ವಿಚಾರಗಳಲ್ಲಿ ಸಕಾರಾತ್ಮಕ ಫಲ.
ಶ್ರೀದೇವಿ ಉಪಾಸನೆ. ಶುಭ ಸಂಖ್ಯೆ–2

### ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)
‘ಶ್ರದ್ಧಾವಾನ್ ಲಭತೇ ಫಲಂ’ ಎಂಬ ಉಕ್ತಿಯಂತೆ ಮಾಡುವ ಕೆಲಸದಲ್ಲಿ ಶ್ರದ್ಧೆ ಇದ್ದಲ್ಲಿ ಉನ್ನತವಾದುದನ್ನು ಸಾಧಿಸುವಿರಿ. ಹಲವು ಗ್ರಹಗಳು ಶುಭ ಸ್ಥಾನದಲ್ಲಿ ಸಂಚರಿಸುತ್ತಿದ್ದಾರೆ. ಎನ್‌ಕ್ಯಾಷ್ ಮಾಡಿಕೊಳ್ಳಿ. ಹೊಸ, ವೃತ್ತಿ ಉದ್ಯಮವನ್ನು ಆರಂಭಿಸಲು ಕಾಲ ಪಕ್ವವಾಗಿದೆ. ಸ್ಪರ್ಧಾತ್ಮಕ ಪರೀಕ್ಷೆ ಬರೆದವರಿಗೆ ಸಫಲತೆ ಉಂಟಾಗುವುದು. ದಾನ, ಧರ್ಮ ಆಚರಿಸಿ ಪ್ರಸಿದ್ಧಿಗೆ ಬರುವಿರಿ. ಆರೋಗ್ಯವನ್ನು ಕಡೆಗಣಿಸದಿರಿ.
ಶ್ರೀರಾಮರಕ್ಷಾ ಸ್ತೋತ್ರ ಪಠಿಸಿ. ಶುಭ ಸಂಖ್ಯೆ–3

### ಕಟಕ (ಹೊ.ಹು.ಹೆ.ಹೊ.ಡ.ಡಿ.ಡು)
ಹೊಸ ಜೀವನ ವೃತ್ತಿ ಆರಂಭಿಸಲು ಗ್ರಹಾನುಕೂಲವಿದೆ. ಆದರೆ ಪಾರ್ಟನರ್‌ಶಿಪ್ ಮಾಡಬೇಡಿ. ಕೃತ್ರಿಮ ಗೆಳೆಯರಿಂದ ಮೋಸ ಹೋಗುವಿರಿ. ಶುಭ ಸ್ಥಾನ ಗುರುವಿನಿಂದ ಯತ್ನ ಕಾರ್ಯಗಳಲ್ಲಿ ಜಯವನ್ನು ಕಾಣುವಿರಿ. ಹಿಂದಾಗಿದ್ದಕ್ಕೆ ಚಿಂತಿಸುತ್ತಾ ಕೂರದೆ, ಮುಂದಾಗಬೇಕಾಗಿರುವ ವಿಷಯಗಳತ್ತ ಗಮನಹರಿಸಿ. ಶುಭ ಶುಕ್ರನಿಂದ ಆಸನ, ಶಯನ ಸುಖ, ದುಬಾರಿ ವಸ್ತುಗಳ ಖರೀದಿ, ನಿಮ್ಮ ಕ್ರಿಯಾಶಕ್ತಿಯಿಂದ ಸುಖ ಸಾಧನಗಳ ಸಂಗ್ರಹ.
ಶ್ರೀ ನಾರಾಯಣೀ ಸ್ತೋತ್ರ ಪಠಿಸಿ. ಶುಭ ಸಂಖ್ಯೆ–3

### ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)
ಆಗುವುದನ್ನು ಬದಲಾಯಿಸಲಾಗದು. ಆದರೆ ಭಗವದನುಗ್ರಹದಿಂದ ಕಡಿಮೆ ಮಾಡಿಕೊಳ್ಳಬಹುದು. ನಿಮ್ಮ ಸುತ್ತಮುತ್ತಲಿನ ಅಸೂಯಪರರು ನಿಮ್ಮ ಸಂಭವಿತನವನ್ನು ದುರುಪಯೋಗ ಮಾಡಿಕೊಳ್ಳುವರು. ಕೈಗೆ ಬಂದ ಹಣ ಬಂದಂತೆಯೇ ಖರ್ಚಾಗುವುದು. ಕೇತು–ರಾಹುಗಳು ಅಶುಭರಿದ್ದು ಮನೆಯೊಳಗಿನ ಕಲಹಗಳು ವಿಕೋಪಕ್ಕೆ ತಡೆಯುವುದು ನಿಮ್ಮ ಕೈಯಲ್ಲೇ ಇದೆ. ನಿಮ್ಮ ಆರೋಗ್ಯ ಕಡೆಗಣಿಸಬೇಡಿ.
ಶ್ರೀ ಸೂರ್ಯಸ್ತುತಿ. ಶುಭ ಸಂಖ್ಯೆ–7

### ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)
ಸಪ್ತಾಹದ ಆದಿಗೆ ಸಂತೋಷಕರ ಪ್ರಸಂಗಗಳು. ಧನ–ಧಾನ್ಯ ಸಂಗ್ರಹ ಶೇರು ವ್ಯವಹಾರಗಳಲ್ಲಿ ಲಾಭ ದೊರೆಯುವ ಸಂಭವ. ಪ್ರಭಾವಶಾಲಿಗಳೆನಿಸಿ ಶತ್ರುಗಳ ಮೇಲೆ ಜಯವನ್ನು ಸಾಧಿಸುವಿರಿ. ಎಳ್ಳು, ದ್ವಿದಳ ಧಾನ್ಯ ವ್ಯಾಪಾರಿಗಳಿಗೆ ಹೇರಳ ಧನಲಾಭವಾಗುವುದು. ವಧು–ವರಾನ್ವೇಷಣೆ ಮುಂದುವರೆಯಲಿ. ಪ್ರೇಮ ಪ್ರಸಂಗಗಳು ಆಷಾಢ ನಂತರ ವಿವಾಹ ಬಂಧನದಲ್ಲಿ ಪರಿವರ್ತನವಾಗುವ ಸಾಧ್ಯತೆ ಇದೆ.
ಶ್ರೀ ಅಷ್ಟಾಕ್ಷರಿಮಂತ್ರ ಜಪಿಸಿ. ಶುಭ ಸಂಖ್ಯೆ–5

### ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)
ವಾರದಾರಂಭಕ್ಕೆ ಆತ್ಮೀಯ ಬಂಧುಗಳು ಮನೆಗೆ ಬರುವರು. ಅವರ ಊಟೋಪಚಾರ, ಉಡುಗೊರೆಗಳಿಗೆ ಹಣ ಖರ್ಚು. ಭವಿಷ್ಯದ ಕೆಲಸಗಳಿಗೆ ಕಾಲಮಿತಿ ಹಾಕಿಕೊಳ್ಳುವುದು ಒಳ್ಳೆಯದು. ಪ್ರವಾಸೋದ್ಯಮಿಗಳಿಗೆ, ಹೋಟೆಲ್ ಮಾಲೀಕರಿಗೆ ಒಳ್ಳೆಯ ಆದಾಯವಾಗುವುದು. ತಾಮ್ರ ವಸ್ತು ಹಾಗೂ ಯಂತ್ರೋಪಕರಣ ವ್ಯಾಪಾರಿಗಳಿಗೆ ದೊಡ್ಡ ಮೊತ್ತದ ಗಿರಾಕಿ ದೊರಕುವರು.
ಶ್ರೀ ಶ್ರೀಕಂಠೇಶ್ವರ ದರ್ಶನ. ಶುಭ ಸಂಖ್ಯೆ–6

### ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯ.ಯಿ.ಯು
ಸುಕರ್ಮಗಳನ್ನು ಮಾಡುವುದರಿಂದ ಸುಫಲವನ್ನು ಹೊಂದುವಿರಿ. ನಿಮ್ಮ ಪ್ರಯತ್ನಗಳಿಗೆ ದೈವ ಸಹಾಯವೂ ಕೂಡಿ ಬಂದಿದೆ. ಸದ್ಯದಲ್ಲೇ ಮನೆಯಲ್ಲಿ ಮಂಗಳ ಕಾರ್ಯ ಜರುಗಲಿದೆ. ನ್ಯಾಯಾಲಯ ವಿಚಾರಗಳಲ್ಲಿ ವಿಜಯವನ್ನು ನಿರೀಕ್ಷಿಸಬಹುದು. ಮಠ ಮಾನ್ಯಗಳಿಗೆ ಭೇಟಿ ನೀಡುವಿರಿ. ಗುರು ಜನರ ಆಶೀರ್ವಾದಗಳು ದೊರೆಯಲಿದೆ. ವಯಸ್ಸಿಗೆ ಬಂದ ಮಕ್ಕಳ ಚಲನ ವಲನದ ಮೇಲೆ ನಿಗಾ ವಹಿಸಿ.
ಶ್ರೀನೃಸಿಂಹ ಉಪಾಸನೆ. ಶುಭ ಸಂಖ್ಯೆ–9

### ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)
ವಾರದಾರಂಭಕ್ಕೆ ಶುಭ ಚಂದ್ರ ಸಂಚಾರದಿಂದ ಹಣಕಾಸು ವಿಚಾರಗಳು ಆಶಾದಾಯಕವಾಗಿರುತ್ತದೆ. ವೃತ್ತಿ ಸಂಬಂಧವಾಗಿ ಅನ್ಯ ಸ್ಥಳದಲ್ಲಿ ವಾಸ ಮಾಡಬೇಕಾದೀತು. ಸತಿ–ಸುತರ ದೂರ ಬೇಸರ ತರುವುದು. ವಿಚಾರಹೀನ ಬಂಡವಾಳ ಹೂಡಿಕೆಯಿಂದ ನಷ್ಟವನ್ನು ಅನುಭವಿಸಬೇಕಾದೀತು. ಮನೆ ಕಟ್ಟುವ ಕೆಲಸಗಳಲ್ಲಿ ವಿಘ್ನಗಳು ಉಂಟಾದೀತು. ದೂರದ ರಾತ್ರಿ ಪ್ರಯಾಣಗಳನ್ನು ಮಾಡಬೇಡಿ.
ಶ್ರೀ ದತ್ತಾತ್ರೇಯ ಧ್ಯಾನ. ಶುಭ ಸಂಖ್ಯೆ–2

### ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)
ಈ ವಾರ ವೈಯಕ್ತಿಕ, ಸಾಮಾಜಿಕ ವಿಷಯಗಳಲ್ಲಿ ಪ್ರಗತಿಪರ ಚಿಂತನೆಗಳಿಂದ ಖ್ಯಾತಿಯನ್ನು ಗಳಿಸುವಿರಿ. ಅಶುಭ ಹೊರತಾಗಿಯೂ ಇದು ನಿಮ್ಮ ಪೂರ್ವದ ಪರಿಶ್ರಮಗಳಿಗೆ ಫಲ ನೀಡುವ ಸಮಯ. ಆದಾಯ ಅಷ್ಟಕ್ಕಷ್ಟೆ, ಹಾಸಿಗೆ ಇದ್ದಷ್ಟು ಕಾಲು ಚಾಚು’ ಎಂಬ ಗಾದೆ ಮಾತು ಪಾಲಿಸಿದರೆ ಒಳ್ಳೆಯದು, ಅನ್ಯಥಾ ಸಾಲ ಮಾಡಬೇಕಾದ ಪರಿಸ್ಥಿತಿ ಬಂದೀತು.
ಶ್ರೀ ಶನಿ ಅಷ್ಟೋತ್ತರ ಪಠಿಸಿ. ಶುಭ ಸಂಖ್ಯೆ–7

### ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)
ವಾರದಾರಂಭಕ್ಕೆ ನಿಮ್ಮ ರಾಶಿಗೆ ಬರುವ ಚಂದ್ರನಿಂದ ಮಾನಸಿಕವಾಗಿಯೂ, ಶಾರೀರಿಕವಾಗಿಯೂ ಉಲ್ಲಸಿತರಾಗಿರುವಿರಿ. ನಿಮ್ಮ ರಾಶಿಯಲ್ಲೇ ಸ್ಥಿತನಿರುವ ಶನಿದೇವನಿಂದ ಕೆಲಸ ಕಾರ್ಯಗಳು ಮಂದಗತಿಯಲ್ಲಿ ಸಾಗುವುದು. ಮಂಥನ ಮಾಡದೆ ಅಮೃತ ಸಿಗದು ಎಂಬಂತೆ ಸಮಸ್ಯೆಗೆ ಹೆದರಿ ಸುಮ್ಮನಾಗದಿರಿ, ಅದೃಷ್ಟ ತಾನೇ ಒಲಿಯುತ್ತದೆ. ಗುಡಿ ಕೈಗಾರಿಕೆಯವರಿಗೆ ಸರ್ಕಾರದಿಂದ ಬೆಂಬಲ ದೊರಕುತ್ತದೆ.
ಶ್ರೀ ಶೇಷಶಯನ ರಂಗನಾಥ ದರ್ಶನ. ಶುಭ ಸಂಖ್ಯೆ–5

### ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)
ಸಪ್ತಾಹದ ಆದಿಗೆ ಅನಗತ್ಯ ಖರ್ಚುಗಳು ಹೆಚ್ಚಾದರೂ, ಅದನ್ನು ತುಂಬಿಕೊಡಲು ಚಂದ್ರ ನಿಮ್ಮ ರಾಶಿಗೆ ಶುಭ ಸಂದೇಶವನ್ನು ತರಲಿದ್ದಾರೆ. ಆದರೆ ‘ಬಯಸಿದ್ದೆಲ್ಲ ಸಿಗುವುದಿಲ್ಲ ಸಿಕ್ಕಿದ್ದನ್ನೇ ಬಳಸಿಕೊಳ್ಳಬೇಕು. ಕೈಗೆ ಅಪರೂಪದ ಅವಕಾಶಗಳು ಬಂದಿವೆ. ಕೈ ಜಾರದಂತೆ ನೋಡಿಕೊಳ್ಳಿ, ಮಂಡಿ ನೋವು, ಕೀಲು ನೋವು ಕಾಡಬಹುದು. ಡ್ರೈವಿಂಗ್‌ನಲ್ಲಿ ಜಾಗ್ರತೆ. ತಪ್ಪಿದರೆ ಜಾರುತ್ತೀರ.
ಶ್ರೀ ಗುರು ಅಷ್ಟೋತ್ತರ ಪಠಿಸಿ. ಶುಭ ಸಂಖ್ಯೆ–2

ಹನುಮ ಜಯಂತಿ ಅಂಗವಾಗಿ

# ನಂಜನಗೂಡಿನಲ್ಲಿ ಬೃಹತ್ ಶೋಭಾಯಾತ್ರೆ



ನಂಜನಗೂಡಿನಲ್ಲಿ ವಿಜೃಂಭಣೆಯಿಂದ ನಡೆದ ಬೃಹತ್ ಶೋಭಾಯಾತ್ರೆ

ನಂಜನಗೂಡು, ಜು.20– ಹನುಮ ಜಯಂತಿ ಅಂಗವಾಗಿ ಇಲ್ಲಿನ ಶ್ರೀವೀರಾಂಜನೇಯ ಧರ್ಮ ಜಾಗೃತಿ ಬಳಗದಿಂದ ನಗರದಲ್ಲಿ ಶನಿವಾರ ಬೃಹತ್ ಶೋಭಾಯಾತ್ರೆ ವಿಜೃಂಭಣೆಯಿಂದ ನಡೆಯಿತು.

ನಗರದ ಶ್ರೀಕಂಠೇಶ್ವರಸ್ವಾಮಿ ದೇವಾಲಯದ ಮುಂಭಾಗ ಶನಿವಾರ ಮಧ್ಯಾಹ್ನ 2 ಗಂಟೆಗೆ ಶಾಸಕ ದರ್ಶನ್, ಮಾಜಿ ಶಾಸಕ ಬಿ.ಹರ್ಷವರ್ಧನ್, ಮಲ್ಲನಮೂಲೆ ಮಠದ ಸಿದ್ದಲಿಂಗೇಶ್ವರ ಸ್ವಾಮೀಜಿ ಆಂಜನೇಯ ಮೂರ್ತಿಗೆ ಪುಷ್ಪಾರ್ಚನೆ ಮಾಡುವ ಮೂಲಕ ಶೋಭಾಯಾತ್ರೆಗೆ ಚಾಲನೆ ನೀಡಿದರು.

ಮೆರವಣಿಗೆ ಕೇಂದ್ರ ಬಿಂದುವಾದ 9 ಅಡಿ ಎತ್ತರದ ಶ್ರೀಆಂಜನೇಯಸ್ವಾಮಿ ಮೂರ್ತಿಯನ್ನು ಓಂ ಎಂಬ 14 ಅಡಿ ಹಿಂಬದಿ ಆಕಾರದ ಮುಂದೆ ರೂಪಿಸಲಾಗಿತ್ತು. ಮೂರ್ತಿಗೆ ವಿಶೇಷ ಹೂ ಹಾಗೂ ವಿದ್ಯುತ್ ದೀಪಗಳಿಂದ ಅಲಂಕಾರ ಮಾಡ ಲಾಗಿತ್ತು ಅಲ್ಲದೇ ಮತ್ತೊಂದು 4.5 ಅಡಿ ಎತ್ತರದ ಕಂಚಿನ ಆಂಜನೇಯ ಮೂರ್ತಿ ಹಾಗೂ 15 ಅಡಿ ಎತ್ತರದ ಶ್ರೀರಾಮ ಮೂರ್ತಿಯನ್ನು ಹೈಡ್ರಾಲಿಕ್ ಯಂತ್ರ ಬಳಸಿ ಮೇಲೆ ಕೆಳಗೆ ಮೂವ್‌ಮೆಂಟ್ ಮಾಡುವಂತಹ ಮೂರ್ತಿಯನ್ನು ಮೆರವಣಿಗೆ ಮಾಡಲಾಯಿತು.

ಮೆರವಣಿಗೆಯಲ್ಲಿ ಕೇರಳ ದೇವರ ವೇಷಧಾರಿ ದೈವ ನಾಚಿಮ್, ಚಂಡೆವಾದ್ಯ, ನಾದಸ್ವರ, ತಮಟೆ, ನಗಾರಿ, ವೀರಗಾಸೆ, ಪೂಜಾ ಕುಣಿತ, ಕಂಸಾಳೆ ಕುಣಿತ, ದೇವರ ಕುಣಿತ, ಡೊಳ್ಳು ಕುಣಿತ, ಗಾರುಡಿ ಗೊಂಬೆ, ಗೊರವರ ಕುಣಿತ, 10 ಅಡಿ ಹನುಮಂತನ ವಿಶೇಷ ವೇಷಧಾರಿ, ಸೇರಿದಂತೆ ಅನೇಕ ಜಾನಪದ ಕಲಾ ತಂಡಗಳು ಭಾಗವಹಿಸಿ ರಂಗು ನೀಡಿದ್ದವು. ಮಿನಿ ದಸರಾ ಮಾದರಿ ನಡೆದ ಅದ್ದೂರಿ ಮೆರವಣಿಗೆ ನಗರದ ಆರ್.ಪಿ.ರಸ್ತೆ, ಹುಲ್ಲಹಳ್ಳಿ ವೃತ್ತ ಮಾರ್ಗವಾಗಿ ಎಂಜಿಎಸ್ ರಸ್ತೆ ಮೂಲಕ ಸಾಗಿ ಶ್ರೀಕಂಠೇಶ್ವರ ಸ್ವಾಮಿ ದೇವಾಲಯದಲ್ಲಿ ಅಂತ್ಯಗೊಂಡಿತು.

ಮೆರವಣಿಗೆಯಲ್ಲಿ ಸಾವಿರಾರು ಕಾರ್ಯಕರ್ತರು ಶ್ರದ್ಧಾ ಭಕ್ತಿಯಿಂದ ತಲೆಗೆ ಕೇಸರಿ ಪಟ್ಟಿ ಕಟ್ಟಿಕೊಂಡು ಕೇಸರಿ ಬಣ್ಣದ ಟೀ ಶರ್ಟ್ ಧರಿಸಿ ಹಣೆಗೆ ತಿಲಕ ಹಚ್ಚಿ ನಾವೆಲ್ಲ ಹಿಂದೂ ನಾವೆಲ್ಲ ಒಂದು, ಜೈ ಭಜರಂಗಿ, ಜೈ ಹನುಮ, ಜೈ ಶ್ರೀರಾಮ ಎಂದು ಮುಗಿಲು ಮುಟ್ಟುವಂತೆ ಘೋಷಣೆ ಕೂಗುತ್ತಾ ಉತ್ಸಾಹದಿಂದ ಬ್ಯಾಂಡ್ ಸದ್ದಿಗೆ ಕುಣಿದು ಕುಪ್ಪಳಿಸಿ ಸಂಭ್ರಮಿಸಿದರು.

ನಗರದಾದ್ಯಂತ ಹನುಮ ಜಯಂತಿ ಅಂಗವಾಗಿ ಹಬ್ಬದ ವಾತಾವರಣ ನಿರ್ಮಾಣವಾಗಿತ್ತು ನಗರದ ಪ್ರಮುಖ ರಸ್ತೆಗಳನ್ನು ತಳಿರು ತೋರಣಗಳಿಂದ ಸಿಂಗರಿಸಲಾಗಿತ್ತು ಹನುಮ ಜಯಂತಿಯ ಕೇಸರಿ ಬಣ್ಣದ ಬ್ಯಾನರ್, ಬಂಟಿಂಗ್ಸ್ ಕಟ್ಟಲಾಗಿತ್ತು. ರಸ್ತೆಯುದ್ದಕ್ಕೂ ವಿದ್ಯುತ್ ದೀಪಗಳಿಂದ ಅಲಂಕೃತಗೊಳಿಸಲಾಗಿತ್ತು. ರಸ್ತೆಯಲ್ಲಿ ನೀರನ್ನು ಹಾಕಿ ರಂಗೋಲಿ ಬಿಡಿಸಿದ್ದರು. ಭಕ್ತರು ಶ್ರದ್ಧಾ ಭಕ್ತಿಯಿಂದ ಶ್ರೀಆಂಜನೇಯ ಮೂರ್ತಿ ಬರಮಾಡಿಕೊಂಡರು.

ಇದಕ್ಕೂ ಮುನ್ನ ಮಹದೇವ ನಗರದ ಬಳಿಯ ಮಾರುತಿ ಗುಡ್ಡದ ಶ್ರೀಪರ್ವತ ಆಂಜನೇಯಸ್ವಾಮಿ ದೇವಾಲಯದಲ್ಲಿ ಯೋಗೀಶ್ ಋತ್ವೀಕರ ತಂಡ ಲೋಕ ಕಲ್ಯಾಣಾರ್ಥವಾಗಿ ಶ್ರೀಆಂಜನೇಯಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸಿದರು. ಶಾಸಕ ದರ್ಶನ್, ಮಾಜಿ ಶಾಸಕ ಬಿ.ಹರ್ಷವರ್ಧನ್, ಮಾಜಿ ಶಾಸಕ ಕೇಶವಮೂರ್ತಿ, ರಾಜ್ಯ ಕಾಂಪೋಸ್ಟ್ ಅಭಿವೃದ್ಧಿ ನಿಗಮ ಮಾಜಿ ಅಧ್ಯಕ್ಷ ಎಸ್.ಮಹದೇವಯ್ಯ, ಮೆರವಣಿಗೆಯಲ್ಲಿ ಭಾಗವಹಿಸಿದ್ದರು.

ಮುನ್ನೆಚ್ಚರಿಕೆ ಕ್ರಮವಾಗಿ ಡಿವೈಎಸ್ಪಿ ರಘು ನೇತೃತ್ವದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ನಿಯೋಜಿಸಲಾಗಿತ್ತು ಅಲ್ಲದೆ ಶೋಭಾಯಾತ್ರೆ ಹಿನ್ನೆಲೆಯಲ್ಲಿ ನಗರದ 2 ಮುಖ್ಯ ರಸ್ತೆಗಳಲ್ಲಿ ಅರೆಸೇನಾ ಪಡೆ ಸೇರಿದಂತೆ 150ಕ್ಕೂ ಹೆಚ್ಚು ಪೊಲೀಸ್ ಸಿಬ್ಬಂದಿ ನಿಯೋಜಿಸಲಾಗಿತ್ತು.

## ಹುಲಿ ದಾಳಿಗೆ ಹಸು ಬಲಿ

ಹೆಚ್.ಡಿ.ಕೋಟೆ, ಜು.20– ಹುಲಿ ದಾಳಿಗೆ ಹಸು ಬಲಿಯಾಗಿರುವ ಘಟನೆ ತಾಲೂಕಿನ ಕೃಷ್ಣಾಪುರ ಬಳಿ ನಡೆದಿದೆ. ಮಾಜಿ ಸಚಿವ ಕೋಟೆ ಎಂ.ಶಿವಣ್ಣ ಅವರ ತೋಟದಲ್ಲಿ ಕಟ್ಟಿ ಹಾಕಿದ್ದ ಹಸು ಮೇಲೆ ಹುಲಿ ದಾಳಿ ನಡೆಸಿ ಬಲಿ ಪಡೆದು ಅರೆಬರೆ ತಿಂದು ಹಾಕಿದ್ದು, ಈ ವೇಳೆ ತೋಟದ ಮನೆಯಲ್ಲಿದ್ದ ರಾಮಸ್ವಾಮಿ ಅವರು ಚೀರಾಡಿದ್ದರಿಂದ ಹುಲಿ ಹಸು ಬಿಟ್ಟು ಪರಾರಿಯಾಗಿದೆ.

ಈ ಸಂಬಂಧ ಮಾಜಿ ಸಚಿವ ಕೋಟೆ ಎಂ.ಶಿವಣ್ಣ ಅರಣ್ಯಾಧಿಕಾರಿಗಳಿಗೆ ಕರೆ ಮಾಡಿ ಘಟನೆ ಬಗ್ಗೆ ಮಾಹಿತಿ ನೀಡಿದ್ದು, ಈ ವೇಳೆ ಸ್ಥಳಕ್ಕಾಗಮಿಸಿದ ಆರ್‌ಎಫ್‌ಓ ಪೂಜಾ ಹಾಗೂ ಸಿಬ್ಬಂದಿ ಪರಿಶೀಲನೆ ನಡೆಸಿದರು. ಬಳಿಕ ಹುಲಿ ಹೆಜ್ಜೆ ಗುರುತು ಪತ್ತೆ ಹಚ್ಚಿ, ಹುಲಿ ಚಲನವಲನ ಪತ್ತೆಗೆ ಕ್ಯಾಮರ ಅಳವಡಿಸಿದ್ದಾರೆ.

ಈ ಘಟನೆಯಿಂದ ಈ ಭಾಗದ ರೈತರು, ಸಾರ್ವಜನಿಕರು ಭಯಗೊಂಡಿದ್ದಾರೆ. ಹೀಗಾಗಿ ಕೂಡಲೇ ಹುಲಿ ಸೆರೆ ಹಿಡಿಯುವಂತೆ ಗ್ರಾಮಸ್ಥರು ಒತ್ತಾಯಿಸಿದ್ದಾರೆ.

## ಹೆಬ್ಬನಕುಪ್ಪೆಯಲ್ಲಿ ಜೋಳದ ಬೆಳೆ ಮುಳುಗಡೆ



ಹುಣಸೂರು ತಾಲೂಕಿನ ಲಕ್ಷ್ಮಣ ತೀರ್ಥ ನದಿ ಪಾತ್ರದ ಕೆ.ಜಿ.ಹೆಬ್ಬನಕುಪ್ಪೆ ಗ್ರಾಮದಲ್ಲಿ ಪ್ರವಾಹದಿಂದಾಗಿ ಗ್ರಾಮದ ಸುಂದರಮ್ಮ, ಅಣ್ಣೇಗೌಡ, ಕಾವೇರಪ್ಪ, ಮಲ್ಲೇಶ ಅವರ ಜಮೀನಿನಲ್ಲಿ ಬೆಳೆದಿದ್ದ ಜೋಳದ ಬೆಳೆ ಮುಳುಗಡೆಯಾಗಿರುವುದು.

# ಸಾರ್ವಜನಿಕರ ದೂರುಗಳನ್ನು ಆಲಿಸಿ, ಸಮಸ್ಯೆ ಬಗೆಹರಿಸಿ

ಜನಸ್ಪಂದನಾ ಸಭೆಯಲ್ಲಿ ಅಧಿಕಾರಿಗಳಿಗೆ ಶಾಸಕ ಡಿ.ರವಿಶಂಕರ್ ಸೂಚನೆ



ಜನಸ್ಪಂದನಾ ಸಭೆಯಲ್ಲಿ ಸಾರ್ವಜನಿಕರಿಂದ ಜಿಲ್ಲಾಧಿಕಾರಿ ಲಕ್ಷ್ಮಿಕಾಂತರೆಡ್ಡಿ, ಶಾಸಕ ಡಿ.ರವಿಶಂಕರ್ ದೂರು ಸ್ವೀಕರಿಸಿದರು.

ಕೆ.ಆರ್.ನಗರ, ಜು.20– ನಾಗರಿಕರು ಅರ್ಜಿಗಳನ್ನು ಹಿಡಿದು ಕಚೇರಿಗಳಿಗೆ ಅಲೆದಾಡಿಸುವುದನ್ನು ತಪ್ಪಿಸಲು ಜಿಲ್ಲಾ, ತಾಲೂಕು ಮಟ್ಟದ ಅಧಿಕಾರಿಗಳನ್ನು ಒಂದೆಡೆ ಸೇರಿಸಿ ಸ್ಥಳದಲ್ಲೇ ಸಮಸ್ಯೆ ಬಗೆಹರಿಸಲು ಜನಸ್ಪಂದನಾ ಸಭೆ ನಡೆಸಲಾಗುತ್ತಿದೆ ಎಂದು ಶಾಸಕ ಡಿ.ರವಿಶಂಕರ್ ತಿಳಿಸಿದರು.

ಪಟ್ಟಣದ ನಾಮಧಾರಿಗೌಡ ಸಮುದಾಯ ಭವನದಲ್ಲಿ ನಡೆದ ಜನಸ್ಪಂದನಾ ಸಭೆಯಲ್ಲಿ ಮಾತನಾಡಿದ ಅವರು, ಅಧಿಕಾರಿಗಳು ಜನರನ್ನು ಅಲೆದಾಡಿಸುವುದನ್ನು ಬಿಟ್ಟು ಅವರ ದೂರುಗಳನ್ನು ಆಲಿಸಿ ಸಮಸ್ಯೆ ಬಗೆಹರಿಸುವ ಕೆಲಸ ಮಾಡಬೇಕು. ಇಲ್ಲದಿದ್ದರೇ ಅವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು.

ಸಭೆಯಲ್ಲಿ ಜಿಲ್ಲಾಧಿಕಾರಿಗಳು, ಎಲ್ಲಾ ಇಲಾಖೆ ಅಧಿಕಾರಿಗಳು ಭಾಗವಹಿಸುವುದರಿಂದ ಸಾರ್ವಜನಿಕರು ದೂರು ಸಲ್ಲಿಸಬಹುದಾಗಿದೆ. ಕೆಲವನ್ನು ಸ್ಥಳದಲ್ಲೇ ಬಗೆಹರಿಸಲಾಗುವುದು. ತೊಡಕುಗಳಿದ್ದಲ್ಲಿ ಕಾನೂನು ರೀತಿ ಬಗೆಹರಿಸಲಾಗುವುದು ಎಂದರು.

ಜಿಲ್ಲಾಧಿಕಾರಿ ಲಕ್ಷ್ಮಿಕಾಂತರೆಡ್ಡಿ ಮಾತನಾಡಿ, ಸರ್ಕಾರದ ಕಾರ್ಯಕ್ರಮವಾದ ಜನಸ್ಪಂದನಾ ಸಭೆ ಎಲ್ಲಾ ತಾಲೂಕಿನಲ್ಲೂ ನಡೆಯುತ್ತಿದ್ದು, ಸಾರ್ವಜನಿಕರು ಸಮಾಧಾನದಿಂದ ದೂರು ಸಲ್ಲಿಸಿ, ನಿಮ್ಮ ಕೆಲಸ ಆಗಿದೆಯೋ ಇಲ್ಲವೋ ಎಂಬುದನ್ನು ನೋಡಿಕೊಂಡು ಕೆಲಸ ಮಾಡಿಸಿಕೊಳ್ಳುವಂತೆ ತಿಳಿಸಿದರು.

ಈ ವೇಳೆ ಸಾಲಿಗ್ರಾಮದ ತಾಲೂಕು ಕಚೇರಿಗೆ ನೀಡಿದ ಅರ್ಜಿ ನಾಪತ್ತೆಯಾಗಿರುವ ಬಗ್ಗೆ ಶ್ರೀರಾಂಪುರದ ವಿಶ್ವನಾಥ್, ಕೆ.ಸಿ.ರವೀಂದ್ರ ಅವರ ದೂರಿಗೆ ಸ್ಪಂದಿಸಿದ ಶಾಸಕರು ಸಾರ್ವಜನಿಕರು ನೀಡಿದ ದೂರಿನ ದಾಖಲೆ ಇಲ್ಲ ಎಂದರೆ ಹೇಗೆ ಇದೇ ರೀತಿ ಮುಂದುವರೆದರೆ ನಿಮ್ಮ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಶಿರಸ್ತೇದಾರ್ ಮಹೇಶ್ ಅವರನ್ನು ತರಾಟೆ ತೆಗೆದುಕೊಂಡರು. ಅಲ್ಲದೇ ಯಾವ್ಯಾವ ಅರ್ಜಿಗಳು ನಾಪತ್ತೆಯಾಗಿದೆ ಅವುಗಳನ್ನು ಎರಡ್ಮೂರು ದಿನದಲ್ಲಿ ಹುಡುಕಿ ಬಗೆಹರಿಸಬೇಕು ಎಂದು ಎಚ್ಚರಿಕೆ ನೀಡಿದರು.

ಪಟ್ಟಣದ 16ನೇ ವಾರ್ಡ್ ವಿದ್ಯಾನಗರ ನಿವಾಸಿಗಳು ನಮ್ಮ ವಾರ್ಡ್‌ನಿಂದ ಪಟ್ಟಣಕ್ಕೆ ಹೋಗಲು ರಸ್ತೆ ಇಲ್ಲ. ರಸ್ತೆಗೆ ತಡೆಗೋಡೆ ನಿರ್ಮಿಸಲಾಗಿದೆ. ಅದನ್ನು ತೆರವುಗೊಳಿಸುವಂತೆ ಮನವಿ ನೀಡಿದರು. ಮನವಿ ಪುರಸ್ಕರಿಸಿದ ಜಿಲ್ಲಾಧಿಕಾರಿ ಮತ್ತು ಶಾಸಕರು ಇನ್ನೊಂದು ವಾರದೊಳಗೆ ಈ ಸಮಸ್ಯೆ ಬಗೆಹರಿಸುವ ಭರವಸೆ ನೀಡಿದರು.

ಸಭೆಯಲ್ಲಿ ವಿವಿಧ ಇಲಾಖೆಗೆ ಸಂಬಂಧಿಸಿದಂತೆ ದೂರು ಸಲ್ಲಿಸಲು ನೂಕು ನುಗ್ಗಲು ಉಂಟಾದ ಪರಿಣಾಮ ಕಂದಾಯ ಇಲಾಖೆ ಅಧಿಕಾರಿಗಳು ಟೋಕನ್ ನೀಡುವ ಮೂಲಕ ದೂರುಗಳನ್ನು ಸ್ವೀಕರಿಸಲಾಯಿತು. ಈ ವೇಳೆ ಜಿಪಂ ಸಿಇಓ ಗಾಯತ್ರಿ, ತಾಪಂ ಆಡಳಿತಾಧಿಕಾರಿ ಪ್ರಭುಸ್ವಾಮಿ, ತಹಸೀಲ್ದಾರರಾದ ಸಿ.ಎಸ್.ಪೂರ್ಣಿಮಾ, ನರಗುಂದ, ಪುರಸಭೆ ಮುಖ್ಯಾಧಿಕಾರಿ ಡಾ.ಜಯಣ್ಣ, ತಾಲೂಕು ಆರೋಗ್ಯ ಆಡಳಿತಾಧಿಕಾರಿ ಡಾ.ಡಿ.ನಟರಾಜ್, ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ಅಶೋಕ್ ಕುಮಾರ್, ಎಇಇ ಗುರುಪ್ರಸಾದ್, ಅರ್ಕೇಶ್, ವಿನುತ್, ರಾಜಾರಾಂ, ಸುಮಿತ್ರ, ಮಧುಸೂದನ್, ಅಬಕಾರಿ ಸಿಪಿಐ ಶೈಲಜಾ, ಎಸ್‌ಐ ಧನರಾಜ್, ಶಿರಸ್ತೇದಾರ್ ಶಿವಕುಮಾರ್, ಅಸ್ಲಾಂ ಪಾಷ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು, ಸಾರ್ವಜನಿಕರು ಹಾಜರಿದ್ದರು.

# ಉಕ್ಕಲಗೆರೆ ಗ್ರಾಪಂಗೆ ಮಂಜುಳಾ ಅಧ್ಯಕ್ಷೆ



ಉಕ್ಕಲಗೆರೆ ಗ್ರಾಪಂ ಅಧ್ಯಕ್ಷೆ ಮಂಜುಳಾ ಅವರನ್ನು ಮುಖಂಡರು ಅಭಿನಂದಿಸಿದರು.

ತಿ.ನರಸೀಪುರ, ಜು.20– ತಾಲೂಕಿನ ಉಕ್ಕಲಗೆರೆ ಗ್ರಾಪಂ ನೂತನ ಅಧ್ಯಕ್ಷೆಯಾಗಿ ಕನ್ನಾಯಕನಹಳ್ಳಿ ಮಂಜುಳಾ ನಾಗೇಂದ್ರ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಆಂತರಿಕ ಒಪ್ಪಂದದಂತೆ ಈ ಹಿಂದಿನ ಅಧ್ಯಕ್ಷೆ ಲತಾ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ ಹಿನ್ನೆಲೆಯಲ್ಲಿ ಗ್ರಾಪಂ ಸಭಾಂಗಣದಲ್ಲಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಮಂಜುಳಾ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ, ಶಿಶು ಅಭಿವೃದ್ಧಿ ಯೋಜನಾಧಿಕಾರಿ ಗೋವಿಂದರಾಜು ಘೋಷಿಸಿದರು. ಈ ವೇಳೆ ನೆರೆದಿದ್ದ ಬೆಂಬಲಿಗರು ಪಟಾಕಿ ಸಿಡಿಸಿ ಸಂಭ್ರಮಿಸಿದರು.

ಚುನಾವಣೆ ವಿಶೇಷ ಸಭೆಯಲ್ಲಿ ಉಪಾಧ್ಯಕ್ಷೆ ಶಿವಮ್ಮ, ಸದಸ್ಯೆ ನಾಗಲಾಂಬಿಕ, ಎಂ.ನಿಂಗರಾಜು, ಆರ್.ರವಿಶಂಕರ್, ಲತಾ, ಮಹದೇವಮ್ಮ, ಮಹದೇವ ಹಾಜರಾಗಿ ನೂತನ ಅಧ್ಯಕ್ಷರ ಆಯ್ಕೆಗೆ ಅನುಮೋದನೆ ನೀಡಿದರೆ, ಇನ್ನಿತರೆ ಆರು ಮಂದಿ ಸದಸ್ಯರು ಗೈರಾಗಿದ್ದರು.

ಎಪಿಎಂಸಿ ಮಾಜಿ ಸದಸ್ಯ ಉಕ್ಕಲಗೆರೆ ಬಸವಣ್ಣ ಮಾತನಾಡಿ, ಅಧ್ಯಕ್ಷರ ಅವಿರೋಧ ಆಯ್ಕೆ ಮಾಡಿ ಎಲ್ಲರಿಗೂ ಸಾಮಾಜಿಕ ನ್ಯಾಯ ದೊರಕಿಸಿ ಕೊಡಲಾಗಿದೆ. ನೂತನ ಅಧ್ಯಕ್ಷರಿಗೆ ಗ್ರಾಪಂನ ಎಲ್ಲಾ ಸದಸ್ಯರು ಸಹಕಾರ ನೀಡುವ ಮೂಲಕ ಉತ್ತಮ ಆಡಳಿತ ನಡೆಸಲು ಅವಕಾಶ ಮಾಡಿಕೊಡಬೇಕು. ಈಗ ಕ್ಷೇತ್ರದ ಶಾಸಕರು ಸಚಿವರಾಗಿದ್ದಾರೆ. ಅವರ ಪುತ್ರ ಸಂಸದರಾಗಿದ್ದಾರೆ. ಇಬ್ಬರೂ ಗ್ರಾಪಂಗೆ ಅನುದಾನ ನೀಡಲು ಅವಕಾಶಗಳಿವೆ. ಸಚಿವ ಮಹದೇವಪ್ಪ ಗ್ರಾಮಕ್ಕೆ ಈಗಾಗಲೇ ಕೋಟ್ಯಾಂತರ ರೂ. ಅನುದಾನ ನೀಡುವ ಮೂಲಕ ಗ್ರಾಮದ ಸ್ವರೂಪ ಬದಲಾಯಿಸಿದ್ದಾರೆ. ಹಾಳು ಬಿದ್ದ ರಸ್ತೆಗಳು ಯಾವ ನಗರ ಪ್ರದೇಶಕ್ಕೂ ಕಡಿಮೆ ಇಲ್ಲದಂತೆ ಅಭಿವೃದ್ಧಿಯಾಗಿವೆ. ಇನ್ನೂ ಹೆಚ್ಚಿನ ಅನುದಾನ ತರಲು ನೂತನ ಅಧ್ಯಕ್ಷರು ಮುಂದಾಗಬೇಕು. ಇದಕ್ಕೆ ಎಲ್ಲಾ ಸದಸ್ಯರು ಸಹಕಾರ ನೀಡುವ ಮೂಲಕ ಗ್ರಾಮದ ಅಭಿವೃದ್ಧಿಯಲ್ಲಿ ಭಾಗಿಯಾಗಬೇಕು ಎಂದು ಮನವಿ ಮಾಡಿದರು.

ಈ ವೇಳೆ ಜಿಪಂ ಮಾಜಿ ಅಧ್ಯಕ್ಷ ಎಸ್.ಎನ್.ಸಿದ್ದಾರ್ಥ, ಎಪಿಎಂಸಿ ಮಾಜಿ ಅಧ್ಯಕ್ಷ ಎಂ.ರಾಜಣ್ಣ, ಗ್ರಾಪಂ ಮಾಜಿ ಸದಸ್ಯ ಉಕ್ಕಲಗೆರೆ ರಾಜು, ನಂಜುಂಡಯ್ಯ, ನಾಗೇಂದ್ರ, ಪಿಎಸಿಎಸ್ ಅಧ್ಯಕ್ಷ ಷಡಕ್ಷರಿ, ಮಂಜುನಾಥ್, ಗವಿಮಠ ಚಿಕ್ಕಣ್ಣ, ಎಂ.ಎಲ್.ಹುಂಡಿ ಪ್ರಭುಸ್ವಾಮಿ, ಮಹದೇವಸ್ವಾಮಿ, ಕಳ್ಳೀಪುರ ದೇವರಾಜು, ನಾಗಣ್ಣ, ಬೂದಹಳ್ಳಿ ಮಾಧು, ಸುನೀಲ್ ಬೋಸ್, ಯುವ ಬ್ರಿಗೇಡ್ ಗೇಡ್ ಅಧ್ಯಕ್ಷ ಕನ್ನಾಯಕನಳ್ಳಿ ಕುಮಾರ್, ತುಂಬಲ ಗ್ರಾಪಂ ಮಾಜಿ ಉಪಾಧ್ಯಕ್ಷ ಗುಂಡ, ಶಿವರಾಜು, ಕೆಇಬಿ ಕುಮಾರ, ಸಿದ್ದಲಿಂಗಮೂರ್ತಿ, ಶಿವು, ರಂಗಸ್ವಾಮಿ, ಸಿದ್ದರಾಮು, ನಿಂಗರಾಜು, ಅಂಗಡಿ ಶಿವಪ್ಪ, ನಟರಾಜಮೂರ್ತಿ, ರಾಘವೇಂದ್ರ, ಮಹೇಶ್, ಚಿಕ್ಕನಾಗಯ್ಯ, ಪಿಡಿಓ ಕೃಷ್ಣಪ್ಪ, ಕಾರ್ಯದರ್ಶಿ ಮಹೇಶ್ ಮತ್ತಿತರಿದ್ದರು.

# ಬಿದರಗೂಡು ಡೈರಿಗೆ ನಿರ್ದೇಶಕರ ಆಯ್ಕೆ



ಡೈರಿ ಚುನಾವಣೆಯಲ್ಲಿ 12 ಮಂದಿ ನಿರ್ದೇಶಕರು ಆಯ್ಕೆಯಾದರು.

ಮಲ್ಲುಪುಂಡಿ, ಜು.20– ನಂಜನಗೂಡು ತಾಲೂಕಿನ ಬಿದರಗೂಡು ಹಾಲು ಉತ್ಪಾದಕರ ಸಹಕಾರ ಸಂಘದಲ್ಲಿ ನಡೆದ ಚುನಾವಣೆಯಲ್ಲಿ 12 ಮಂದಿ ನಿರ್ದೇಶಕರು ಆಯ್ಕೆಯಾಗಿದ್ದಾರೆ. ಚುನಾವಣೆಯಲ್ಲಿ ಎಲ್.ಕುಮಾರ್, ಮುದ್ದರಾಮಪ್ಪ, ರಾಮಣ್ಣ, ಶಿವಣ್ಣ, ಶಿವಕುಮಾರ್, ಮಹದೇವಸ್ವಾಮಿ, ಪ್ರಕಾಶ್, ಸಿದ್ದಪ್ಪ, ನಾರಾಯಣ ನಾಯಕ ನಿರ್ದೇಶಕರಾಗಿ ಆಯ್ಕೆಯಾದರೇ, ಬೋರೇಗೌಡ, ಶಾಂತಮ್ಮ, ಚಿನ್ನಮಣಿ ಅವಿರೋಧವಾಗಿ ಆಯ್ಕೆಯಾದರು. ಚುನಾವಣಾಧಿಕಾರಿ ಪ್ರೇಮ ನಿರ್ದೇಶಕರ ಆಯ್ಕೆಯನ್ನು ಘೋಷಿಸಿದರು. ಈ ವೇಳೆ ಸಿಇಓ ಶಿವಪ್ರಸಾದ್ ಸೇರಿದಂತೆ ಇತರರಿದ್ದರು.

# ಸಂಸ್ಕಾರದೊಂದಿಗೆ ಉತ್ತಮ ಜೀವನ ರೂಪಿಸಿಕೊಳ್ಳಿ

ಉದ್ಯಮಿ ಮೂಗೂರು ಸುಧಾಕರ್ ಸಲಹೆ



ಕಾರ್ಯಕ್ರಮದಲ್ಲಿ ಶಿವಕುಮಾರ ಸ್ವಾಮಿ ಮಾತನಾಡಿದರು.

ಮೂಗೂರು, ಜು.20– ವಿದ್ಯಾರ್ಥಿಗಳು ಶಿಕ್ಷಣ ಪಡೆಯುವುದರಲ್ಲಿ ಉತ್ತಮ ಭವಿಷ್ಯ ಅಡಗಿದೆ. ಅದನ್ನು ಸಾರ್ಥಕ ಪಡಿಸಿಕೊಳ್ಳುವ ಜವಾಬ್ದಾರಿ ನಿಮ್ಮ ಕೈಯಲ್ಲಿದೆ ಎಂದು ಎಂದು ಸುಧಾಕರ್ ರೈಸ್ ಇಂಡಸ್ಟ್ರಿಯಲ್ ಮಾಲೀಕ, ಉದ್ಯಮಿ ಮೂಗೂರು ಸುಧಾಕರ್ ತಿಳಿಸಿದರು.

ಮೂಗೂರಿನ ಕರ್ನಾಟಕ ಪಬ್ಲಿಕ್ ಶಾಲೆಯ ಸರ್ಕಾರಿ ಪಿಯು ಕಾಲೇಜಿನ ಸಭಾಂಗಣದಲ್ಲಿ ನಡೆದ 2024–25ನೇ ಸಾಲಿನ ಸಾಂಸ್ಕೃತಿಕ, ಕ್ರೀಡಾ ಚಟುವಟಿಕೆ ಹಾಗೂ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಗಿಡಕ್ಕೆ ನೀರೆರೆಯುವ ಮೂಲಕ ಉದ್ಘಾಟಿಸಿ, ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಮಾತನಾಡಿದ ಅವರು, ವಿದ್ಯಾರ್ಥಿಗಳು ಉತ್ತಮ ಸಂಸ್ಕಾರದ ಜೊತೆಗೆ ಗುರು ಹಿರಿಯರ ಮಾರ್ಗದರ್ಶನ ಪಡೆಯುವ ಮೂಲಕ ಉತ್ತಮ ಬದುಕು ರೂಪಿಸಿಕೊಳ್ಳಬೇಕು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಕಾಲೇಜು ಅಭಿವೃದ್ಧಿ ಸಮಿತಿ ಅಧ್ಯಕ್ಷ ಎಂ.ಎಂ. ಶಿವಕುಮಾರಸ್ವಾಮಿ ಮಾತನಾಡಿದರು. ಇದೇ ವೇಳೆ ದಾನಿಗಳಿಂದ ವಿದ್ಯಾರ್ಥಿಗಳಿಗೆ ಅಧ್ಯಯನ ಪರಿಕರ ವಿತರಿಸಲಾಯಿತು. ಕೆಪಿಎಸ್ ಶಾಲೆ ಉಪಾಧ್ಯಕ್ಷ ಎಂ.ಎನ್. ಸೋಮಣ್ಣ ಕಾಲೇಜು ಮುಖ್ಯಸ್ಥರಾದ ಬಿ.ಮಹೇಶ್, ಮಹದೇವಪ್ಪ, ಪಾಂಡವಪುರ ಪಿಯು ಕಾಲೇಜಿನ ಉಪನ್ಯಾಸಕ ಸಿ.ಕೃಷ್ಣೇಗೌಡ, ಡೇರಿ ಅಧ್ಯಕ್ಷ ಎಂ.ಎಂ.ಬಸವಣ್ಣ, ಎಂ.ಕೆ.ಸಿದ್ದರಾಜು, ಉಪನ್ಯಾಸಕ ವರ್ಗ ವಿದ್ಯಾರ್ಥಿಗಳು ಹಾಜರಿದ್ದರು.

ಪ್ರವಾಹ ಪೀಡಿತ ನಿವಾಸಿಗಳ ಸಮಸ್ಯೆ ನಿವಾರಣೆಗೆ

# ನಿವೇಶನ ನೀಡಿ ಮನೆ ನಿರ್ಮಿಸಿಕೊಡಲು ಕ್ರಮ: ಶಾಸಕ ದರ್ಶನ್ ಭರವಸೆ



ನಂಜನಗೂಡಿನ ಪ್ರವಾಹ ಪೀಡಿತ ಪ್ರದೇಶಗಳಿಗೆ ಶಾಸಕ ದರ್ಶನ್ ಭೇಟಿ ನೀಡಿ ಸಂತ್ರಸ್ತರ ಸಮಸ್ಯೆಗಳನ್ನು ಆಲಿಸಿದರು.

ನಂಜನಗೂಡು, ಜು.20– ಪ್ರವಾಹ ಪೀಡಿತ ನಿವಾಸಿಗಳ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸುವ ಸಲುವಾಗಿ ಬದಲಿ ನಿವೇಶನಗಳನ್ನು ನೀಡಿ ಮನೆ ನಿರ್ಮಿಸಿ ಕೊಡಲು ಕ್ರಮ ವಹಿಸಲಾಗುವುದು ಎಂದು ಶಾಸಕ ದರ್ಶನ್ ಭರವಸೆ ನೀಡಿದರು.

ಶನಿವಾರ ನಗರದ ಪ್ರವಾಹ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಿ ಪರಿಶೀಲಿಸಿ ಸಂತ್ರಸ್ತರ ಸಮಸ್ಯೆ ಆಲಿಸಿ ಮಾತನಾಡಿದ ಅವರು, ಕಪಿಲಾ ನದಿಯಲ್ಲಿ ಪ್ರವಾಹ ಬಂದಾಗಲೆಲ್ಲಾ ಈ ರೀತಿಯ ಪರಿಸ್ಥಿತಿ ಉದ್ಭವವಾಗುತ್ತದೆ. ಇದರಿಂದಾಗಿ ತಗ್ಗು ಪ್ರದೇಶದ ಜನರಿಗೆ ತೊಂದರೆಯಾಗಲಿದೆ. ಆದ್ದರಿಂದ ಅವರಿಗೆ ಶಾಶ್ವತ ಪರಿಹಾರ ಕಲ್ಪಿಸುವ ನಿಟ್ಟಿನಲ್ಲಿ ತಹಸೀಲ್ದಾರ್ ಅವರಿಗೆ ಜಾಗ ಗುರ್ತಿಸುವಂತೆ ಸೂಚನೆ ನೀಡಲಾಗಿದೆ. ಕೂಡಲೇ ಜಾಗ ಗುರ್ತಿಸಿ ನಿವೇಶನಗಳನ್ನು ಹಂಚಿಕೆ ಮಾಡಿ ಮನೆ ನಿರ್ಮಿಸಿ ಕೊಡಲು ಕ್ರಮವಹಿಸುತ್ತೇನೆ ಎಂದರು.

ಸೀತಾರಾಮ ಕಲ್ಯಾಣ ಮಂಟಪದಲ್ಲಿ ತೆರೆಯಲಾಗಿರುವ ಕಾಳಜಿ ಕೇಂದ್ರಕ್ಕೆ ತೆರಳಿ ಸಂತ್ರಸ್ತ ಕುಟುಂಬಗಳಿಗೆ ಸಾಂತ್ವನ ಹೇಳಿ ನಂತರ ಸಮಸ್ಯೆ ಆಲಿಸಿ ಸಮಾಲೋಚನೆ ನಡೆಸಿದರು.

ಈ ವೇಳೆ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿ.ಎಂ.ಶಂಕರ್, ನಗರಸಭಾ ಸದಸ್ಯರಾದ ಪ್ರದೀಪ್, ಗಂಗಾಧರ್, ಶ್ರೀಕಂಠಸ್ವಾಮಿ, ಗಾಯತ್ರಿ, ಸೌಭಾಗ್ಯ, ಯೋಗೀಶ್, ಚಂದ್ರು, ಜಿಪಂ ಮಾಜಿ ಸದಸ್ಯ ಕೆ.ಮಾರುತಿ, ತಹಸೀಲ್ದಾರ್ ಶಿವಕುಮಾರ್ ಕಾಸ್ನೂರು ಸೇರಿದಂತೆ ಇತರರಿದ್ದರು.

ಇಂದು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಚುನಾವಣೆ

# ಎಸ್‌ಎಂಆರ್ ಪ್ರಕಾಶ್ ನೇತೃತ್ವದ ತಂಡ ಬೆಂಬಲಿಸಿ

ಸಮುದಾಯದ ಬಂಧುಗಳಿಗೆ ಬೆನಕನಹಳ್ಳಿ ಶಿವಮಲ್ಲಪ್ಪ ಮನವಿ



ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಅಧ್ಯಕ್ಷ ಸ್ಥಾನದ ಅಭ್ಯರ್ಥಿ ಎಸ್‌ಎಂಆರ್ ಪ್ರಕಾಶ್ ಮನೆ ಮನೆಗೆ ತೆರಳಿ ಮತಯಾಚಿಸಿದರು.

> ಸಮಾಜದ ಬಂಧುಗಳು ಯಾವುದೇ ಅಪಪ್ರಚಾರಕ್ಕೆ ಕಿವಿಗೊಡದೇ ಸಮಾಜ ಸೇವೆ ಮಾಡುವ ಏಕೈಕ ಉದ್ದೇಶದಿಂದ ಮುಖ್ಯ ವಾಹಿನಿಗೆ ಬಂದಿರುವ ನನಗೆ ಮತ್ತು ನನ್ನ ತಂಡಕ್ಕೆ ಮತ ನೀಡಿ.
> - ಎಸ್‌ಎಂಆರ್ ಪ್ರಕಾಶ್, ಅಧ್ಯಕ್ಷ ಸ್ಥಾನದ ಅಭ್ಯರ್ಥಿ.

ತಿ.ನರಸೀಪುರ, ಜು.20– ಅಪಪ್ರಚಾರಗಳಿಗೆ ಕಿವಿಗೊಡದೇ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿರುವ ಎಸ್‌ಎಂಆರ್ ಪ್ರಕಾಶ್ ನೇತೃತ್ವದ ತಂಡವನ್ನು ಸಮುದಾಯದ ಬಂಧುಗಳು ಬೆಂಬಲಿಸಬೇಕು ಎಂದು ತಾಲೂಕು ಕೃಷಿಕ ಸಮಾಜದ ಅಧ್ಯಕ್ಷ ಬೆನಕನಹಳ್ಳಿ ಶಿವಮಲ್ಲಪ್ಪ ಮನವಿ ಮಾಡಿದರು.

ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ತಿ.ನರಸೀಪುರ ತಾಲೂಕು ಘಟಕದ ಕಾರ್ಯಕಾರಿ ಸಮಿತಿಗೆ (ಜು.21) ಚುನಾವಣೆ ನಡೆಯುವ ಹಿನ್ನೆಲೆಯಲ್ಲಿ ಪ್ರಚಾರಕ್ಕೆ ಅಂತಿಮ ದಿನವಾದ ಶನಿವಾರ ಸಮಾಜದ ಮುಖಂಡರು ಹಾಗೂ ನಿರ್ದೇಶಕ ಸ್ಥಾನದ ಅಭ್ಯರ್ಥಿಗಳೊಂದಿಗೆ ಪಟ್ಟಣದಲ್ಲಿ ಮನೆ ಮನೆಗೆ ತೆರಳಿ ಮತಯಾಚಿಸಿ ಮಾತನಾಡಿದರು.

ಕೆಲವರು ನಾಮಪತ್ರ ಹಿಂಪಡೆಯದ ಕಾರಣ ಚುನಾವಣೆ ನಡೆಯುತ್ತಿದೆ ಎಂಬ ಹೇಳಿಕೆಯನ್ನು ಸಮಾಜದ ಮುಖಂಡರೊಬ್ಬರು ನೀಡಿದ್ದಾರೆ. ಆದರೆ ನಾವು ಚುನಾವಣೆಗೆ ಯಾವ ಕಾರಣಕ್ಕೆ ಹೋಗಿದ್ದೇವೆ ಎಂಬುದು ಸಮಾಜದ ಎಲ್ಲರಿಗೂ ಗೊತ್ತಿದೆ. ನಮಗೂ ಅವಿರೋಧ ಆಯ್ಕೆಯಾಗಬೇಕೆಂಬ ಅಭಿಲಾಷೆ ಇತ್ತಾದರೂ ಚುನಾವಣೆಗೆ ಹೋಗುವ ಅನಿವಾರ್ಯತೆ ಸೃಷ್ಟಿಯಾಯಿತು. ಹಾಗಾಗಿ ಯಾರೂ, ಯಾರ ಮೇಲೂ ಹೇಳಿಕೆ ನೀಡುವುದು ಬೇಡ ಉತ್ತಮ ತಂಡ ತಾಲೂಕಿನ ವೀರಶೈವ ಸಮಾಜದ ಮುಖಂಡತ್ವ ವಹಿಸಬೇಕೆಂಬ ಕಾರಣ ಬಿಟ್ಟರೆ ಬೇರೇನೂ ಇಲ್ಲ. ಇಲ್ಲಿ ನಾವೆಲ್ಲಾ ಒಂದೇ, ಯಾರಿಗೋಸ್ಕರ ಚುನಾವಣೆಯಲ್ಲ, ಸಮಾಜಕ್ಕೋಸ್ಕರ ಚುನಾವಣೆ ಎಂಬುದನ್ನು ಅರಿಯಬೇಕಿದೆ ಎಂದರು.

ಎಸ್‌ಎಂಆರ್ ಪ್ರಕಾಶ್ ನೇತೃತ್ವದಲ್ಲಿ ಚುನಾವಣೆಗೆ ಹೋಗಿದ್ದೇವೆ. ಇದನ್ನು ಬಿಟ್ಟು ಬೇರೇನೂ ಇಲ್ಲ. ಯಾರೂ ಅನ್ಯಥಾ ಭಾವಿಸಬಾರದು. ನಾನು ಕೂಡ ಕಣದಲ್ಲಿದ್ದೆ. ಎಲ್ಲರೂ ಒಗ್ಗೂಡಿ ಒಮ್ಮತದ ಅಭ್ಯರ್ಥಿ ಆಯ್ಕೆ ಮಾಡಬೇಕೆಂದಾಗ ನಾವೆಲ್ಲಾ ಸಹಿ ಮಾಡಲು ಹೋಗಿದ್ದೆವು. ಆದರೆ ಯಾರು ಸಹಿ ಮಾಡಬೇಕಿತ್ತೋ ಅವರೇ ಮಾಡಲಿಲ್ಲ. ಹಾಗಾಗಿ ನಾನು ಕಣದಿಂದ ಹಿಂದೆ ಸರಿದು ಪ್ರಕಾಶ್ ಅವರಿಗೆ ಬೆಂಬಲ ನೀಡಿದ್ದೇನೆ. ಸಮಾಜದ ಬಂಧುಗಳು ಅಪಪ್ರಚಾರಕ್ಕೆ ಕಿವಿ ಕೊಡದೆ ನಮ್ಮ ತಂಡ ಬೆಂಬಲಿಸಿ ಎಂದು ಮನವಿ ಮಾಡಿದರು.

**ಸ್ವಾಮೀಜಿಗಳು ನಮಗೂ ಆಶೀರ್ವದಿಸಿದ್ದಾರೆ:** ಚುನಾವಣೆಗೆ ಸ್ಪರ್ಧಿಸಿರುವ ಮತ್ತೊಂದು ತಂಡದವರು ನಮಗೆ ಎಲ್ಲಾ ಸ್ವಾಮೀಜಿಗಳ ಆಶೀರ್ವಾದ ಇದೆ ಎಂಬ ಹೇಳಿಕೆ ಪ್ರಸ್ತಾಪಿಸಿದ ಅವರು, ನಮಗೂ ಎಲ್ಲಾ ಸ್ವಾಮೀಜಿಗಳ ಆಶೀರ್ವಾದ ಇದೆ. ಸ್ವಾಮೀಜಿಗಳು ಎಲ್ಲರಿಗೂ ಆಶೀರ್ವಾದ ಮಾಡುತ್ತಾರೆ. ಇದರಲ್ಲಿ ಯಾವುದೇ ಅತಿಶಯೋಕ್ತಿ ಇಲ್ಲ ಎಂದರು.

**ಬಸವ ಭವನ ನಿರ್ಮಾಣಕ್ಕೆ ಆದ್ಯತೆ:** ಸಮಾಜದ ಮುಖಂಡರು ನಮಗೆ ಆಶೀರ್ವದಿಸಿದರೆ ತಿ.ನರಸೀಪುರದಲ್ಲಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪನವರ ಸಹಕಾರದೊಂದಿಗೆ ಬಸವ ಭವನ, ತಾಲೂಕು ಕಚೇರಿ ಎದುರು ಬಸವ ಪುತ್ಥಳಿ ನಿರ್ಮಿಸಲಾಗುವುದು. ಈಗಾಗಲೇ ಇದಕ್ಕೆ ಪುರಸಭೆಯಿಂದ ಅನುಮತಿ ಪಡೆಯಲಾಗಿದೆ ಎಂದರು.

ಪ್ರತಿಭಾನ್ವಿತ ಬಡ ವಿದ್ಯಾರ್ಥಿಗಳಿಗೆ ಶಾಲಾ ಶುಲ್ಕ ಹಾಗೂ ಸ್ಪರ್ಧಾತ್ಮಕ ಪರೀಕ್ಷೆ ತೆಗೆದುಕೊಳ್ಳಲು ಸಹಕಾರ ನೀಡುವ ಗುರಿಯನ್ನು ನಮ್ಮ ತಂಡ ಹೊಂದಿದೆ. 12ನೇ ಶತಮಾನದ ಶರಣರ ಸಂದೇಶಗಳನ್ನು ಸಾರುವ ಮೂಲಕ ಸಮಾಜದಲ್ಲಿ ಅರಿವು ಮೂಡಿಸುವುದು, ಸಮಾಜದ ಹಿರಿಯ ಅಧಿಕಾರಿಗಳು ನಿವೃತ್ತರಾದಾಗ ಅವರನ್ನು ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡು ಸಮಾಜದ ಮುಖ್ಯವಾಹಿನಿಗೆ ತರುವ ಜೊತೆಗೆ ಇನ್ನೂ ಹಲವು ಯೋಜನೆಗಳನ್ನು ರೂಪಿಸಲು ಉದ್ದೇಶಿಸಲಾಗಿದೆ ಎಂದರು.

ಈ ವೇಳೆ ನಿರ್ದೇಶಕ ಸ್ಥಾನದ ಅಭ್ಯರ್ಥಿ ತೊಟ್ಟವಾಡಿ ಟಿ.ಪಿ.ಕುಮಾರಸ್ವಾಮಿ, ದೊಡ್ಡನಹುಂಡಿ ಜಿ.ನಂಜುಂಡಸ್ವಾಮಿ, ಕಾವೇರಿಪುರ ಕೆ.ಎಂ.ಮಲ್ಲು, ಶಂಭುದೇವನಪುರ ಎಸ್.ಬಿ.ಸುಗಂಧರಾಜು, ಕಟ್ಟೇಪುರ ಓಂಕಾರಸ್ವಾಮಿ, ಹೊಸೂರುಂಡಿ ತೊಂಟೇಶ್, ಎಂ.ಎಲ್.ಹುಂಡಿ ಶ್ರೀಕಂಠಸ್ವಾಮಿ, ಉಕ್ಕಲಗೆರೆ ಎಂ.ಪರಶಿವಮೂರ್ತಿ, ಬೆನಕನಹಳ್ಳಿ ಬಿ.ಎಂ.ವಿಜಯಕುಮಾರ್, ಕಿರಗಸೂರು ಎಂ.ಸುರೇಶ್, ಪುರಸಭಾ ಸದಸ್ಯ ಎಸ್.ಕೆ.ಕಿರಣ್, ತುರುಗನೂರು ಬಿ.ಸುರೇಶ್, ಮುಖಂಡರಾದ ಹಿರಿಯೂರು ನವೀನ್, ತೊಟ್ಟವಾಡಿ ನಟರಾಜ್, ಪರಮೇಶ್, ಕರೋಹಟ್ಟಿ ಬಸವರಾಜು, ಎಲ್‌ಐಸಿ ಸೋಮಶೇಖರ್, ಪ್ರಕಾಶ್, ಯೋಗೇಶ್ ಮತ್ತಿತರಿದ್ದರು.

## ಮಹದೇವಸ್ವಾಮಿ ನಿಧನ



ಮೈಸೂರು, ಜು.20–ಜಯಪುರ ಹೋಬಳಿ ಮಾರ್ಬಳ್ಳಿ ಗ್ರಾಮದ ಮಹದೇವಸ್ವಾಮಿ(60) ಶುಕ್ರವಾರ ನಿಧನರಾದರು. ಮೃತರು ಪತ್ನಿ, ಪುತ್ರ, ಇಬ್ಬರು ಸಹೋದರರು ಹಾಗೂ ಅಪಾರ ಬಂಧು ವರ್ಗವನ್ನು ಅಗಲಿದ್ದಾರೆ. ಇಂದು (ಶನಿವಾರ) ಮಧ್ಯಾಹ್ನ ಮಾರ್ಬಳ್ಳಿ ಗ್ರಾಮದ ಅವರ ತೋಟದಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ. ಇವರ ನಿಧನಕ್ಕೆ ಮೈಸೂರು ಜಿಲ್ಲಾ ಹಾಗೂ ತಾಲೂಕು ಮಡಿವಾಳರ ಸಂಘಟನೆಗಳು ಸಂತಾಪ ಸೂಚಿಸಿವೆ.

## ಮಂಗಳಮ್ಮ



ಬನ್ನೂರು, ಜು.20– ಇಲ್ಲಿಗೆ ಸಮೀಪದ ಗಾಣಿಗನಕೊಪ್ಪಲು ನಿವಾಸಿ ಪಾಪಣ್ಣ ಅವರ ಪತ್ನಿ ಮಂಗಳಮ್ಮ(65) ಶನಿವಾರ ಮುಂಜಾನೆ ನಿಧನರಾದರು. ಮೃತರು ಪುತ್ರಿ, ಕರ್ನಾಟಕ ರಾಜ್ಯ ರೈತ ಸಂಘದ ಜಿಲ್ಲಾಧ್ಯಕ್ಷ ಬನ್ನೂರು ನಾರಾಯಣ್ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗ್ರಾಮದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

## ರುದ್ರೇಶ್



ಸರಗೂರು, ಜು.20– ಮೈಸೂರಿನ ವೀರನಗೆರೆ ಲಷ್ಕರ್ ಮೊಹಲ್ಲಾ ನಿವಾಸಿ, ಶ್ರೀನಂದಾ ಎಲೆಕ್ಟ್ರಿಕಲ್ ಮಾಲೀಕ ರುದ್ರೇಶ್(78) ಶನಿವಾರ ಬೆಳಗ್ಗೆ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮೈಸೂರಿನ ಎಲ್‌ಐಸಿ ಸರ್ಕಲ್ ಬಳಿಯ ವೀರಶೈವ ರುದ್ರಭೂಮಿಯಲ್ಲಿ ಮಧ್ಯಾಹ್ನ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಮಿತ್ರ ಭಾನುವಾರ 21 ಜುಲೈ 2024

**ಕೆಆರ್‌ಎಸ್ ಜಲಾಶಯಕ್ಕೆ 60224 ಕ್ಯುಸೆಕ್‌ಗೂ ಅಧಿಕ ಒಳಹರಿವು; 121 ಅಡಿ ದಾಟಿದ ನೀರಿನ ಮಟ್ಟ**

# ಅಣೆಕಟ್ಟೆಯಿಂದ 17795 ಕ್ಯುಸೆಕ್ ನೀರು ಬಿಡುಗಡೆ

## ನದಿ ತಟದ 92 ಗ್ರಾಮಗಳಿಗೆ ಎಚ್ಚರಿಕೆ; ರಂಗನತಿಟ್ಟು ಪಕ್ಷಿಧಾಮದಲ್ಲಿ ದೋಣಿ ವಿಹಾರ ಸ್ಥಗಿತ



ಕೆಆರ್‌ಎಸ್ ಅಣೆಕಟ್ಟೆಯ 10 ಕ್ರಸ್ಟ್ ಗೇಟ್‌ಗಳಿಂದ ಶನಿವಾರ ಕಾವೇರಿ ನದಿಗೆ ನೀರು ಬಿಟ್ಟಿರುವುದು. ಚಿತ್ರ ಎಂ.ಎಸ್.ಲಕ್ಷ್ಮಿನಾರಾಯಣ ಯಾದವ್

ಮೈಸೂರು, ಜು.20 (ಆರ್‌ಕೆ)–ಕೊಡಗಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಮಳೆಯಾಗುತ್ತಿರುವುದರಿಂದ ಕೃಷ್ಣರಾಜ ಸಾಗರ (ಕೆಆರ್‌ಎಸ್) ಜಲಾಶಯಕ್ಕೆ ಅಪಾರ ಪ್ರಮಾಣದ ನೀರು ಹರಿದು ಬರುತ್ತಿದೆ.

ಇಂದು ಮಧ್ಯಾಹ್ನದ ವೇಳೆಗೆ ಕೆಆರ್‌ಎಸ್ ಜಲಾಶಯಕ್ಕೆ 60224 ಕ್ಯುಸೆಕ್‌ಗೂ ಅಧಿಕ ನೀರು ಹರಿದುಬರುತ್ತಿದ್ದು, ಅಣೆಕಟ್ಟೆ ಸುರಕ್ಷತೆ ದೃಷ್ಟಿಯಿಂದ 17795 ಕ್ಯುಸೆಕ್ ನೀರನ್ನು ಹೊರಬಿಡಲಾಗುತ್ತಿದೆ. ಪ್ರಸ್ತುತ ಜಲಾಶಯದ ನೀರಿನ ಮಟ್ಟ 121.40 ಅಡಿ ಇದ್ದು, ಸಂಜೆ ವೇಳೆಗೆ ಒಳ ಹರಿವಿನ ಪ್ರಮಾಣ ಹೆಚ್ಚಿದ್ದಲ್ಲಿ ಇನ್ನೂ 10000 ಕ್ಯುಸೆಕ್ ನೀರನ್ನು ಕಾವೇರಿ ನದಿಗೆ ಬಿಡಬೇಕಾಗುತ್ತಿದೆ. ಈ ಬಗ್ಗೆ ಪರಿಸ್ಥಿತಿ ಅವಲೋಕಿಸಿ ಹಿರಿಯ ಅಧಿಕಾರಿಗಳೊಂದಿಗೆ ಚರ್ಚಿಸಿದ ಬಳಿಕ ನಿರ್ಧರಿಸುತ್ತೇವೆ ಎಂದು ಕಾವೇರಿ ನೀರಾವರಿ ನಿಗಮದ ಎಕ್ಸಿಕ್ಯೂಟಿವ್ ಇಂಜಿನಿಯರ್ ಜಯಂತ್ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಇಂದು ಬೆಳಗ್ಗೆ ಅಣೆಕಟ್ಟೆಯಲ್ಲಿ 119.90 ಅಡಿ ನೀರು ಸಂಗ್ರಹವಾಗಿತ್ತು. ಗರಿಷ್ಠ ಮಟ್ಟ 124.80 ಅಡಿ ತಲುಪಲು ಕೇವಲ 4.9 ಅಡಿ ಮಾತ್ರ ಬಾಕಿ ಇತ್ತಾದರೂ, ಒಳಹರಿವಿನ ಪ್ರಮಾಣ ಹೆಚ್ಚಿದ ಹಿನ್ನೆಲೆಯಲ್ಲಿ ಸಂಜೆ ವೇಳೆಗೆ 121 ಅಡಿ ತಲುಪಿತ್ತು. ಪ್ರಸ್ತುತ ಜಲಾಶಯದಲ್ಲಿ 42.916 ಟಿಎಂಸಿ ನೀರು ಸಂಗ್ರಹವಾಗಿದೆ ಎಂದು ಅವರು ತಿಳಿಸಿದರು.

ಒಳ ಹರಿವಿನ ಪ್ರಮಾಣ ನೋಡಿಕೊಂಡು ಅಣೆಕಟ್ಟೆ ಸುರಕ್ಷತೆ ದೃಷ್ಟಿಯಿಂದ ನೀರು ಬಿಡುವುದನ್ನು ನಿರ್ಧರಿಸುತ್ತೇವೆ. ಈಗಾಗಲೇ ಕಾವೇರಿ ನದಿ ಪಾತ್ರದ ನಿವಾಸಿಗಳಿಗೆ ಮಾಹಿತಿ ನೀಡಲಾಗಿದ್ದು, ಯಾವುದೇ ಸಂದರ್ಭದಲ್ಲಿ ನೀರು ಬಿಡಬೇಕಾಗಿರುವುದರಿಂದ ಸುರಕ್ಷಿತ ಸ್ಥಳಕ್ಕೆ ತೆರಳುವಂತೆ ಟಾಂಟಾಂ ಮೂಲಕ ಎಚ್ಚರಿಕೆ ನೀಡಿದ್ದೇವೆ ಎಂದು ಜಯಂತ್ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಯಾವುದೇ ಸಂದರ್ಭದಲ್ಲಿ ಕ್ರಸ್ಟ್ ಗೇಟ್‌ಗಳ ಮೂಲಕ ನೀರು ಬಿಡುಗಡೆ ಮಾಡುವ ಹಿನ್ನೆಲೆಯಲ್ಲಿ ನದಿ ಪಾತ್ರದ ಜನ, ಜಾನುವಾರುಗಳ ಸುರಕ್ಷತೆಗಾಗಿ ಹಲವು ಕ್ರಮ ವಹಿಸಲಾಗಿದೆ. ಕಾವೇರಿ ನದಿಯಲ್ಲಿ ಪ್ರವಾಹ ಭೀತಿ ಎದುರಾಗುವ ಸಾಧ್ಯತೆ ಇರುವುದರಿಂದ ಜನ-ಜಾನುವಾರುಗಳ ರಕ್ಷಣೆ ಅತ್ಯಗತ್ಯ ಎಂದು ಅವರು ತಿಳಿಸಿದ್ದಾರೆ.

**ದೋಣಿ ವಿಹಾರ ರದ್ದು:** ಕೆಆರ್‌ಎಸ್ ಜಲಾಶಯದ ಒಳಹರಿವು ಹೆಚ್ಚಾಗಿ ಅಧಿಕ ಪ್ರಮಾಣದ ನೀರನ್ನು ಹೊರಗೆ ಬಿಡುತ್ತಿರುವುದರಿಂದ ರಂಗನತಿಟ್ಟು ಪಕ್ಷಿಧಾಮದಲ್ಲಿ ದೋಣಿ ವಿಹಾರವನ್ನು ತಾತ್ಕಾಲಿಕವಾಗಿ ರದ್ದು ಪಡಿಸಿದ್ದು, ಅಲ್ಲಿ ಕೇವಲ ವೀಕ್ಷಣೆಗೆ ಅವಕಾಶ ಕಲ್ಪಿಸಲಾಗಿದೆ ಎಂದು ಜಯಂತ್ ತಿಳಿಸಿದ್ದಾರೆ.

**ಬಣ್ಣದ ಲೈಟ್‌ಗಳಿಲ್ಲ**

ಪ್ರತೀ ವರ್ಷ ಕೆಆರ್‌ಎಸ್ ಜಲಾಶಯ ಗರಿಷ್ಠ ಮಟ್ಟದ ನೀರು ತಲುಪಿ, ಹೊರ ಹರಿವಿನ ಪ್ರಮಾಣ ಹೆಚ್ಚಾದಾಗ ಧ್ವನಿ ಮತ್ತು ಬೆಳಕು ಯೋಜನೆಯನ್ನು ಜಾರಿಗೊಳಿಸುತ್ತಿದ್ದೆವು. ಆದರೆ ಕ್ರಸ್ಟ್ ಗೇಟ್‌ಗಳ ರಿಪೇರಿಗಾಗಿ ಡ್ಯಾಂನಲ್ಲಿ ಅಳವಡಿಸಿದ್ದ ಧ್ವನಿ ಮತ್ತು ಬೆಳಕು ಕಾರ್ಯಕ್ರಮದ ಉಪಕರಣಗಳನ್ನು ತೆಗೆದಿರುವುದರಿಂದ ಸರ್ಕಾರದ ಗಮನಕ್ಕೆ ತಂದು ಮತ್ತೆ ಅಳವಡಿಸಿ ಸೌಂಡ್ ಅಂಡ್ ಲೈಟ್ ಕಾರ್ಯಕ್ರಮ ಮುಂದುವರೆಸುತ್ತೇವೆ ಎಂದು ಜಯಂತ್ ತಿಳಿಸಿದರು.

# ಚಾಲಕನಿಂದಲೇ ಲಾರಿಯ ಚಕ್ರಗಳು ಸಹಿತ ಬಿಡಿಭಾಗಗಳ ಕಳ್ಳತನ

## ಲಾರಿ ಮಾಲೀಕನಿಂದ ದೂರು


ಮೈಸೂರು, ಜು.20(ಎಸ್‌ಬಿಡಿ)– ಮೈಸೂರಿನ ಬಂಡೀಪಾಳ್ಯ ಎಪಿಎಂಸಿ ಬಳಿ ತಮಿಳುನಾಡು ನೋಂದಣಿ ಲಾರಿಯ ಎಲ್ಲಾ ಚಕ್ರಗಳು, ಇನ್ನಿತರ ಬಿಡಿ ಭಾಗಗಳನ್ನು ಕಳವು ಮಾಡಲಾಗಿದ್ದು, ಲಾರಿ ಚಾಲಕನೇ ಕಳ್ಳತನ ಮಾಡಿರುವುದಾಗಿ ಮಾಲೀಕ ದೂರು ದಾಖಲಿಸಿದ್ದಾರೆ.

ತಮಿಳುನಾಡು, ಸೇಲಂ ಜಿಲ್ಲೆ, ಶಂಕರಗಿರಿ ತಾಲೂಕಿನ ಅಕ್ಕಿ ವ್ಯಾಪಾರಿ ಎಸ್.ಮನ್ನಾಥನ್(39), ತಮ್ಮ ಅಶೋಕ ಲೈಲ್ಯಾಂಡ್(ಟಿಎನ್–52, ಜೆ–4398) ಲಾರಿಯ ಚಾಲಕ ಅಶೋಕ್ ಅಲಿಯಾಸ್ ಏಳುಮಲೈ(27) ವಿರುದ್ಧ ಮೈಸೂರು ದಕ್ಷಿಣ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದಾರೆ.

ಅಶೋಕ್ ಎಂಬ ವ್ಯಕ್ತಿ ಜೂ.18ರಂದು ನನ್ನನ್ನು ಭೇಟಿಯಾಗಿ ಲಾರಿ ಚಾಲನೆ ಕೆಲಸ ಕೇಳಿದ್ದರಿಂದ ಆತನಿಗೆ ಶಂಕರ ಘಟ್ಟದಲ್ಲಿ ಲಾರಿ ಚಾಲನೆಗೆ ಅವಕಾಶ ಮಾಡಿಕೊಟ್ಟೆ. ಪ್ರತಿದಿನ ಆತನಿಗೆ ಕರೆ ಮಾಡಿ, ವಿಚಾರಿಸುತ್ತಿದೆ. ಆದರೆ ಜು.6 ರಂದು ಮೈಸೂರು ಲಾರಿ ಅಸೋಸಿಯೇಷನಿಂದ ನನಗೆ ಕರೆ ಮಾಡಿ, ನಿಮ್ಮ ಲಾರಿ ಬಂಡೀಪಾಳ್ಯದ ಬಳಿ ನಿಂತಿದ್ದು, ಅದರ ಒಂದೂ ಚಕ್ರಗಳಿಲ್ಲ ಎಂದು ತಿಳಿಸಿದರು. ಕೂಡಲೇ ನಾನು ಚಾಲಕ ಅಶೋಕ್‌ಗೆ ಕರೆ ಮಾಡಿ ವಿಚಾರಿಸಿದಾಗ ಮೈಸೂರಿನ ಬಂಡೀಪಾಳ್ಯದ ಬಳಿ ಇದ್ದೇನೆ, ನಾಲ್ಕೈದು ದಿನಗಳಿಂದ ಯಾವುದೇ ಬಾಡಿಗೆ ಸಿಕ್ಕಿಲ್ಲ ಎಂದು ತಿಳಿಸಿದ. ಸರಿ, ವಿಡಿಯೋ ಕಾಲ್ ಮಾಡಿ, ಲಾರಿ ತೋರಿಸು ಎಂದು ಕೇಳಿದಾಕ್ಷಣ ಆತ ಮೊಬೈಲ್ ಸ್ವಿಚ್ಡ್ ಆಫ್ ಮಾಡಿದ. ನಂತರ ಎಷ್ಟು ಬಾರಿ ಪ್ರಯತ್ನಿಸಿದರೂ ಸಂಪರ್ಕಕ್ಕೆ ಸಿಗಲಿಲ್ಲ. ನಾನೇ ಮೈಸೂರಿಗೆ ಬಂದು ನೋಡಿದಾಗ ಬಂಡೀಪಾಳ್ಯ ರಿಂಗ್‌ರಸ್ತೆ ಬಳಿ ಲಾರಿ ನಿಂತಿತ್ತು. ಎಲ್ಲಾ 12 ಚಕ್ರಗಳು, ಬ್ಯಾಟರಿ, ಟಾರ್ಪಾಲ್, ಹಗ್ಗ ಹಾಗೂ ಒಂದು ಭಾಗದ ಹ್ಯಾಂಗ್ಲರ್ ಇರಲಿಲ್ಲ. ತಳದಲ್ಲಿ ಕಲ್ಲುಗಳನ್ನು ಜೋಡಿಸಿ ಡಿಸ್ಕ್ ಸಹಿತ ಚಕ್ರಗಳು ಸೇರಿದಂತೆ ಸುಮಾರು 4.89 ಲಕ್ಷ ಮೌಲ್ಯದ ವಸ್ತುಗಳನ್ನು ಚಾಲಕ ಅಶೋಕ ಕಳ್ಳತನ ಮಾಡಿದ್ದಾನೆ ಎಂದು ಲಾರಿ ಮಾಲೀಕ ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿರುವ ಮೈಸೂರು ದಕ್ಷಿಣ ಠಾಣೆ ಪೊಲೀಸರು, ಮುಂದಿನ ಕ್ರಮ ಕೈಗೊಂಡಿದ್ದಾರೆ.

# ತಾಯಿ, ಮಗುವಿನ ಭವಿಷ್ಯಕ್ಕೆ ಭಾಷ್ಯ ಬರೆದ ಹೈಕೋರ್ಟ್

**ಪೋಕ್ಸೊ ಸುಖಾಂತ್ಯ**



ಬೆಂಗಳೂರು, ಜು.20– ಮಗು ಮತ್ತು ತಾಯಿಯ ಭವಿಷ್ಯವನ್ನು ಗಮನದಲ್ಲಿಟ್ಟುಕೊಂಡು ಹಾಗೂ ಸಮಾಜದ ಅಪಕೀರ್ತಿ ತಪ್ಪಿಸಲು ಪ್ರೇಮಿಗಳನ್ನು ಒಂದಾಗಿ ಬಾಳಲು ಇತ್ತೀಚೆಗಷ್ಟೇ ಅನುಮತಿ ನೀಡಿದ್ದ ಹೈಕೋರ್ಟ್, ಯುವಕನೊಬ್ಬನ ವಿರುದ್ಧದ ಅತ್ಯಾಚಾರ ಮತ್ತು ಪೋಕ್ಸೊ ಪ್ರಕರಣವನ್ನು ರದ್ದುಪಡಿಸಿದೆ.

ನನ್ನ ವಿರುದ್ಧದ ಪೋಕ್ಸೊ ಪ್ರಕರಣ ರದ್ದುಗೊಳಿಸಬೇಕು ಎಂದು ಕೋರಿ 23 ವರ್ಷದ ಯುವಕನೊಬ್ಬ ಸಲ್ಲಿಸಿದ್ದ ಅರ್ಜಿ ವಿಲೇವಾರಿ ಮಾಡಿರುವ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ, ಜೈಲಿನಲ್ಲಿರುವ ಯುವಕನ ಬಿಡುಗಡೆಗೆ ರಿಜಿಸ್ಟ್ರಿ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಆದೇಶಿಸಿದೆ. ಅರ್ಜಿ ಇತ್ಯರ್ಥವಾಗಿದೆ ಎಂದು ಒಂದು ವೇಳೆ ಮಗು ಮತ್ತು ತಾಯಿಯನ್ನು ಮತ್ತೇನಾದರೂ ಬಿಕ್ಕಟ್ಟಿಗೆ ದೂಡಿದರೆ ಪ್ರಕರಣ ಮರು ಚಾಲನೆ ಪಡೆಯಲಿದೆ ಎಂದು ನ್ಯಾಯಪೀಠ ಯುವಕನಿಗೆ ಎಚ್ಚರಿಕೆ ನೀಡಿದೆ.

ಮದುವೆಗೂ ಮುನ್ನವೇ ಅರ್ಜಿದಾರ ಬಾಲಕಿಯ ಮೇಲೆ ಅತ್ಯಾಚಾರ ನಡೆಸಿರುವ ಪರಿಣಾಮ ಮಗು ಜನಿಸಿದೆ. ಮಗುವಿಗೆ ಏನೆಲ್ಲಾ ಘಟನೆ ನಡೆದಿದೆ ಎಂಬುದು ತಿಳಿದಿಲ್ಲ. ಪ್ರಕರಣ ಇತ್ಯರ್ಥಪಡಿಸಿ, ಅರ್ಜಿದಾರನನ್ನು ಬಿಡುಗಡೆ ಮಾಡದೇ ಇದ್ದರೆ ಮಗು ಮತ್ತು ತಾಯಿಯ ಬದುಕು ಬಿಕ್ಕಟ್ಟಿಗೆ ಸಿಲುಕುತ್ತದೆ. ಅರ್ಜಿದಾರ ಮತ್ತು ಸಂತ್ರಸ್ತೆ ವಿವಾಹವಾಗಲು ಈಗಾಗಲೇ ನ್ಯಾಯಾಲಯ ಮಧ್ಯಂತರ ಜಾಮೀನು ನೀಡಿತ್ತು. ಮದುವೆಯ ಬಳಿಕ ಅರ್ಜಿದಾರ ಜೈಲಿಗೆ ಮರಳಿದ್ದ. ಈ ಪರಿಸ್ಥಿತಿಯಲ್ಲಿ ಇಬ್ಬರ ಮಧ್ಯದ ನ್ಯಾಯಿಕ ಪ್ರಕ್ರಿಯೆ ರದ್ದುಪಡಿಸದೇ ಇದ್ದರೆ ಮಗು ಮತ್ತು ತಾಯಿಯ ಬದುಕು ಅತಂತ್ರವಾಗಲಿದೆ. ಸಮಾಜದಲ್ಲಿ ಅವರು ಅಪಖ್ಯಾತಿಗೆ ಗುರಿಯಾಗಬೇಕಾಗುತ್ತದೆ. ಇದನ್ನು ತಪ್ಪಿಸಲು ಪ್ರಕರಣವನ್ನು ರದ್ದುಪಡಿಸುವುದು ಸೂಕ್ತ ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ಪ್ರಕರಣವನ್ನು ವಾಸ್ತವ ಅಂಶಗಳ ಹಿನ್ನೆಲೆಯಲ್ಲಿ ಗಮನಿಸಿದರೆ ಮುಂದೊಂದು ದಿನ ವಿಚಾರಣೆಯಲ್ಲಿ ಸಂತ್ರಸ್ತೆಯು ನಿಸ್ಸಂಶಯವಾಗಿ ವಿರುದ್ಧವಾದ ಸಾಕ್ಷಿಯನ್ನೇ ನುಡಿಯುತ್ತಾಳೆ. ಆಗ ಅರ್ಜಿದಾರನಿಗೆ ಶಿಕ್ಷೆಯಾಗುವುದು ಅಸಾಧ್ಯವಾಗಲಿದೆ. ಹೀಗಾಗಿ ಕ್ರಿಮಿನಲ್ ಪ್ರಕ್ರಿಯೆ ಕೊನೆಯವರೆಗೂ ವೇದನೆ ತಂದೊಡ್ಡಲಿದೆ. ಇಂತಹ ಸಂಕಟವು, ಖುಲಾಸೆಯ ಸಂತೋಷಕ್ಕೆ ಮಸುಕು ಕವಿಯುವಂತೆ ಮಾಡುತ್ತದೆ ಎಂದು ನ್ಯಾಯಪೀಠ ಕಾಳಜಿ ವ್ಯಕ್ತಪಡಿಸಿದೆ.

ತಾಯಿ–ತಂದೆ ಮತ್ತು ಮಗುವಿನ ವಂಶವಾಹಿ (ಡಿಎನ್‌ಎ) ಪರೀಕ್ಷೆ ನಡೆಸಲಾಗಿದ್ದು, ಅರ್ಜಿದಾರ ಮತ್ತು ಸಂತ್ರಸ್ತೆಯೇ ಮಗುವಿನ ಪೋಷಕರು ಎಂಬುದು ರುಜುವಾತವಾಗಿದೆ ಎಂದು ಆದೇಶದಲ್ಲಿ ದಾಖಲಿಸಲಾಗಿದೆ.

ಸಂತ್ರಸ್ತೆ ಮತ್ತು ಯುವಕ ಪರಸ್ಪರ ಪ್ರೇಮಿಸುತ್ತಿದ್ದರು. ಘಟನೆ ನಡೆದ ಸಂದರ್ಭದಲ್ಲಿ ಯುವಕನಿಗೆ 21 ವರ್ಷ ಹಾಗೂ ಸಂತ್ರಸ್ತೆಗೆ 16 ವರ್ಷ 9 ತಿಂಗಳಾಗಿತ್ತು. ಸಂತ್ರಸ್ತೆಯ ತಾಯಿ ಮಗಳನ್ನು ಮದುವೆ ಮಾಡಿಕೊಡಲು ಒಪ್ಪದೇ ದೂರು ದಾಖಲಿಸಿದ್ದರು. ಈ ಸಂದರ್ಭದಲ್ಲಿ ಸಂತ್ರಸ್ತೆ ಗರ್ಭಿಣಿಯಾಗಿದ್ದರು. ಆದರೆ, ಈಗ ಎರಡೂ ಕುಟುಂಬಗಳು ಮದುವೆಗೆ ನಿಶ್ಚಯಿಸಿದ್ದು, ಅರ್ಜಿದಾರನೂ ಸಂತ್ರಸ್ತೆಯನ್ನು ಪ್ರೀತಿಸುತ್ತಿದ್ದ ಕಾರಣ ಮದುವೆಯಾಗಿದ್ದಾನೆ. ಹೀಗಾಗಿ, ಕಾನೂನು ಪ್ರಕ್ರಿಯೆ ವಜಾ ಮಾಡಬೇಕು ಎಂದು ಅರ್ಜಿಯಲ್ಲಿ ಕೋರಲಾಗಿತ್ತು. ಸಂತ್ರಸ್ತೆಯನ್ನು ವರಿಸಲು ಅರ್ಜಿದಾರನಿಗೆ ಹೈಕೋರ್ಟ್ ಮಧ್ಯಂತರ ಜಾಮೀನು ನೀಡಿತ್ತು. 2024ರ ಜೂನ್ 21ರಂದು ಮದುವೆ ನೆರವೇರಿತ್ತು.

ಇದಕ್ಕೂ ಮುನ್ನ ಆರೋಪಿ ಯುವಕ ನನ್ನ ಮಗಳನ್ನು ನಿರ್ಜನ ಪ್ರದೇಶಕ್ಕೆ ಕರೆದೊಯ್ದು ಆಕೆಯ ಮೇಲೆ ಅತ್ಯಾಚಾರ ಎಸಗಿದ್ದಾನೆ ಎಂದು ಸಂತ್ರಸ್ತೆಯ ತಾಯಿ 2023ರ ಫೆಬ್ರುವರಿ 15ರಂದು ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು.

ದೂರು ಆಧರಿಸಿ ಪೊಲೀಸರು ಯುವಕನ ವಿರುದ್ಧ ಪೋಕ್ಸೊ (ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ) ಕಾಯ್ದೆ–2012ರ ಕಲಂ 5 (ಎಲ್), 5 (ಜೆ)(II), 6 ಹಾಗೂ ಭಾರತೀಯ ದಂಡ ಸಂಹಿತೆ-1860ರ (ಐಪಿಸಿ) ಕಲಂ 376(2)(ಎನ್), 506ರ ಅಡಿಯಲ್ಲಿ ಎಫ್‌ಐಆರ್ ದಾಖಲಿಸಿದ್ದರು. 2023ರ ಫೆ 16ರಂದೇ ಯುವಕನನ್ನು ಬಂಧಿಸಲಾಗಿತ್ತು.

## ರೇಣುಕಾಸ್ವಾಮಿ ಕೊಲೆ ಪ್ರಕರಣ: ಆರೋಪಿ ರಘು ತಾಯಿ ನಿಧನ




ಚಿತ್ರದುರ್ಗ, ಜು.20– ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಬಂಧನಕ್ಕೊಳಗಾಗಿರುವ ನಟ ದರ್ಶನ್ ಗ್ಯಾಂಗ್‌ನ ನಾಲ್ಕನೇ ಆರೋಪಿ ರಾಘವೇಂದ್ರ ಅವರ ತಾಯಿ ನಿಧನರಾಗಿದ್ದಾರೆ. ರಾಘವೇಂದ್ರ ಅಲಿಯಾಸ್ ರಘು ತಾಯಿ ಮಂಜುಳಮ್ಮ (75) ಇಂದು ಬೆಳಗ್ಗೆ ಕೊನೆಯುಸಿರೆಳೆದಿದ್ದಾರೆ. ಮಾನಸಿಕ ಅಸ್ವಸ್ಥತೆ, ವಯೋಸಹಜ ಕಾಯಿಲೆ ಯಿಂದ ರಾಘವೇಂದ್ರನ ತಾಯಿ ಕೋಳಿ ಬುರುಜನಹಟ್ಟಿ ಮನೆಯಲ್ಲಿ ಇಂದು ಮುಂಜಾನೆ 5 ಗಂಟೆ ಸುಮಾರಿಗೆ ನಿಧನರಾಗಿದ್ದಾರೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ರಾಘವೇಂದ್ರ ಚಿತ್ರದುರ್ಗ ದರ್ಶನ್ ಅಭಿಮಾನಿಗಳ ಸಂಘದ ಅಧ್ಯಕ್ಷನಾಗಿದ್ದ. ಸದ್ಯ ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ನ್ಯಾಯಾಂಗ ಬಂಧನದಲ್ಲಿದ್ದಾನೆ. ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ದರ್ಶನ್, ಪವಿತ್ರಾ ಗೌಡ ಸೇರಿದಂತೆ 17 ಆರೋಪಿಗಳನ್ನು ಬಂಧಿಸಲಾಗಿದೆ.

## ಜೆಎಸ್‌ಎಸ್ ಮಹಿಳಾ ಪಾಲಿಟೆಕ್ನಿಕ್; ಡಿಪ್ಲೊಮಾ ಪ್ರವೇಶಕ್ಕೆ ದಿನಾಂಕ ವಿಸ್ತರಣೆ

ಮೈಸೂರು,ಜು.20–ಜೆಎಸ್‌ಎಸ್ ಮಹಿಳಾ ಪಾಲಿಟೆಕ್ನಿಕ್‌ನಲ್ಲಿ 2024–25ನೇ ಸಾಲಿನಲ್ಲಿ ಸರ್ಕಾರಿ ಕೋಟಾ ದಡಿ ಖಾಲಿ ಉಳಿದಿರುವ ಪ್ರಥಮ ಸೆಮಿಸ್ಟರ್ ಡಿಪ್ಲೊಮಾ ಕೋರ್ಸುಗಳಿಗೆ ಮತ್ತು ಐಟಿಐ, ಪಿಯುಸಿ(ಸೈನ್ಸ್)ನಲ್ಲಿ ಪಾಸಾದ ವಿದ್ಯಾರ್ಥಿನಿಯರು ಡಿಪ್ಲೊಮಾ 3ನೇ ಸೆಮಿಸ್ಟರ್ ಕೋರ್ಸು ಗಳಿಗೆ ಪ್ರವೇಶ ಪಡೆಯಲು ಜು.25 ರವರೆಗೆ ವಿಸ್ತರಿಸಲಾಗಿದೆ. ಎಸ್‌ಎಸ್ ಎಲ್‌ಸಿ ಅಥವಾ ತತ್ಸಮಾನ ಪರೀಕ್ಷೆ ಯಲ್ಲಿ ಶೇ.35 ಅಂಕಗಳೊಂದಿಗೆ ಪಾಸಾದ ವಿದ್ಯಾರ್ಥಿನಿಯರು ಮೊದಲನೇ ವರ್ಷಕ್ಕೆ ಪ್ರವೇಶ ಪಡೆಯ ಬಹುದು. ಐಟಿಐ, ಪಿಯುಸಿ(ಸೈನ್ಸ್) ಪರೀಕ್ಷೆಯಲ್ಲಿ ಶೇ.35 ಅಂಕಗಳೊಂದಿಗೆ ಪಾಸಾದ ವಿದ್ಯಾರ್ಥಿನಿಯರು 2ನೇ ವರ್ಷಕ್ಕೆ ಪ್ರವೇಶ ಪಡೆಯ ಬಹುದು. ವಿವರಗಳಿಗೆ ಮೊ.ನಂ. 9591650765, 8050216873 ಅನ್ನು ಸಂಪರ್ಕಿಸಬಹುದು.

## ಅಭಿನಂದನೆ



ನೂತನ ವಿಧಾನ ಪರಿಷತ್ ಸದಸ್ಯರಾದ ಕೆ.ವಿವೇಕಾನಂದ ಅವರ ಹುಟ್ಟುಹಬ್ಬದ ಅಂಗವಾಗಿ ಅವರನ್ನು ಜೆಡಿಎಸ್ ರಾಜ್ಯ ವಕ್ತಾರ ರವಿಚಂದ್ರೇಗೌಡ, ಮುಖಂಡ ಸಾ.ರಾ.ಶೈಲೇಶ್ ಅಭಿನಂದಿಸಿದರು.

# ವಿದ್ವಾನ್ ಕೀರ್ತನ್‌ಹೊಳ್ಳ ಗಾಯನಕ್ಕೆ ಮಂತ್ರಮುಗ್ಧರಾದ ಶ್ರೋತೃ ವರ್ಗ

## ಇನ್ಫೋಸಿಸ್ ಪ್ರತಿಷ್ಠಾನ, ಭಾರತೀಯ ವಿದ್ಯಾಭವನ ಜಂಟಿ ಆಶ್ರಯದಲ್ಲಿ ಶಾಸ್ತ್ರೀಯ ಸಂಗೀತ ಕಛೇರಿ






ಮೈಸೂರಿನ ವಿಜಯನಗರ 1ನೇ ಹಂತದಲ್ಲಿರುವ ಬಿವಿಬಿ ಮೈಸೂರು ಕೇಂದ್ರದ ಸಭಾಂಗಣದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಸಂಗೀತ ಕಾರ್ಯಕ್ರಮದಲ್ಲಿ ವಿದ್ವಾನ್ ಕೀರ್ತನ್‌ಹೊಳ್ಳ ಗಾಯನ ಪ್ರಸ್ತುತಪಡಿಸಿದರು. ಪಕ್ಕವಾದ್ಯದಲ್ಲಿ ಕೌಶಿಕ್ ಭಟ್, ತೇಜಸ್ ಕಾಟೋಟಿ ಹಾಗೂ ಗಗನ್ ಉಮೇಶ್ ಬಡಿಗರ್ ಸಹಕಾರ ನೀಡಿದರು. ಮತ್ತೊಂದು ಚಿತ್ರದಲ್ಲಿ ಕಾರ್ಯಕ್ರಮದ ಉದ್ಘಾಟನೆ ನೇರವೇರಿಸುತ್ತಿರುವುದನ್ನು ಕಾಣಬಹುದು. (ಎಡದಿಂದ) ಬಿವಿಬಿ ಶಾಲೆಯ ಪ್ರಾಂಶುಪಾಲರಾದ ಲೇಖಾ ನಾಯರ್, ಗಾಯಕ ಕೀರ್ತನ್‌ಹೊಳ್ಳ, ಬಿವಿಬಿ ಮೈಸೂರು ಕೇಂದ್ರದ ಕಾರ್ಯದರ್ಶಿ ಪಿ.ಎಸ್.ಗಣಪತಿ, ಉಪಾಧ್ಯಕ್ಷ ಪ್ರೊ.ಸಿ.ನಾಗಣ್ಣ, ಖಜಾಂಚಿ ಎ.ಟಿ.ಭಾಷ್ಯಂ, ಕಾರ್ಯಕಾರಿ ಸಮಿತಿ ಸದಸ್ಯರಾದ ಡಾ.ಪಿ.ಕೆ.ನಾಗಲಕ್ಷ್ಮೀ, ಟಿ.ಎಸ್.ಗಂಗಾಧರ್ ಅವರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು,ಜು.20(ಪಿಎಂ)– ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಮತ್ತು ಭಕ್ತಿ ಸಂಗೀತದ ಗಾನ ಸುಧೆಯನ್ನು ಸುಶ್ರಾವ್ಯವಾಗಿ ತಮ್ಮ ಕಂಚಿನ ಕಂಠದಲ್ಲಿ ಸಾದರಪಡಿಸಿದ ಗಾಯಕ ವಿದ್ವಾನ್ ಕೀರ್ತನ್‌ಹೊಳ್ಳ ಶ್ರೋತೃಗಳನ್ನು ಮಂತ್ರಮುಗ್ಧಗೊಳಿಸಿ, ಭಕ್ತಿಭಾವ ಮೂಡಿಸಿದರು.

ಮೈಸೂರಿನ ವಿಜಯನಗರದ 1ನೇ ಹಂತದಲ್ಲಿರುವ ಭಾರತೀಯ ವಿದ್ಯಾಭವನದ (ಬಿವಿಬಿ) ಪ್ರೊ.ವೈ.ಟಿ.ತಾತಾಚಾರಿ ಸಭಾಂಗಣದಲ್ಲಿ ಇನ್ಫೋಸಿಸ್ ಪ್ರತಿಷ್ಠಾನ ಮತ್ತು ಭಾರತೀಯ ವಿದ್ಯಾಭವನ (ಬಿವಿಬಿ) ಬೆಂಗಳೂರು–ಮೈಸೂರು ಕೇಂದ್ರಗಳ ಜಂಟಿ ಆಶ್ರಯದಲ್ಲಿ 'ಭಕ್ತಿ ಸುಧಾ' ಶೀರ್ಷಿಕೆಯಡಿ ಶನಿವಾರ ಹಮ್ಮಿಕೊಂಡಿದ್ದ 131ನೇ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಸಂಗೀತ ಕಛೇರಿ ನೀಡಿದ ಅವರು, ಸಭಿಕರು ಭಕ್ತಿ ಸುಧೆಯಲ್ಲಿ ತೇಲುವಂತೆ ಮಾಡಿದರು.

ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತದ 'ಹರಿ ಕೇ ಚರಣ್ ಕಮಲ್...' ಗೀತೆಯೊಂದಿಗೆ ತಮ್ಮ ಸಂಗೀತ ಕಛೇರಿ ಆರಂಭಿಸಿ, ಕಛೇರಿಯುದ್ದಕ್ಕೂ ತಮ್ಮ ಗಾಯನಕ್ಕೆ ತಕ್ಕಂತೆ ಹಾವಭಾವದೊಂದಿಗೆ ಸಭಿಕರ ಮನ ಸೆಳೆದರು. ಬಳಿಕ ವ್ಯಾಸರಾಯರ ರಚನೆಯ 'ಗಜಮುಖನೇ ಸಿದ್ಧಿದಾಯಕನೇ ವಂದಿಪೆ ಶರಣು...' ಗೀತೆ ಪ್ರಸ್ತುತಪಡಿಸುವ ಮೂಲಕ ದಾಸ ಸಾಹಿತ್ಯದಲ್ಲಿರುವ ಭಕ್ತಿಯ ವೈಭವವನ್ನು ಅನಾವರಣಗೊಳಿಸಿದರು.

ಪುರಂದರದಾಸರ ರಚನೆಯ 'ಅಂಜಿಕಿನ್ನಾತಕಯ್ಯ ಸಜ್ಜನರಿಗೆ... ಭಯವು ಇನ್ನಾತಕಯ್ಯ...' ಗೀತೆಯನ್ನು ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತದ ಜೌನಪುರಿ ರಾಗದಲ್ಲಿ ಸಾದರಪಡಿಸಿ, ಪರಂದರ ದಾಸರ ದೈವ ಭಕ್ತಿಯ ಪರಾಕಾಷ್ಠೆ ಅನಾವರಣಗೊಳಿಸಿ, ಸಭಿಕರಲ್ಲಿಯೂ ಭಕ್ತಿಭಾವ ಮೂಡಿಸಿದರು. ಪುರಂದರದಾಸರ ಮತ್ತೊಂದು ರಚನೆಯ 'ಕರುಣಿಸೋ ರಂಗ ಕರುಣಿಸೋ ಕೃಷ್ಣ...' ಗೀತೆಯನ್ನು ಭೈರವಿ ರಾಗದಲ್ಲಿ ಪ್ರಸ್ತುತಪಡಿಸಿ, ಭಕ್ತಿಯ ಸಿಂಚನ ಮೂಡಿಸಿದರು. ಬಳಿಕ ಪುರಂದರದಾಸರದ್ದೇ ಇನ್ನೊಂದು ಗೀತೆ 'ದೇವ ಬಂದ ನಮ್ಮ ಸ್ವಾಮಿ ಬಂದನೋ...' ಹಾಡಿನೊಂದಿಗೆ ಸಭಿಕರು ಭಕ್ತಿ ಸುಧೆಯಲ್ಲಿ ತೇಲುವಂತೆ ಮಾಡಿದರು.

ಪಕ್ಕವಾದ್ಯದಲ್ಲಿ ಕೌಶಿಕ್ ಭಟ್ (ತಬಲ), ತೇಜಸ್ ಕಾಟೋಟಿ (ಹಾರ್ಮೋನಿಯಂ) ಹಾಗೂ ಗಗನ್ ಉಮೇಶ್ ಬಡಿಗರ್ (ತಾಳ) ಸಹಕಾರ ನೀಡಿದರು. ಇದಕ್ಕೂ ಮುನ್ನ ಬಿವಿಬಿ ಮೈಸೂರು ಕೇಂದ್ರದ ಉಪಾಧ್ಯಕ್ಷ ಪ್ರೊ.ಸಿ.ನಾಗಣ್ಣ ಕಾರ್ಯಕ್ರಮ ಉದ್ಘಾಟಿಸಿದರು. ಬಿವಿಬಿ ಮೈಸೂರು ಕೇಂದ್ರದ ಕಾರ್ಯದರ್ಶಿ ಪಿ.ಎಸ್.ಗಣಪತಿ, ಖಜಾಂಚಿ ಎ.ಟಿ.ಭಾಷ್ಯಂ, ಕಾರ್ಯಕಾರಿ ಸಮಿತಿ ಸದಸ್ಯರಾದ ಟಿ.ಎಸ್.ಗಂಗಾಧರ್, ಡಾ.ಪಿ.ಕೆ.ನಾಗಲಕ್ಷ್ಮೀ, ಆಡಳಿತಾಧಿಕಾರಿ ಎಸ್.ಆರ್.ರವಿಕುಮಾರ್, ಬಿವಿಬಿ ಶಾಲೆಯ ಪ್ರಾಂಶುಪಾಲರಾದ ಲೇಖಾ ನಾಯರ್ ಮತ್ತಿತರರು ಹಾಜರಿದ್ದರು.

## ಮೈಸೂರು ಚಿತ್ರಮಂದಿರಗಳಲ್ಲಿ

| | |
|---|---|
| **ಪದ್ಮ ಚಿತ್ರಮಂದಿರ** | (ದೂ: 2521923) |
| ಇಂಡಿಯನ್ 2 (ತ) | 4 ಪ್ರದರ್ಶನಗಳು |
| **ವುಡ್‌ಲ್ಯಾಂಡ್ಸ್ ಚಿತ್ರಮಂದಿರ** | (ದೂ: 2422871) |
| ಮಹಾರಾಜ (ತ) | 4 ಪ್ರದರ್ಶನಗಳು |
| **ಬಾಲಾಜಿ ಚಿತ್ರಮಂದಿರ** | (ದೂ: 2497199) |
| ಕಿಲ್ (ಹಿಂ) | 4 ಪ್ರದರ್ಶನಗಳು |
| **ಮಹದೇಶ್ವರ ಚಿತ್ರಮಂದಿರ** | (ಮೊ:9900820093) |
| ನಾಟ್‌ಔಟ್ (ಕ) | 4 ಪ್ರದರ್ಶನಗಳು |
| **ಗಾಯಿತ್ರಿ** | |
| ಕಲ್ಕಿ (ಕ) | 4 ಪ್ರದರ್ಶನಗಳು |
| **ರಾಜಕಮಲ್** | |
| ಟ್ವಿಸ್ಟರ್ (ಇಂ) | 4 ಪ್ರದರ್ಶನಗಳು |
| **ಸಂಗಂ** | |
| ಹೆಜ್ಜಾರು (ಕ) | 2 ಪ್ರದರ್ಶನಗಳು |
| ಇಂಡಿಯನ್ 2 (ತ) | 2 ಪ್ರದರ್ಶನಗಳು |
| **ಲಿಡೋ** | |
| ಶಾಸ್ತ್ರಿ (ಕ) | 4 ಪ್ರದರ್ಶನಗಳು |
| **ತಿಬ್ಬಾದೇವಿ** | |
| ಇಂಡಿಯನ್ 2 (ತ) | 4 ಪ್ರದರ್ಶನಗಳು |
| **ಪ್ರಭಾ** | |
| ನಾಟ್‌ಔಟ್ (ಕ) | 2 ಪ್ರದರ್ಶನಗಳು |
| ಹಿರಣ್ಯ (ಕ) | 2 ಪ್ರದರ್ಶನಗಳು |

**ಡಿಆರ್‌ಸಿ ಸಿನಿಮಾಸ್** ದೂ : 4240422/4241800

| | |
|---|---|
| ಸ್ಕ್ರೀನ್ 1 | ಬ್ಯಾಡ್ ನ್ಯೂಸ್ (ಹಿಂ): ಬೆ.10.10ಕ್ಕೆ, ಮ.1ಕ್ಕೆ, ಆಕ್ಸಿಡೆಂಟ್ ಆರ್ ಕಾನ್ಸ್‌ಪಿರೆಸಿ ಗೋದ್ರಾ (ಹಿಂ): ಮ.3.45ಕ್ಕೆ, ಸಂ.4.35ಕ್ಕೆ, ಕಲ್ಕಿ 2898 ಎಡಿ (ಕ): ಸಂ.6.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.10ಕ್ಕೆ |
| ಸ್ಕ್ರೀನ್ 2 | ಟ್ವಿಸ್ಟರ್ಸ್ (ಇಂ): ಬೆ.10.30ಕ್ಕೆ, ಹೆಜ್ಜಾರು (ಕ): ಮ.1.10ಕ್ಕೆ, ಕಲ್ಕಿ 2898 ಎಡಿ(3ಡಿ) (ತೆ): ಮ.3.40ಕ್ಕೆ, ಆಕ್ಸಿಡೆಂಟ್ ಆರ್ ಕಾನ್ಸ್‌ಪಿರೆಸಿ ಗೋದ್ರಾ (ಹಿಂ): ರಾ.7.05ಕ್ಕೆ, ಕಲ್ಕಿ 2898 ಎಡಿ(3ಡಿ) (ಹಿಂ): ರಾ.10.05ಕ್ಕೆ. |
| ಸ್ಕ್ರೀನ್ 3 | ನಾಟ್‌ಔಟ್ 2024 (ಕ): ಬೆ.10.15ಕ್ಕೆ, ಕಲ್ಕಿ 2898 ಎಡಿ (ಕ): ಮ.1ಕ್ಕೆ, ಬ್ಯಾಡ್ ನ್ಯೂಸ್ (ಹಿಂ): ಸಂ.4.30ಕ್ಕೆ, ಟ್ವಿಸ್ಟರ್ಸ್ (ಇಂ): ರಾ.7.25ಕ್ಕೆ, ರಾ.10ಕ್ಕೆ. |
| ಸ್ಕ್ರೀನ್ 4 | ಇನ್‌ಸೈಡ್ ಔಟ್ 2 (3ಡಿ) (ಇಂ): ಬೆ.10.55ಕ್ಕೆ, ಬ್ಯಾಕ್ ಬೆಂಚರ್ಸ್ (ಕ): ಮ.1ಕ್ಕೆ, ಇಂಡಿಯನ್ 2 (ತ): ಮ.3.30ಕ್ಕೆ, ಬ್ಯಾಡ್ ನ್ಯೂಸ್ (ಹಿಂ): ರಾ.7ಕ್ಕೆ, ರಾ.9.55ಕ್ಕೆ. |

**ಐನಾಕ್ಸ್ ಮೂವೀಸ್** INOX LIVE THE MOVIE ದೂ : 2533444 / 2433456

| | |
|---|---|
| ಸ್ಕ್ರೀನ್ 1 | ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ. |
| ಸ್ಕ್ರೀನ್ 2 | ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ. |
| ಸ್ಕ್ರೀನ್ 3 | ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ. |
| ಸ್ಕ್ರೀನ್ 4 | ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ. |

**ಮೈಸೂರು ವಿಷನ್ ಸಿನಿಮಾ** ದೂ : 0821–2973519

| | |
|---|---|
| ಸ್ಕ್ರೀನ್ 1 | ಕಲ್ಕಿ 2898 ಎಡಿ (ಕ): ಬೆ.10.30ಕ್ಕೆ, ಸಂ.6ಕ್ಕೆ, ಲವ್ ಲಿ (ಕ): ಮ.1.55ಕ್ಕೆ. |
| ಸ್ಕ್ರೀನ್ 2 | ಇಂಡಿಯನ್ 2 (ತ): ಮ.1ಕ್ಕೆ, ಸಂ.4.25ಕ್ಕೆ, ರಾ.7.50ಕ್ಕೆ. |
| ಸ್ಕ್ರೀನ್ 3 | ಕಲ್ಕಿ 2898 ಎಡಿ (3ಡಿ)(ತೆ): ಬೆ.11.10ಕ್ಕೆ, ಮ.2.40ಕ್ಕೆ, ಇಂಡಿಯನ್ 2 (ತ): ಸಂ.6.05ಕ್ಕೆ, ರಾ.9.30ಕ್ಕೆ. |
| ಸ್ಕ್ರೀನ್ 4 | ಇಂಡಿಯನ್ 2 (ತ): ಬೆ.10ಕ್ಕೆ, ಕಲ್ಕಿ 2898 ಎಡಿ (ಕ): ಮ.1.25ಕ್ಕೆ, ರಾ.7.45ಕ್ಕೆ, ಖಾಲಿ ಕುಡುಕರು (ಕ): ಸಂ.4.50ಕ್ಕೆ. |

**ಪಿವಿಆರ್ ಸಿನಿಮಾಸ್** ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

## ಶೂಟಿಂಗ್ ಸ್ಪರ್ಧೆಯಲ್ಲಿ ಮೈಸೂರಿನ ಶೂಟರ್‌ಗಳ ಸಾಧನೆ




ಮೈಸೂರು, ಜು.20–ಬೆಂಗಳೂರಿನಲ್ಲಿ ನಡೆಯುತ್ತಿರುವ ರಾಜ್ಯ ಮಟ್ಟದ 12ನೇ ಶೂಟಿಂಗ್ ಸ್ಪರ್ಧೆಯಲ್ಲಿ ಮೈಸೂರಿನ ಬನ್ನಿ ಮಂಟಪದಲ್ಲಿರುವ ಮೈಸೂರು ಶೂಟಿಂಗ್ ಕ್ಲಬ್‌ನ ಶೂಟರ್‌ಗಳು ಗೆಲುವು ಸಾಧಿಸಿ ದಕ್ಷಿಣ ವಲಯಕ್ಕೆ ಅರ್ಹತೆ ಪಡೆದಿದ್ದಾರೆ.

9ನೇ ತರಗತಿಯ ತನ್ವಿ ಚಂದ್ರ ಮತ್ತು 10ನೇ ತರಗತಿಯ ನಂದಿತಾ ಚಂದ್ರ, 12ನೇ ತರಗತಿಯ ವರ್ಷಿನಿ ಪಿ. ಅವರು .177–10 ಮೀಟರ್, .22, 3ಪಿನಲ್ಲಿ ಗೆಲುವು ಸಾಧಿಸಿದರು.

ಕಾವ್ಯ ಮತ್ತು ಪುಣ್ಯ ಎಂ.ಎಸ್. ಅವರು .177–10 ಮೀಟರ್ ಮತ್ತು .22–50 ಮೀಟರ್‌ನಲ್ಲಿ ಗೆಲುವು ಸಾಧಿಸಿದರೆ, ಚೇತನಾ ಜಾಬು ಲಕ್ಷ್ಮಿ ಅವರು .22–50 ಮೀಟರ್‌ನಲ್ಲಿ ಗೆಲುವು ಸಾಧಿಸಿದರು. ಪಾರಾ .22–50 ಮೀಟರ್‌ನಲ್ಲಿ ಬಿ.ಆರ್.ದರ್ಶನ್ ಕುಮಾರ್ ಗೆಲುವು ಸಾಧಿಸಿ ಪದಕ ಪಡೆದು ದಕ್ಷಿಣ ವಲಯಕ್ಕೆ ಅರ್ಹತೆ ಪಡೆದರು.

ಪದಕ ವಿಜೇತ ಶೂಟರ್‌ಗಳು ಹುಬ್ಬಳ್ಳಿಯ ಕೋಚ್ ರವಿಚಂದ್ರ ಬಾಳೆ ಹೊಸೂರು ಮತ್ತು ಕ್ಲಬ್‌ನ ಕೋಚ್ ರಾಷ್ಟ್ರೀಯ ಮಟ್ಟದ ಪಾರಾ ಶೂಟರ್ ಬಿ.ಆರ್. ದರ್ಶನ್ ಕುಮಾರ್ ಅವರಿಂದ ತರಬೇತಿ ಪಡೆದಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

**ಕೆಆರ್‌ಎಸ್ ನೀರಿನ ಮಟ್ಟ**



| | |
|---|---|
| ಗರಿಷ್ಠ ಮಟ್ಟ | 124.80 ಅಡಿ |
| ಶನಿವಾರ | 121.40 ಅಡಿ |
| ಒಳಹರಿವು | 60224 ಕ್ಯೂಸೆಕ್ |
| ಹೊರಹರಿವು | 17795 ಕ್ಯೂಸೆಕ್ |

**ಕಬಿನಿ ನೀರಿನ ಮಟ್ಟ**



| | |
|---|---|
| ಗರಿಷ್ಠ ಮಟ್ಟ | 2284 ಅಡಿ |
| ಶನಿವಾರ | 2280.90 ಅಡಿ |
| ಒಳಹರಿವು | 36914 ಕ್ಯೂಸೆಕ್ |
| ಹೊರಹರಿವು | 33000 ಕ್ಯೂಸೆಕ್ |

**ಹಾರಂಗಿ ನೀರಿನ ಮಟ್ಟ**



| | |
|---|---|
| ಗರಿಷ್ಠ ಮಟ್ಟ | 2859 ಅಡಿ |
| ಶನಿವಾರ | 2853.75 ಅಡಿ |
| ಒಳಹರಿವು | 16560 ಕ್ಯೂಸೆಕ್ |
| ಹೊರಹರಿವು | 17291 ಕ್ಯೂಸೆಕ್ |

ಹಸಿರು ನಮ್ಮ ಉಸಿರು

## MASJID-E-MUBEEN
N.R. Mohalla, Mysore - 570 007

### ಪತ್ರಿಕಾ ಪ್ರಕಟಣೆ

**ವಿಷಯ: ಎಸ್.ಎಸ್.ಎಲ್.ಸಿ ಮತ್ತು ಪಿಯುಸಿ ತೇರ್ಗಡೆ ಹೊಂದಿರುವ ವಿದ್ಯಾರ್ಥಿಗಳ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ**

ಕಳೆದ 2023–2024 ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ ಮತ್ತು ಪಿಯುಸಿ ಯಲ್ಲಿ ಶೇ 90% & 85% ಕ್ಕಿಂತ ಹೆಚ್ಚಿನ ಅಂಕಗಳನ್ನು ಪಡೆದಿರುವ ಎನ್.ಆರ್ ಮೊಹಲ್ಲಾ ವ್ಯಾಪ್ತಿಯ ಎಲ್ಲಾ ಮುಸ್ಲಿಮ್, ಹಿಂದೂ ಮತ್ತು ಕ್ರಿಶ್ಚಿಯನ್ ವರ್ಗದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರಕ್ಕಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಇದಕ್ಕೆ ಸಂಬಂಧಪಟ್ಟ ಅಂಕಪಟ್ಟಿ ಹೆಸರು ಮತ್ತು ವಿಳಾಸ ಸೂಚಿಸುವ ಐಡಿ ಪುರಾವೆಯ ನಕಲು ಪ್ರತಿಗಳನ್ನು ಅರ್ಜಿಯ ಜೊತೆ ಲಗತ್ತಿಸಿ, ಲಿಖಿತ ರೂಪದ ಅರ್ಜಿಯನ್ನು ಕಾರ್ಯದರ್ಶಿಗಳು, ಮುಬೀನ್ ಮಸೀದಿ, ಎನ್.ಆರ್ ಮೊಹಲ್ಲಾ ರವರಿಗೆ ದಿನಾಂಕ 04/08/2024 ರೊಳಗಾಗಿ ಸಲ್ಲಿಸಲು ಕೋರಲಾಗಿದೆ. ಅರ್ಜಿಯಲ್ಲಿ ಫೋನ್ ನಂಬರ್ ಖಡ್ಡಾಯವಾಗಿ ನಮೂದಿಸಬೇಕು. ಸಂಪರ್ಕಿಸಲು: 9663394372, 9448342503 ಮತ್ತು 9972198935.

ದಿನಾಂಕ: 20.7.2024,
ಸ್ಥಳ: ಮೈಸೂರು

ಸಹಿ/– ಕಾರ್ಯದರ್ಶಿ
MASJID-E-MUBEEN
N.R. Mohalla, Mysore - 570 007

## ಶ್ರೀ ಕಾಳಿಕಾಂಬ ಕಮಠೇಶ್ವರಸ್ವಾಮಿ ದೇವಸ್ಥಾನ, ಮೈಸೂರು

ಲೋಕ ಕಲ್ಯಾಣಾರ್ಥವಾಗಿ ನಡೆಸುವ 39ನೇ ವರ್ಷದ
ಶ್ರೀ ಗಿರಿಜಾಕಲ್ಯಾಣ ಮಹೋತ್ಸವ ಆಹ್ವಾನ ಪತ್ರಿಕೆ
ದಿನಾಂಕ 27–07–2024 ರಿಂದ 30–07–2024ರ ವರೆಗೆ




ಅಧ್ಯಕ್ಷರು: ಶ್ರೀ ಎಂ.ಆರ್. ರಾಜಾರಾಮ್ ಎಂ.ಬಿ.ಎ., ✆ : 98459 79797

| ಉಪಾಧ್ಯಕ್ಷರು | ಕಾರ್ಯದರ್ಶಿ | ಸಹಕಾರ್ಯದರ್ಶಿ | ಖಜಾಂಚಿ |
|---|---|---|---|
| ಶ್ರೀ ಎಸ್.ಎನ್. ಕೇಶವಮೂರ್ತಿ ಬಿ.ಕಾಂ., | ಶ್ರೀ ಎನ್. ಕುಮಾರ್ ಡಿ.ಎಂ.ಇ., | ಶ್ರೀ ವಿ. ವಸಂತಕುಮಾರ್ | ಶ್ರೀ ಎಂ. ವಾಸು ಬಿ.ಇ., |
| ✆ : 93435 27921 | ✆ : 99006 65995 | ✆ : 87622 05235 | ✆ : 89708 34353 |

ಸದಸ್ಯರುಗಳು
ಶ್ರೀ ಎಂ.ವಿ. ವರದರಾಜು, ಶ್ರೀ ಕೆ. ನಾಗಭೂಷಣ್, ಶ್ರೀ ಕೆ. ನಾಗರಾಜು, ಶ್ರೀ ಎನ್. ಮಹೇಶ್,
ಶ್ರೀ ವಿ. ರಾಮಕೃಷ್ಣಾಚಾರ್, ಶ್ರೀ ಎಂ. ಪುಟ್ಟಸ್ವಾಮಾಚಾರ್, ಶ್ರೀ ಅರುಣ್‌ಕುಮಾರ್, ಶ್ರೀಮತಿ ಬಿ. ಶ್ಯಾಮಲರಾಜ್, ಶ್ರೀಮತಿ ಸಿ. ಪುಷ್ಪ

ಶ್ರೀ ವಿಶ್ವಕರ್ಮ ಕುಟುಂಬದವರಿಗೆಲ್ಲರಿಗೂ ಮತ್ತು ಭಕ್ತಾದಿಗಳಿಗೂ ಆತ್ಮೀಯ ಸುಸ್ವಾಗತ





## ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ (ರಿ.)

### ಜಿಲ್ಲಾ ಘಟಕದ 2024 ರಿಂದ 2029 ರ ಸಾಲಿಗೆ ನಡೆಯುವ ಚುನಾವಣೆ



ದಿನಾಂಕ 21-07-2024 ಭಾನುವಾರ ನಡೆಯುವ ಚುನಾವಣೆಯಲ್ಲಿ ತಮ್ಮ ಅಮೂಲ್ಯವಾದ ಮತವನ್ನು ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿರುವ
**ಶ್ರೀಯುತ "ವರುಣಾಮಹೇಶ್" ರವರ ತಂಡದವರಿಗೆ**
ತಮ್ಮ ಅಮೂಲ್ಯವಾದ ಮತವನ್ನು ನೀಡಿ ಜಯಶೀಲರನ್ನಾಗಿ ಮಾಡಬೇಕಾಗಿ ತಮ್ಮಲ್ಲಿ ಸವಿನಯ ಪ್ರಾರ್ಥನೆ.

ಕ್ರ.ಸಂ **3**

ಅಧ್ಯಕ್ಷರ ಸ್ಥಾನಕ್ಕೆ
# ವರುಣಾಮಹೇಶ್



### ಕಾರ್ಯಕಾರಿ ಸಮಿತಿ ಪುರುಷ ಅಭ್ಯರ್ಥಿಗಳು

| ಕ್ರ.ಸಂ. | ಅಭ್ಯರ್ಥಿಗಳ ಹೆಸರು |
|---|---|
| 1 | ಆನಂದ ಸಿ.ಎಸ್. ಚಿಕ್ಕಾಡನಹಳ್ಳಿ ಹುಣಸೂರು ತಾ\|\| |
| 2 | ಕುಮಾರ ಪಿ.ಎಂ. ಪಿರಿಯಾಪಟ್ಟಣ ತಾ\|\| |
| 3 | ಕೆಂಪರಾಜು ಕೆ.ಆರ್. ನಗರ |
| 4 | ಕೊಟ್ರೇಶ್ ಬಾಬು ಎಂ.ಬಿ. ಮೈಸೂರು ಜಿಲ್ಲಾಡಳಿತ ಕನ್ನಡ ರಾಜ್ಯೋತ್ಸವ ಪುರಸ್ಕೃತರು - 2023 ಮೈಸೂರು ನಗರ |
| 8 | ಗುರುಸ್ವಾಮಿ ಹೆಚ್ ಸಿ ಸರಗೂರು ತಾ\|\| |
| 12 | ನಟರಾಜು ಸಿ ಆರ್ ಮೈಸೂರು ತಾ\|\| |
| 16 | ನಂಜುಂಡ ಮೈಸೂರು ತಾ\|\| |
| 17 | ನಂದೀಶ್ ಕುಮಾರ್ ಬಿ ಹೆಚ್.ಡಿ. ಕೋಟೆ ತಾ\|\| |
| 19 | ಪುಟ್ಟಣ್ಣ ಮೈಸೂರು ನಗರ |
| 20 | ಪ್ರಕಾಶ್ ಎನ್ ಎಸ್ ನಾಗವಾಲ ಮೈಸೂರು ತಾ\|\| |

| ಕ್ರ.ಸಂ. | ಅಭ್ಯರ್ಥಿಗಳ ಹೆಸರು |
|---|---|
| 23 | ಮಲ್ಲಿಕಾರ್ಜುನ ಟಿ ಪಿರಿಯಾಪಟ್ಟಣ ತಾ\|\| |
| 30 | ಮುಖೇಶ್ ಕುಮಾರ್ ಬಿ ಪಿರಿಯಾಪಟ್ಟಣ ತಾ\|\| |
| 33 | ಮಂಜುನಾಥ ಸ್ವಾಮಿ ಎಂ. ಮೈಸೂರು ನಗರ |
| 34 | ಮಂಜುನಾಥ ಸ್ವಾಮಿ ಸಿ.ಎಸ್ ಪಿರಿಯಾಪಟ್ಟಣ ತಾ\|\| |
| 35 | ಯೋಗೇಶ್ ಕುಮಾರ್ ಜೆ.ಸಿ. ಹೆಚ್.ಡಿ. ಕೋಟೆ ತಾ\|\| |
| 36 | ರಾಜಶೇಖರ ಬಿ.ಬಿ. ಮೈಸೂರು ತಾ\|\| |
| 42 | ಡಾ. ಶಿವಯೋಗ ಪಿರಿಯಾಪಟ್ಟಣ ತಾ\|\| |
| 43 | ಶಿವಲಿಂಗಪ್ಪಶೆಟ್ಟಿ ಹೆಚ್.ಎಸ್. (ಸಿದ್ದೇಶ್) ಮೈಸೂರು ನಗರ |
| 48 | ಷಡಕ್ಷರಿ ಮೈಸೂರು ತಾ\|\| |
| 51 | ಸ್ವಾಮಿ ಎಸ್ ಮೈಸೂರು ತಾ\|\| |

### ಕಾರ್ಯಕಾರಿ ಸಮಿತಿ ಮಹಿಳಾ ಮೀಸಲು

| ಕ್ರ.ಸಂ. | ಅಭ್ಯರ್ಥಿಗಳ ಹೆಸರು |
|---|---|
| 6 | ನಾಗರತ್ನ ಕೆ.ಎಂ ಕೆ.ಆರ್. ನಗರ |
| 8 | ಭಾಗ್ಯಾವತಿ ಬಿ.ಎಂ ಪಿರಿಯಾಪಟ್ಟಣ |
| 11 | ಲಿಖಿತ ಎಸ್. ಮೈಸೂರು ನಗರ |
| 13 | ಶೈಲಾ ನಾಗರಾಜ್ ಮೈಸೂರು ನಗರ |

ಮತದಾನ ನಡೆಯುವ ಸ್ಥಳ : ನಟರಾಜ ಕಾಲೇಜು, ಶಂಕರಮಠ ರಸ್ತೆ, ಮೈಸೂರು

ಮತದಾನ ದಿನಾಂಕ : 21–07–2024 ಭಾನುವಾರ ಬೆಳಿಗ್ಗೆ 8.00 ರಿಂದ ಸಂಜೆ 4.00 ರವರೆಗೆ

ಈ ಮೂಲಕ ತಮ್ಮಲ್ಲಿ ವಿನಂತಿಸಿಕೊಳ್ಳುವುದೇನೆಂದರೆ ಈ ಅಭ್ಯರ್ಥಿಗಳ ಹೆಸರಿನ ಮುಂದೆ ಮುದ್ರೆ ಒತ್ತುವ ಮೂಲಕ ನಮ್ಮ ತಂಡವನ್ನು ಜಯಶೀಲರನ್ನಾಗಿ ಮಾಡುವ ಮೂಲಕ ಮುಂದಿನ 5 ವರ್ಷಗಳ ಕಾಲ ನಮ್ಮ ಸಮುದಾಯದ ಸೇವೆ ಮಾಡಲು ಅನುವು ಮಾಡಿಕೊಡಬೇಕಾಗಿ ತಮ್ಮಲ್ಲಿ ಸವಿನಯ ಪ್ರಾರ್ಥನೆ

ಇಂತಿ ನಿಮ್ಮ : ವರುಣಾ ಮಹೇಶ್

ವಿಶೇಷ ಸೂಚನೆ : ಮತದಾರರು ಮತದಾನ ಮಾಡಲು ಬರುವಾಗ ತಮ್ಮ ಗುರುತಿನ ಚೀಟಿಯನ್ನು ತರಬೇಕು.